KARNATAKA VÁGVIDHÁYINI.

ಕರ್ಣಾಟಕ

ವಾಗ್ವಿಧಾಯಿನಿ

ಟ್ರಾನ್ಸ್ಲೇಟರ್ ಮ. ರಾಮಸ್ವಾಮಿ ಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು.

PRINTED FOR THE DEPARTMENT OF PUBLIC INSTRUCTION, MYSORE.

Sixth Edition, 10,000 Copies.

BANGALORE:
MYSORE GOVERNMENT PRESS.
1886.

050

KARNÁTAKA VÁGVIDHÁYINI.

ಕರ್ಣಾಟಕ

ವಾಗ್ವಿಧಾಯಿನಿ

ಟ್ರಾನ್ಸ್ಲೇಟರ್ ಮ. ರಾಮಸ್ವಾಮಿ ಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು.

PRINTED FOR THE DEPARTMENT OF PUBLIC INSTRUCTION,
MYSORE.

Sixth Edition, 10,000 Copies.

BANGALORE:

MYSORE GOVERENMENT PRESS.

1886.

CONTENTS.

ವಿಷಯ ಸೂಚಿಕೆ.

ೀ

KARNÁTAKA VÁGVIDHÁYINI.

—:o:—

ಕರ್ಣಾಟಕ

ವಾಗ್ವಿಧಾಯಿನಿ.

ಪೀಠಿಕೆ. (INTRODUCTION.)

1. ಕನ್ನಡ ಮಾತು ಎಷ್ಟು ವಿಧವಾಗಿದೆ?
ಹೊಸ ಕನ್ನಡವೆಂತಲೂ ಹಳೇ ಕನ್ನಡವೆಂತಲೂ ಎರಡು ವಿಧವಾಗಿದೆ.

2. ಹೊಸ ಕನ್ನಡವು ಯಾವದು?
ಕನ್ನಡ ದೇಶದಲ್ಲಿ ಈಗಿನ ಜನರು ಮಾತನಾಡುವ ಮಾತು.

3. ಹಳೇ ಕನ್ನಡವು ಯಾವದು?
ಗದ್ಯಪದ್ಯ ಕಾವ್ಯಗಳಲ್ಲಿ ಮಾತ್ರವೇ ಪ್ರಯೋಗಿಸಿ ಇರುವ ಮಾತು.

4. ಇವೆರಡರಲ್ಲಿ ಮೊದಲು ಕಲಿಯಬೇಕಾದ ಮಾತು ಯಾವದು?
ಈಗ ದೇಶದಲ್ಲಿ ಮಾತನಾಡುವ ಮಾತು ತಿಳಿಯದೆ ಗ್ರಂಥಗಳಲ್ಲಿ ಪ್ರಯೋಗಿಸಿ ಇರುವ ಮಾತು ತಿಳಿದರೂ ಪ್ರಯೋಜನವಿಲ್ಲವಾದ್ದರಿಂದ ನಡವಡಿಕೆಯ

ಮಾತಾದ ಹೊಸ ಕನ್ನಡವನ್ನೇ ಮೊದಲು ಕಲಿಯಬೇಕು.

5. ಹೊಸ ಕನ್ನಡ ಲಕ್ಷಣವೆಷ್ಟು ಭಾಗಗಳಾಗಿದೆ?

ಅಕ್ಷರ ಸ್ವರೂಪವನ್ನೂ ಅವುಗಳ ರೂಪ ಭೇದವನ್ನೂ ವಿವರಿಸುವ ಅಕ್ಷರ ಲಕ್ಷಣವೆಂತಲೂ—ಶಬ್ದಗಳನ್ನೂ ಅವುಗಳ ರೂಪನಿಷ್ಪತ್ತಿಯನ್ನೂ ವಿವರಿಸುವ ಶಬ್ದ ಲಕ್ಷಣವೆಂತಲೂ—ತಾತ್ಪರ್ಯ ಕೊಡುವ ಹಾಗೆ ವಾಕ್ಯವನ್ನು ಮಾಡುವ ರೀತಿಗಳನ್ನು ತೋರಿಸುವ ವಾಕ್ಯ ಲಕ್ಷಣವೆಂತಲೂ—ಪದ್ಯ ರೀತಿ ವಿವೇಚನಗಳನ್ನು ಬೋಧಿಸುವ ಛಂದೋ ಲಕ್ಷಣವೆಂತಲೂ—೪ ಭಾಗಗಳುಳ್ಳದ್ದಾಗಿದೆ.

I. ಅಕ್ಷರ ಲಕ್ಷಣ. (ORTHOGRAPHY.)

1. ಸಂಜ್ಞಾ ಪ್ರಕರಣ. (*Letters.*)

6. ಸಂಜ್ಞಾ ಪ್ರಕರಣದಲ್ಲಿ ಏನು ಹೇಳಲ್ಪಡುತ್ತದೆ?

ಅಕ್ಷರಗಳ ಸ್ವರೂಪವೂ ಅವುಗಳ ಭೇದವೂ ಹೇಳಲ್ಪಡುತ್ತದೆ.

7. ಅಕ್ಷರಗಳು ಯಾವವು?

ಮಾತೃ ಭಾಷೆಯಾದ ಸಂಸ್ಕೃತದ ಅಕ್ಷರಮಾಲೆಗೆ ಅನುಸಾರವಾಗಿ ೫೧ ಅಕ್ಷರಗಳು ಇವೆ. ಅವು ಯಾವವೆಂದರೆ—

ಅ	ಆ	ಇ	ಈ	ಉ	ಊ
ಋ	ೠ	ಎ	ಏ	ಐ	
ಒ	ಓ	ಔ	(ಅಂ	ಅಃ)	
ಕ	ಖ	ಗ	ಘ	ಙ	
ಚ	ಛ	ಜ	ಝ	ಞ	
ಟ	ಠ	ಡ	ಢ	ಣ	
ತ	ಥ	ದ	ಧ	ನ	
ಪ	ಫ	ಬ	ಭ	ಮ	
ಯ	ರ	ಲ	ವ		
ಶ	ಷ	ಸ	ಹ		
ಳ	ಕ್ಷ				

8. ಅಕ್ಷರಗಳು ಎಷ್ಟು ವಿಧವು?

ಅಕಾರಮೊದಲು ಔಕಾರದವರಿಗೆ ೧೪ ಅಕ್ಷರಗಳು ಸ್ವರಗಳೆಂತಲೂ—ಕಕಾರಮೊದಲು ಕ್ಷಕಾರದ ವರಿಗೆ ೩೫ ಅಕ್ಷರಗಳು ವ್ಯಂಜನಗಳೆಂತಲೂ—ಅಂ, ಅಃ ಎಂಬವುಗಳಲ್ಲಿರುವ ಅನುಸ್ವಾರ ವಿಸರ್ಗಗಳು* ಅಯೋಗವಾಹಗಳೆಂತಲೂ—೩ ವಿಧವು.

9. ಸ್ವರಗಳು ಎಷ್ಟು ವಿಧವು?

ಅ ಇ ಉ ಋ ಎ ಒ ಎಂಬಿವು ಹ್ರಸ್ವ ಸ್ವರಗಳೆಂತಲೂ—ಆ ಈ ಊ ೠ ಏ ಐ ಓ ಔ ಎಂಬಿವು ದೀರ್ಘಸ್ವರಗಳೆಂತಲೂ—ಎರಡು ವಿಧವು.

10. ವ್ಯಂಜನಗಳು ಎಷ್ಟು ವಿಧವು?

ಕಕಾರ ಮೊದಲು ಮಕಾರದವರಿಗೆ ಇರುವ ೨೫ ಅಕ್ಷರಗಳು ವರ್ಗೀಯ ವ್ಯಂಜನಗಳೆಂತಲೂ—ಯಕಾರ ಮೊದಲು ಕ್ಷಕಾರದವರಿಗೆ ಇರುವ ೧೦ ಅ

* ಕೆಲವರು ಯೋಗವಾಹಗಳೆನ್ನುತ್ತಾರೆ, ಪಾಣಿನೀಯಾದಿ ವ್ಯಾಕರಣ ಗ್ರಂಥಗಳನ್ನನುಸರಿಸಿ ಅಯೋಗವಾಹಗಳೆಂದು ಸಿದ್ಧಾಂತಿಸಲಾಯಿತು. ಇದು ಪ್ರಾಚೀನ ಗ್ರಂಥಗಳಲ್ಲಿಯೂ ದ್ವಿವಿಧವೆಂದು ಹೇಳಿ ಇದೆ

ಕ್ಷರಗಳು ಅವರ್ಗೀಯ ವ್ಯಂಜನಗಳೆಂತಲೂ—೨ ವಿಧವು.

11. ವರ್ಗೀಯಗಳಲ್ಲಿ ಎಷ್ಟು ಭೇದಗಳು ?

ಕ	ಖ	ಗ	ಘ	ಙ	ಇದು ಕವರ್ಗ.
ಚ	ಛ	ಜ	ಝ	ಞ	,, ಚವರ್ಗ.
ಟ	ಠ	ಡ	ಢ	ಣ	,, ಟವರ್ಗ.
ತ	ಥ	ದ	ಧ	ನ	,, ತವರ್ಗ.
ಪ	ಫ	ಬ	ಭ	ಮ	,, ಪವರ್ಗ.

ಎಂಬ ೫ ಭೇದಗಳು.

12. ಒಂದೊಂದು ವರ್ಗದ ಅಕ್ಷರಗಳು ಎಷ್ಟು ವಿಧವು ?

ಪ್ರತಿ ವರ್ಗದಲ್ಲಿಯೂ ಪ್ರಥಮ ದ್ವಿತೀಯಾಕ್ಷರಗಳು ಪರುಷಗಳೆಂತಲೂ—ತೃತೀಯ ಚತುರ್ಥಾಕ್ಷರಗಳು ಸರಳಗಳೆಂತಲೂ—ಪಂಚಮಾಕ್ಷರವು ಅನುನಾಸಿಕವೆಂತಲೂ—೩ ವಿಧವು.

13. ಪರುಷ ಸರಳಗಳು ಎಷ್ಟು ವಿಧವು ?

ಪರುಷ ಸರಳಗಳಲ್ಲಿ ಮೊದಲನೇ ಅಕ್ಷರವು ಅಲ್ಪ ಪ್ರಾಣವೆಂತಲೂ—ಎರಡನೇ ಅಕ್ಷರವು ಮಹಾ ಪ್ರಾಣವೆಂತಲೂ—ಹೇಳುವದುಂಟು.

14. ಅವರ್ಗೀಯಗಳೆಷ್ಟು ವಿಧವು ?

ಯ ರ ಲ ವ ಳ ಎಂಬಿವು ಮಧ್ಯಗಳು ಅಥವಾ ಅಂತಸ್ಥಗಳೆಂತಲೂ—ಶ ಷ ಸ ಹ ಎಂಬಿವು ಊಷ್ಮಗಳೆಂತಲೂ—೨ ವಿಧವು.

15. ಅಯೋಗವಾಹಗಳ ಸ್ವರೂಪವೂ ಅವುಗಳ ಹೆಸರೂ ಏನು ?

ಅಂ ಎಂಬಲ್ಲಿ ಅಕಾರದ ಮೇಲಿನ ಸೊನ್ನೆಗೆ ಬಿಂದು ಅಥವಾ ಅನುಸ್ವಾರವೆಂತಲೂ—ಅಃ ಎಂಬಲ್ಲಿ ಅಕಾರದ

ಮೇಲಿರುವ ಎರಡು ಸೊನ್ನೆಗೆ ವಿಸರ್ಗವೆಂತಲೂ— ಹೆಸರು.

16. ಅಕ್ಷರಗಳಲ್ಲಿ ಒಂದಕ್ಕೊಂದಕ್ಕೆ ಹೆಸರೇನು?
ಅಕ್ಷರಗಳೊಳಗೆ ಒಂದಕ್ಕೊಂದಕ್ಕೆ ಸವರ್ಣಗಳೆಂದು ಹೆಸರು.

17. ಯಾವ ಯಾವ ಅಕ್ಷರಕ್ಕೆ ಯಾವ ಯಾವದು ಸವರ್ಣ?
ಅ ಆ ಇ ಈ ಉ ಊ ಋ ೠ ಎ ಏ ಒ ಓ ಎಂಬಿವುಗಳಲ್ಲಿ ಎರಡು ಎರಡಾಗಿ ತೆಕ್ಕೊಂಡರೆ ಅವುಗಳೊಂದಕ್ಕೊಂದಕ್ಕೆ ಸವರ್ಣಗಳು—ಮತ್ತು ವರ್ಗಾಕ್ಷರಗಳೆಲ್ಲಾ ಆಯಾ ವರ್ಗದಲ್ಲಿ ಒಂದಕ್ಕೊಂದು ಸವರ್ಣಗಳೇ, ಆದರೆ ಏ ಓ ಎಂಬಿವನ್ನು ವಕ್ರಗಳೆಂತಲೂ ಐ ಔ ಎಂಬಿವನ್ನು ವಕ್ರತಮಗಳೆಂತಲೂ ಹೇಳುವದುಂಟು.

18. ಮುಂಚೆ ಹೇಳಿದ ೫೦ ಅಕ್ಷರಗಳು ಹುಟ್ಟುವ ಸ್ಥಾನಗಳೂ ಅದರಿಂದ ಬಂದ ಹೆಸರುಗಳೂ ಯಾವವು?
ಕಂಠ್ಯಗಳು ಎಂಬ ಅ ಹ ಕವರ್ಗ ವಿಸರ್ಗಗಳು ಕಂಠದಲ್ಲಿಯೂ,
ತಾಲವ್ಯಗಳು ಎಂಬ ಇ ಚವರ್ಗ ಯ ಶ ಗಳು ತಾಲುಗಳಲ್ಲಿಯೂ,
ಮೂರ್ಧನ್ಯಗಳು ಎಂಬ ಋ ರ ಷ ಟವರ್ಗಗಳು ಮೂರ್ಧದಲ್ಲಿಯೂ,
ದಂತ್ಯಗಳು ಎಂಬ ಌ ಲ ಸ ತವರ್ಗಗಳು ದಂತಗಳಲ್ಲಿಯೂ,
ಓಷ್ಠ್ಯಗಳು ಎಂಬ ಉ ಪವರ್ಗಗಳು ಓಷ್ಠ ಅಥವಾ ತುಟಿಗಳಲ್ಲಿಯೂ,
ಕಂಠತಾಲವ್ಯಗಳು ಎಂಬ ಎ ಏ ಐ ಕಾರಗಳು ಕಂಠತಾಲುಗಳಲ್ಲಿಯೂ,

ಕಂಠೋಷ್ಠ್ಯಗಳು ಎಂಬ ಒ ಓ ಔ ಕಾರಗಳು ಕಂಠೋಷ್ಠಗಳಲ್ಲಿಯೂ,

ದಂತೋಷ್ಠ್ಯ ಎಂಬ ವಕಾರವು ದಂತೋಷ್ಠಗಳಲ್ಲಿಯೂ, ಹುಟ್ಟುತ್ತವೆ.

ಆದರೆ ಅನುಸ್ವಾರವೂ ವರ್ಗೀಯ ಪಂಚಮಾಕ್ಷರಗಳೂ ನಾಸಿಕಾ ಸಹಾಯದಿಂದ ಹುಟ್ಟುತ್ತವೆಯಾದ್ದರಿಂದ ಇವುಗಳಲ್ಲಿ ಮೊದಲನೇದಕ್ಕೆ ನಾಸಿಕ್ಯವೆಂತಲೂ ನಿಂತವುಗಳಿಗೆ ಅನುನಾಸಿಕಗಳೆಂತಲೂ ಹೆಸರು.

19. ಮೇಲೆ ಹೇಳಿದ ಎಲ್ಲಾ ಅಕ್ಷರಗಳಿಗೂ ಕನ್ನಡದಲ್ಲಿ ಪ್ರಯೋಗ ಉಂಟೋ?

ಋ ೠ ಶ ಷ ವಿಸರ್ಗಗಳಿಗೆ ಕನ್ನಡದಲ್ಲಿ ಪ್ರಯೋಗಿಸುವ ಸಂಸ್ಕೃತದ ಮಾತುಗಳಲ್ಲಿಯೂ—ಎ ಒ ಎಂಬಿವುಗಳಿಗೆ ಕನ್ನಡದ ಮಾತುಗಳಲ್ಲಿಯೂ ಪ್ರಯೋಗ ಉಂಟು. ಆದರೆ ಕನ್ನಡ ಮಾತುಗಳಲ್ಲಿ ಮಾತ್ರ ಪ್ರಯೋಗಿಸುವ ಅಕ್ಷರಗಳಿಗೆ ದೇಶ್ಯಾಕ್ಷರಗಳೆಂದು ಹೆಸರು. ಮತ್ತು ರೂಢಿಯಿಂದ ಶವರ್ಣವನ್ನು ಕನ್ನಡದಲ್ಲಿ ಪ್ರಯೋಗಿಸುತ್ತಾರೆ.

20. ಸ್ವರಗಳಿಗೂ ವ್ಯಂಜನಗಳಿಗೂ ಸಂಬಂಧವೇನು?

ಎಲ್ಲಾ ವ್ಯಂಜನಗಳ ಮೇಲೆಯೂ ಮೊದಲನೇ ಸ್ವರವಾದ ಅಕಾರವು ಸೇರಿಸಲ್ಪಟ್ಟಿದೆ. ಹಾಗೆ ಸ್ವರವಿಲ್ಲದೆ ಇರುವ ವ್ಯಂಜನಕ್ಕೆ ಅರ್ಧಾಕ್ಷರವೆಂದು ಹೆಸರು. ಅದರ ಸ್ವರೂಪವು ಈ ಕೆಳಗೆ ಬರೆಯಲ್ಪಟ್ಟಿದೆ.

ಕ್	ಚ್	ಟ್	ತ್	ಪ್
ಯ್	ಲ್	ವ್	ಸ್	ಳ್

ಹೀಗೆಯೇ ಎಲ್ಲಾ ವ್ಯಂಜನಗಳಿಗೂ ತಿಳಿಯುವದು.

21. ಸ್ವರಗಳನ್ನು ವ್ಯಂಜನಕ್ಕೂ ವ್ಯಂಜನವನ್ನು ವ್ಯಂಜನಕ್ಕೂ ಶೇರಿಸಿದರೆ ಅವುಗಳ ಹೆಸರೇನು?

ಸ್ವರವನ್ನು ವ್ಯಂಜನಕ್ಕೆ ಶೇರಿಸಿದರೆ ಗುಣಿತಾಕ್ಷರವೆಂತಲೂ—ವ್ಯಂಜನವನ್ನು ವ್ಯಂಜನಕ್ಕೆ ಶೇರಿಸಿದರೆ ಸಂಯುಕ್ತಾಕ್ಷರವೆಂತಲೂ—ಹೆಸರು.

22. ಗುಣಿತಾಕ್ಷರಗಳ ರೂಪವು ಹ್ಯಾಗೆ?

ವ್ಯಂಜನಗಳಿಗೆ ಸ್ವರಗಳನ್ನು ಸುಲಭವಾಗಿ ಕೂಡಿಸುವ ಹಾಗೆ ಎಲ್ಲಾ ಸ್ವರಗಳಿಗೂ ಪ್ರತ್ಯೇಕವಾದ ಸಂಜ್ಞಾರೂಪಗಳೂ ಹೆಸರುಗಳೂ ಉಂಟು. ಅವು ಯಾವವೆಂದರೆ—

ಸ್ವರಗಳು.		ಸಂಜ್ಞಾರೂಪಗಳು.		ಹೆಸರುಗಳು.
ಅ	—	⌒	—	ತಲೆಕಟ್ಟು
ಆ	—	ಾ	—	ದೀರ್ಘವು
ಇ	—	ಿ	—	ಗುಡಿ
ಈ	—	ೀ	—	ಗುಡಿ ದೀರ್ಘವು
ಉ	—	ು	—	ಕೊಂಬು
ಊ	—	ೂ	—	ಕೊಂಬು ದೀರ್ಘವು
ಋ	—	ೃ	—	ಸುಡಿ
ೠ	—	ೄ	—	ಸುಡಿ ದೀರ್ಘವು
ಎ		ೆ	—	ಎತ್ವವು
ಏ	—	ೇ	—	ಏತ್ವವು
ಐ	—	ೈ	—	ಐತ್ವವು
ಒ	—	ೊ	—	ಒತ್ವವು
ಓ	—	ೋ	—	ಓತ್ವವು
ಔ	—	ೌ	—	ಔತ್ವವು

ಉದಾಹರಣೆ

ಕ್ ಕ ಕಾ ಕಿ ಕೀ ಕು ಕೂ ಕೃ ಕೄ
ಕೆ ಕೇ ಕೈ ಕೊ ಕೋ ಕೌ
ಖ್ ಖ ಖಾ ಖಿ ಖೀ ಖು ಖೂ ಖೃ ಖೄ
ಖೆ ಖೇ ಖೈ ಖೊ ಖೋ ಖೌ
ಗ್ ಗ ಗಾ ಗಿ ಗೀ ಗು ಗೂ ಗೃ ಗೄ
ಗೆ ಗೇ ಗೈ ಗೊ ಗೋ ಗೌ

ಎಲ್ಲಾ ವ್ಯಂಜನಗಳಿಗೂ ಹೀಗೆಯೇ ಊಹಿಸುವದು.

23. ಸಂಯುಕ್ತಾಕ್ಷರಗಳ ರೂಪವು ಹ್ಯಾಗೆ?

ಎರಡು ವ್ಯಂಜನಗಳು ಕೂಡಿದರೆ ಒಂದರ ಕೆಳಗೆ ಮತ್ತೊಂದನ್ನು ಸೇರಿಸಿ ಬರೆಯುವದರಿಂದ ಸಂಯುಕ್ತಾಕ್ಷರಗಳೆನ್ನಿಸುವವು. ಆದರೆ ಕೆಳಗೆ ಬರೆಯುವ ವ್ಯಂಜನಗಳಿಗೆ ಸಾಧಾರಣವಾಗಿ ತಲೆಕಟ್ಟು ಇರುವದಿಲ್ಲ.

ಉದಾಹರಣೆ.

ಕ್ಕ ಗ್ಗ ಘ್ಘ ಚ್ಚ ಛ್ಛ ಝ್ಝ ಟ್ಟ ತ್ತ
ಡ್ಡ ಢ್ಢ ಥ್ಥ ದ್ದ ಧ್ಧ ಪ್ಪ ಫ್ಫ ಭ್ಭ ವ್ವ
ಶ್ಶ ಷ್ಷ ಸ್ಸ ಹ್ಹ ಳ್ಳ

ಕೆಲವು ವ್ಯಂಜನಗಳನ್ನು ಕೆಳಗೆ ಬರೆಯುವಾಗ ಅವುಗಳ ರೂಪವು ವ್ಯತ್ಯಾಸವಾಗದೆ ಮುಂಚಿನ ಹಾಗೆಯೇ ಇರುತ್ತದೆ.

ಉದಾಹರಣೆ.

ಖ್ಖ ಙ್ಙ ಜ್ಜ ಞ್ಞ ಣ್ಣ ಬ್ಬ

ಮತ್ತು ಕೆಲವು ವ್ಯಂಜನಗಳನ್ನು ಕೆಳಗೆ ಬರೆಯುವಾಗ ಅವು ಬಹಳ ವ್ಯತ್ಯಾಸವಾಗುತ್ತವೆ.

ಉದಾಹರಣೆ.

ತ್ತ ನ್ನ ಮ್ಮ ಯ್ಯ ರ್ರ ಲ್ಲ

ಇದಲ್ಲದೆ ರ ಎಂಬ ವ್ಯಂಜನದ ಕೆಳಗೆ ವ್ಯಂಜನವನ್ನು ಬರೆಯುವದಕ್ಕೆ ಪ್ರತಿಯಾಗಿ ಕೆಳಗೆ ಬರೆಯಬೇಕಾದ ವ್ಯಂಜನದ ಪಾರ್ಶ್ವದಲ್ಲಿ (ೱ) ಈ ರೂಪವನ್ನು ಬರೆಯುವದುಂಟು ಇದಕ್ಕೆ ಅರ್ಧ ರೇಫವೆಂದು ಹೆಸರು.

ಉದಾಹರಣೆ.

ಶೌರ್ಯ=ಶೌರ‍್ಯ. ಆರ್ಯ=ಆರ‍್ಯ.
ಅರ್ಕ=ಅರ‍್ಕ. ಭಾರ್ಗವ=ಭಾರ‍್ಗವ.

ಸಂಯುಕ್ತಾಕ್ಷರಗಳ ವಿವಿಧ ಉದಾಹರಣೆಗಳು.

ಕ್ರ ಗ್ಲ ಟ್ಕ ಪ್ಲ ದ್ಯ ಷ್ಮ ಳ್ತ ದ್ವ ಸ್ವ ಧ್ತ
ಷ್ತ ಶ್ಛ ಸ್ಫ ಜ್ಞ ಢ್ಜ ತ್ಯ ಕ್ಲ ಪ್ಸ ಸ್ತ

ಕೆಲವು ವ್ಯಂಜನಗಳಿಗೆ ಎರಡು ಮೂರು ಅಕ್ಷರಗಳನ್ನು ಸೇರಿಸಬಹುದು.

ಉದಾಹರಣೆ.

ಸ್ತ್ರ್ಯ ಕ್ಷ್ತ್ರ ಟ್ಸ್ರ ಢ್ಭ್ರ ತ್ಪ್ರ ಡ್ವ್ರ ಕ್ತ್ರ

---

2. ಸಂಧಿ ಪ್ರಕರಣ, (*Euphony.*)

24. ಸಂಧಿ ಪ್ರಕರಣದಲ್ಲಿ ಏನು ಹೇಳಲ್ಪಡುತ್ತದೆ?

ಸಂಧಿ ಕಾರ್ಯವೂ ಪ್ರಕೃತಿ ಭಾವವೂ ಹೇಳಲ್ಪಡುತ್ತದೆ.

25. ಸಂಧಿಯೆಂದರೇನು?

ಎರಡಕ್ಷರಗಳನ್ನೆ ಬಿಡದೆ ಕೂಡಿಸಿ ಉಚ್ಚರಿಸುವದು.

26. ಸಂಧಿ ಎಷ್ಟು ವಿಧವು?

ಸಂಸ್ಕೃತ ಸ್ವರ ಸಂಧಿ ವ್ಯಂಜನ ಸಂಧಿಗಳೆಂತಲೂ ಕನಡ ಸ್ವರ ಸಂಧಿ ವ್ಯಂಜನ ಸಂಧಿಗಳೆಂತಲೂ ೪ ವಿಧವು.

27. ಸಂಸ್ಕೃತ ಸ್ವರ ಸಂಧಿಯಲ್ಲಿ ಎಷ್ಟು ಭೇದಗಳು?

ಸವರ್ಣ ದೀರ್ಘ—ಎಣ್ಣು—ಗುಣ—ವೃದ್ಧಿ—ಎಂಬ ೪ ಭೇದಗಳು.

28. ಸವರ್ಣ ದೀರ್ಘವು ಹ್ಯಾಗೆ?

ಸವರ್ಣ ಸ್ವರಗಳು ಒಂದಕ್ಕೊಂದು ಪರವಾದರೆ ಎರಡೂ ಕಲಿತು ಒಂದು ದೀರ್ಘವಾಗುತ್ತದೆ. ಪರವಾಗುವದೆಂದರೆ ಕೂಡ್ಲೇಬಂದರೆ ಯೆಂಬರ್ಥ.

ವಿಧಿಗಳು.	ಉದಾಹರಣೆಗಳು.
ಅ ಅ ಸೇರಿದರೆ ಆ ಆಗುತ್ತದೆ.	ಅಕ್ಷರ+ಅಭ್ಯಾಸ=ಅಕ್ಷರಾಭ್ಯಾಸ
ಅ ಆ ,, ,, ,, ,,	ಪರಿಶುದ್ಧ+ಆತ್ಮ=ಪರಿಶುದ್ಧಾತ್ಮ.
ಆ ಆ ,, ,, ,, ,,	ಗಂಗಾ+ಆತ್ಮಜ=ಗಂಗಾತ್ಮಜ.
ಇ ಇ ಸೇರಿದರೆ ಈ ಆಗುತ್ತದೆ.	ಕಪಿ+ಇಂದ್ರ=ಕಪೀಂದ್ರ.
ಇ ಈ ,, ,, ,, ,,	ಗಿರಿ+ಈಶ=ಗಿರೀಶ.
ಈ ಈ ,, ,, ,, ,,	ಲಕ್ಷ್ಮೀ+ಈಶ=ಲಕ್ಷ್ಮೀಶ.
ಉ ಉ ಸೇರಿದರೆ ಊ ಆಗುತ್ತದೆ	ವಿಷ್ಣು+ಉತ್ಸವ=ವಿಷ್ಣೂತ್ಸವ.
ಋ ಋ ಸೇರಿದರೆ ೠ ಆಗುತ್ತದೆ.	ಕರ್ತೃ+ಋದ್ಧಿ=ಕರ್ತೄದ್ಧಿ.

29. ಯಣ್ಣೆಂಬ ಸಂಧಿಯು ಹ್ಯಾಗೆ?

ಇ ಉ ಋ ಕಾರಗಳಿಗೆ ಅಸವರ್ಣ ಸ್ವರಗಳು ಪರವಾದರೆ ಇಕಾರಕ್ಕೆ ಯಕಾರವೂ— ಉಕಾರಕ್ಕೆ ವಕಾರವೂ—ಋಕಾರಕ್ಕೆ ರ ವತ್ತೂ— ಬರುತ್ತವೆ.

ಉದಾಹರಣೆ.

ಹರಿ + ಅನುಭವ = ಹರ್ಯನುಭವ	ಮಧು + ಅರಿ = ಮಧ್ವರಿ
ಗತಿ + ಅಂತರ = ಗತ್ಯಂತರ	ಗುರು + ಅಂತರ = ಗುರ್ವಂತರ
ಅತಿ + ಉಕ್ತ = ಅತ್ಯುಕ್ತ	ಭ್ರಾತೃ + ಅಂಶ = ಭ್ರಾತ್ರಂಶ

30. ಗುಣವೆಂಬ ಸಂಧಿಯು ಹ್ಯಾಗೆ ?

ಅಕಾರಕ್ಕಾಗಲಿ ಆಕಾರಕ್ಕಾಗಲಿ ಇ ಈ ಕಾರಗಳು ಪರವಾದರೆ ಏಕಾರವೂ—ಉ ಊಕಾರಗಳು ಪರವಾದರೆ ಓ ಕಾರವೂ—ಋ ಕಾರ ಪರವಾದರೆ ಅರ್ ಕಾರವೂ, ಆದೇಶವಾಗಿ ಬರುತ್ತವೆ.

ಉದಾಹರಣೆ.

ದೇವ + ಇಂದ್ರ = ದೇವೇಂದ್ರ	ರಮಾ + ಈಶ = ರಮೇಶ
ಗಂಗಾ + ಉದಕ = ಗಂಗೋದಕ	ಗ್ರೀಷ್ಮ + ಊಷ್ಮ = ಗ್ರೀಷ್ಮೋಷ್ಮ
ದೇವ + ಋಷಿ = ದೇವರ್ಷಿ	ವರ್ಷಾ + ಋತು = ವರ್ಷರ್ತು

31. ವೃದ್ಧಿ ಎಂಬ ಸಂಧಿಯು ಹ್ಯಾಗೆ ?

ಅ ಆ ಕಾರಗಳಿಗೆ ಏ ಐ ಕಾರಗಳು ಪರವಾದರೆ ಐ ಕಾರವೂ—ಓ ಔಕಾರಗಳು ಪರವಾದರೆ ಔಕಾರವೂ—ಆದೇಶವಾಗಿ ಬರುತ್ತವೆ.

ಉದಾಹರಣೆ.

ವಿದ್ಯಾ + ಔತ್ಕಂಠ್ಯ = ವಿದ್ಯೌತ್ಕಂಠ್ಯ.
ವನ + ಓಷಧಿ = ವನೌಷಧಿ.
ಅಧಿಕ + ಔದಾರ್ಯ = ಅಧಿಕೌದಾರ್ಯ
ದೇವತಾ + ಏಕತ್ವ = ದೇವತೈಕತ್ವ
ಬ್ರಹ್ಮ + ಐಕ್ಯ = ಬ್ರಹ್ಮೈಕ್ಯ
ಅಶ್ವ + ಓಘ = ಅಶ್ವೌಘ

32. ಸಂಸ್ಕೃತ ವ್ಯಂಜನ ಸಂಧಿ ಎಷ್ಟು ವಿಧವಾಗಿದೆ ?

ಅದು ಅನೇಕ ವಿಧವಾಗಿರುವದರಿಂದ ಅವುಗಳನ್ನೆಲ್ಲಾ ಪ್ರತ್ಯೇಕ ವಿಧಿಗಳೊಡನೆ ವಿವರಿಸಲವಶ್ಯವಿಲ್ಲದೆ

ಕನ್ನಡದಲ್ಲಿ ಮುಖ್ಯವಾಗಿ ಪ್ರಯೋಗಿಸುವ ಕೆಲವು ವಿಧಿಗಳನ್ನು ಮುಂದೆ ಉದಾಹರಣೆಯ ಮೂಲಕವಾಗಿ ವಿವರಿಸಿ ಇದೆ.

ಹೆಸರುಗಳು.		ಉದಾಹರಣೆಗಳು.
ಶ್ಚುತ್ವ ಸಂಧಿ	..	ಪಯಸ್ + ಶಯನ = ಪಯಶ್ಶಯನ
		ಪಯಸ್ + ಚರ = ಪಯಶ್ಚರ
		ತತ್ + ಚಿಂತೆ = ತಚ್ಚಿಂತೆ
ಷ್ಟುತ್ವ ಸಂಧಿ	..	ತಪಸ್ + ಷಡ್ಭಾಗ = ತಪಷ್ಷಡ್ಭಾಗ
		ಅಯಸ್ + ಟಂಕ = ಅಯಷ್ಟಂಕ
		ತತ + ಟೀಕೆ = ತಟ್ಟೀಕೆ
ಜಶ್ತ್ವಸಂಧಿ	..	ವಾಕ್ + ಇಂದ್ರಿಯ = ವಾಗಿಂದ್ರಿಯ
		ಭವತ್ + ಆಶ್ರಿತ = ಭವದಾಶ್ರಿತ
		ಅಪ್ + ಜಾತ = ಅಬ್ಜಾತ
ಛತ್ವ ಸಂಧಿ	..	ತಿರ್ಯಕ್ + ಶರೀರ = ತಿರ್ಯಕ್ಛರೀರ
		ತತಃ + ಶಿವ = ತಚ್ಛಿವ
		ಭಗವತ್ + ಶ್ಲೋಕ = ಭಗವಚ್ಛ್ಲೋಕ
ಪೂರ್ವಸವರ್ಣಸಂಧಿ		ಉತ್ + ಸ್ಥಾನ = ಉತ್ಥಾನ
		ಜ್ವಲತ + ಹೀರ = ಜ್ವಲದ್ಧೀರ
		ತತ್ + ಹಿರಣ್ಯ = ತದ್ಧಿರಣ್ಯ
ಅನುನಾಸಿಕಸಂಧಿ	..	ಷಟ್ + ನಕ್ಷತ್ರ = ಷಣ್ಣಕ್ಷತ್ರ
		ಚಿತ್ + ಮಾತ್ರ = ಚಿನ್ಮಾತ್ರ
		ಅಪ್ + ಮಯ = ಅಮ್ಮಯ
ವಿಸರ್ಗಸಂಧಿ	..	ಪ್ರಾತರ್ + ಕಾಲ = ಪ್ರಾತಃಕಾಲ
		ಪುನರ್ + ಪುನಃ = ಪುನಃಪುನಃ

33. ಕನ್ನಡ ಸಂಧಿಯಲ್ಲಿ ಬರುವ ಮುಖ್ಯ ಸಂಕೇತಗಳು ಯಾವವು ?

ಸಂಧಿ ಮಾಡುವದರಲ್ಲಿ ಮುಂಚೆ ಇದ್ದಕ್ಷರವು ಕಾಣದೆ ಹೋದರೆ ಲೋಪ ಸಂಧಿಯೆಂತಲೂ ,

ಮುಂಚೆ ಇದ್ದಕ್ಷರಕ್ಕೆ ಬದಲಾಗಿ ಬೇರೊಂದು ಅಕ್ಷರವು ಬಂದರೆ ಆದೇಶವೆಂತಲೂ,

ಮುಂಚಿನ ಅಕ್ಷರಗಳಲ್ಲದೆ ನಡುವೆ ಮತ್ತೊಂದು ಹೊಸ ಅಕ್ಷರವು ಬಂದರೆ ಆಗಮವೆಂತಲೂ,

೩ ಸಂಕೇತಗಳು.

ಉದಾಹರಣೆ.

ಲೋಪಕ್ಕೆ—ಮಾವಿನ+ಎಲೆ=ಮಾವಿನೆಲೆ

ಆದೇಶಕ್ಕೆ—ಮರ+ಕಾಲು=ಮರಗಾಲು.

ಆಗಮಕ್ಕೆ—ಹೊಸ+ನು=ಹೊಸಬನು

34. ಕನ್ನಡ ಸ್ವರ ಸಂಧಿಯು ಹ್ಯಾಗೆ?

ಸ್ವರಕ್ಕೆ ಸ್ವರಪರವಾದರೆ ಪೂರ್ವಸ್ವರಕ್ಕೆ ಲೋಪ ಬರುತ್ತದೆ.

ಉದಾಹರಣೆ.

ನನ್ನ+ಅರಸನು=ನನ್ನರಸನು	ಊರಿನ+ಒಳಗೆ=ಊರಿನೊಳಗೆ
ನಿನ್ನ+ಆಳ್ದವನು=ನಿನ್ನಾಳ್ದವನು	ನೆಂಟರ+ಒಳಗೆ=ನೆಂಟರೊಳಗೆ

ಇದಕ್ಕೆ ಪ್ರತಿಷೇಧಗಳು.

ಹೊಸ+ಆನೆ=ಹೊಸಆನೆ	ಹೊರ+ಅಡಿ=ಹೊರಅಡಿ

35. ಅ ಇ ಈ ಎ ಏ ಐ ಕಾರಗಳಿಗೆ ಸ್ವರ ಪರವಾದರೇನು ಬರುತ್ತದೆ?

ಇವುಗಳಿಗೆ ಸ್ವರಪರವಾದರೆ ನಡುವೆ ಯ ಕಾರಾಗಮವು ಬರುತ್ತದೆ. ಇದು ನಿಯಮಪೂರ್ವಕವಾಗಿ ಹೇಳಿ ಇದೆ.

ಉದಾಹರಣೆ.

ಆ+ಆಟ=ಆಯಾಟ	ಮನೆ+ಅಲ್ಲಿ=ಮನೆಯಲ್ಲಿ
ಶ್ರೀ+ಎಡೆ=ಶ್ರೀಯೆಡೆ	ಸಭೆ+ಒಳಗೆ=ಸಭೆಯೊಳಗೆ

ಇದಕ್ಕೆ ಪ್ರತಿಷೇಧಗಳು.

ಹೊರಗೆ+ಇದೆ=ಹೊರಗಿದೆ	ಆ+ಊರು=ಆವೂರು
ಮನೆಯಲ್ಲಿ+ಇದೆ=ಮನೆಯಲ್ಲಿದೆ	ಈ+ಒಲೆ=ಈವೊಲೆ

36. ಉ ಊ ಋ ೠ ಒ ಓ ಔ ಕಾರಗಳಿಗೆ ಸ್ವರ ಪರವಾದರೇನು ಬರುತ್ತದೆ?

ಇವುಗಳಿಗೆ ಸ್ವರಪರವಾದರೆ ವ ಕಾರಾಗಮ ಬರುತ್ತದೆ.

ಉದಾಹರಣೆ.

ಗುರು+ಅನ್ನು=ಗುರುವನ್ನು.	ಪಿತೃ+ಇನ=ಪಿತೃವಿನ.
ಹೂ+ಇಂದ=ಹೂವಿಂದ.	ಗೋ+ಇಗೆ=ಗೋವಿಗೆ.

ಇದಕ್ಕೆ ಪ್ರತಿಷೇಧಗಳು.

ಕೂಸು+ಅನ್ನು=ಕೂಸನ್ನು	ಇದ್ದನು+ಇಲ್ಲಿ=ಇದ್ದನಿಲ್ಲಿ
ರಾಮನು+ಎಲ್ಲಿ=ರಾಮನೆಲ್ಲಿ	ಮರುಳು+ಎಂದು=ಮರುಳೆಂದು

37. ಸ್ವರ ಪರವಾದಾಗ ಎಲ್ಲಾ ಸ್ವರಗಳಿಗೂ ಲೋಪ ಬರುವದುಂಟೋ?

ಮನುಷ್ಯರ ಹೆಸರುಗಳ ತುದಿಯಲ್ಲಿನ ಸ್ವರಗಳಿಗೆ ಅಮ್ಮ—ಅಯ್ಯ—ಅಪ್ಪ—ಅವ್ವ ಎಂಬವುಗಳು ಪರವಾದಾಗಲೂ ದ್ವಿರುಕ್ತಿಯಲ್ಲಿಯೂ ಸಹ ಲೋಪ ಬರುತ್ತದೆ. ದ್ವಿರುಕ್ತಿ ಅಂದರೆ ಒಂದು ಮಾತನ್ನು ಎರಡು ಸಾರಿ ಹೇಳುವದು.

ಉದಾಹರಣೆ.

ಗೌರಿ+ಅಮ್ಮ=ಗೌರಮ್ಮ	ಕೃಷ್ಣ+ಅಪ್ಪ=ಕೃಷ್ಣಪ್ಪ
ರಾಮ+ಅಯ್ಯ=ರಾಮಯ್ಯ	ಚಿಕ್ಕ+ಅವ್ವ=ಚಿಕ್ಕವ್ವ
ಸುಬ್ಬ+ಅಣ್ಣ=ಸುಬ್ಬಣ್ಣ	ಎಲ್ಲಿ+ಎಲ್ಲಿ=ಎಲ್ಲೆಲ್ಲಿ

38. ಲೋಪಾಗಮಗಳು ಎರಡೂ ಬರುವದುಂಟೋ ?

ಕೆಲವು ಸಮಯಗಳಲ್ಲಿ ಎರಡೂ ಬರುವದುಂಟು.

ಉದಾಹರಣೆ.

ಸುಮ್ಮನೆ+ಇದ್ದನು=ಸುಮ್ಮನಿದ್ದನು=ಸುಮ್ಮನೆ ಯಿದ್ದನು

ಬೆಳ್ಳಗೆ+ಇತ್ತು=ಬೆಳ್ಳಗಿತ್ತು=ಬೆಳ್ಳಗೆಯಿತ್ತು

ತಣ್ಣಗೆ+ಇದೆ=ತಣ್ಣಗಿದೆ=ತಣ್ಣಗೆಯಿದೆ

39. ಸಂಧಿಯಲ್ಲಿ ಯಕಾರ ವಕಾರಗಳಲ್ಲದೆ ಬೇರೆ ಯಾವದು ಬರುತ್ತದೆ?

ಬಾ ತಾ ಎಂಬವುಗಳಿಗೆ ಸ್ವರ ಪರವಾದಾಗ ವಿಕಲ್ಪವಾಗಿ ರ ವರ್ಣಾಗಮ ಬರುವದುಂಟು.

ಉದಾಹರಣೆ.

ಬಾ+ಅಪ್ಪಾ=ಬಾರಪ್ಪಾ	ತಾ+ಅಮ್ಮಾ=ತಾರಮ್ಮಾ
ಬಾ+ಓ=ಬಾರೋ	ತಾ+ಓ=ತಾರೋ

40. ಕನ್ನಡ ವ್ಯಂಜನ ಸಂಧಿಯು ಹ್ಯಾಗೆ ?

ವ್ಯಂಜನಗಳನ್ನು ಸಂಧಿ ಮಾಡುವಲ್ಲಿ ಕ ತ ಪ ಗಳಿಗೆ ಕ್ರಮವಾಗಿ ಗ ದ ಬ ಗಳು ಆದೇಶವಾಗುತ್ತವೆ.

ಉದಾಹರಣೆ.

ಮರ+ಕಾಲು=ಮರಗಾಲು	ಹುಲಿ+ತೊಗಲು=ಹುಲಿದೊಗಲು
ತಳಿರು+ಕದಿರು=ತಳಿರ್ಗದಿರು	ಬಿಳೀ+ತಾವರೆ=ಬಿಳಿದಾವರೆ

ಇದಕ್ಕೆ ಪ್ರತಿಷೇಧಗಳು.

ಬರ್+ಕೈ=ಬರ್ಕೈ	ಈ+ಕೆಲಸ=ಈಕೆಲಸ

41. ಅನುನಾಸಿಕವು ಸಂಧಿ ಮಾಡುವಲ್ಲೇನಾಗುತ್ತದೆ ?

ಅನುನಾಸಿಕವು ಅರ್ಧಾಕ್ಷರವಾಗಿದ್ದು ಪರದಲ್ಲಿ ವ್ಯಂಜನವಿದ್ದರೆ ಅನುಸ್ವಾರವಾಗುತ್ತದೆ.

ಉದಾಹರಣೆ.

ಮುಂ+ಬಾಗಲು=ಮುಂಬಾಗಲು

ಕೆಮ್+ಜಡೆ=ಕೆಂಜಡೆ ಕೆಮ್+ತಳಿರು=ಕೆಂದಳಿರು

42. ಪ್ರಕೃತಿ ಭಾವವೆಂದರೇನು?

ಮುಂಚೆ ಹೇಳಿದ ಸಂಸ್ಕೃತ ಸಂಧಿ ಕನ್ನಡ ಸಂಧಿಗಳನ್ನು ಮಾಡಿ, ಅಕ್ಷರಗಳನ್ನು ಕೂಡಿಸದೆ ಪ್ರತ್ಯೇಕವಾಗಿ ಉಚ್ಚರಿಸುವದು ಪ್ರಕೃತಿ ಭಾವವೆನ್ನಿಸುವದು.

ಉದಾಹರಣೆ.

ಪ್ರಕೃತಿ ಭಾವಕ್ಕೆ ಕೃಷ್ಣಾತೀರದಲ್ಲಿ ಒಂದು ಆಲದ ಮರ ಇತ್ತು ಆಗ ಅಲ್ಲಿ ಇದ್ದ ಕೋತಿಗಳು ಎಲ್ಲಾ ಆ ಮರವನ್ನು ಏರಿದವು

ಸಂಧಿ ಕಾರ್ಯಕ್ಕೆ ಕೃಷ್ಣಾತೀರದಲ್ಲೊಂದಾಲದಮರವಿತ್ತು. ಆಗ ಅಲ್ಲಿದ್ದ ಕೋತಿಗಳೆಲ್ಲಾ ಆಮರವನ್ನೇರಿದವು.

(Etymology.)

II. ಶಬ್ದಲಕ್ಷಣ.

1. ಶಬ್ದನಿರ್ಣಯ ಪ್ರಕರಣ, (Kinds of woords-)

43. ಶಬ್ದ ನಿರ್ಣಯ ಪ್ರಕರಣದಲ್ಲಿ ಏನು ಹೇಳಲ್ಪಡುತ್ತದೆ?

ಶಬ್ದಭೇದಗಳೂ ಅವುಗಳ ರೂಪ ನಿಷ್ಪತ್ತಿಯೂ ಹೇಳಲ್ಪಡುತ್ತದೆ,

44. ಶಬ್ದ ಭೇದಗಳು ಯಾವವು?

ಸಂಸ್ಕೃತ ಶಬ್ದಗಳು, ವ್ಯತ್ಯಾಸವಾಗದಂತೆ ಕನ್ನಡದಲ್ಲಿ ಪ್ರಯೋಗಿಸಲ್ಪಟ್ಟರೆ ತತ್ಸಮವೆಂತಲೂ—ಸಂಸ್ಕೃತ ಶಬ್ದಗಳು ವಿಕೃತಿಯನ್ನು ಹೊಂದಿ ಪ್ರಯೋಗಿಸ

ಲ್ಪಟ್ಟರೆ ತದ್ಭವವೆಂತಲೂ—ಅಚ್ಚ ಕನ್ನಡ ಶಬ್ದಗಳು ದೇಶ್ಯವೆಂತಲೂ—ಕನ್ನಡದಲ್ಲಿ ಪ್ರಯೋಗಿಸುವ ಹಿಂದುಸ್ತಾನಿ ಇಂಗ್ಲೀಷ್ ಮೊದಲಾದ ದ್ವೀಪಾಂತರ ಶಬ್ದಗಳು ಅನ್ಯ ದೇಶ್ಯವೆಂತಲೂ—ಲಕ್ಷಣ ವಿರುದ್ಧವಾದ ಶಬ್ದಗಳು ಗ್ರಾಮ್ಯವೆಂತಲೂ—೫ ಭೇದಗಳು.

ಉದಾಹರಣೆ.

ತತ್ಸಮಕ್ಕೆ—ಮಣಿ, ಮಂಚ,
ತದ್ಭವಕ್ಕೆ—ಅಡವಿ (ಅಟವಿ) ಸಸಿ (ಶಶಿ)
ದೇಶ್ಯಕ್ಕೆ—ಹಾಲು, ಕಾಲು, ಕುರಿ, ನರಿ, ಮನೆ,
ಅನ್ಯ ದೇಶ್ಯಕ್ಕೆ—ಸಲಾಮು (ಸಲಾಂ) ಕೋರ್ಟು (ಕೋರ್ಟ್)
ಗ್ರಾಮ್ಯಕ್ಕೆ—ಮ್ಯಾಗೆ (ಮೇಲೆ) ಊರಾಗೆ (ಊರೊಳಗೆ)

45. ಶಬ್ದಗಳೆಷ್ಟು ವಿಧವು?

ವಿಭಕ್ತಿ ಪ್ರತ್ಯಯಗಳನ್ನು ಹೊಂದುವ ನಾಮ ಪದವೆಂತಲೂ—ಆಖ್ಯಾತ ಪ್ರತ್ಯಯಗಳನ್ನು ಹೊಂದುವ ಕ್ರಿಯಾಪದವೆಂತಲೂ—ಉಳಿದವುಗಳೆಲ್ಲಾ ಅವ್ಯಯವೆಂತಲೂ—೩ ವಿಧವು.

46. ಪ್ರತ್ಯಯಗಳನ್ನು ಹೊಂದದೇ ಇರುವಾಗ ನಾಮಪದ ಕ್ರಿಯಾಪದಗಳಿಗೆ ಹೆಸರೇನು?

ಪ್ರತ್ಯಯಗಳನ್ನು ಹೊಂದದೇ ಇರುವಾಗ ನಾಮ ಪದಕ್ಕೂ ಕ್ರಿಯಾಪದಕ್ಕೂ ಪ್ರಕೃತಿ ಎಂಬ ಹೆಸರು. ಕೆಲವರು ವಿಭಕ್ತಿಯಿಲ್ಲದ ನಾಮಪದವನ್ನು ಪ್ರಾತಿಪದಿಕವೆಂತಲೂ ಕ್ರಿಯಾಪದವನ್ನು ಧಾತುವೆಂತಲೂ ಹೇಳುತ್ತಾರೆ.

47. ನಾಮಪದವೆಷ್ಟು ವಿಧವು ?
ಚೇತನ ಅಚೇತನ ವಸ್ತುಗಳ ಹೆಸರನ್ನು ತಿಳಿಸುವ ನಾಮವಾಚಕವೆಂತಲೂ—ನಾಮವಾಚಕಕ್ಕೆ ಬದಲಾಗಿ ಪ್ರಯೋಗಿಸುವ ಸರ್ವನಾಮವೆಂತಲೂ—ವಸ್ತುಗಳ ಗುಣವನ್ನು ವಿಶೇಷಿಸುವ ಗುಣವಾಚಕವೆಂತಲೂ—೩ ವಿಧವು. ಚೇತನವೆಂದರೆ ಪ್ರಾಣವುಳ್ಳದ್ದು. ಪ್ರಾಣವಿಲ್ಲದ್ದು ಅಚೇತನವೆನ್ನಲ್ಪಡುವದು.

ನಾಮವಾಚಕ, (Nouns.)

48. ನಾಮವಾಚಕವೆಷ್ಟು ವಿಧವು ?
ಸಾಧಾರಣವಾದ ಹೆಸರುಗಳನ್ನು ತಿಳಿಸುವ ರೂಢನಾಮವೆಂತಲೂ—ಮುಖ್ಯವಾದ ಹೆಸರುಗಳನ್ನು ತಿಳಿಸುವ ಅಂಕಿತ ನಾಮವೆಂತಲೂ—ವಸ್ತುಗಳ ಗುಣವನ್ನೂ ಸ್ಥಿತಿಯನ್ನೂ ತಿಳಿಸುವ ಭಾವ ನಾಮವೆಂತಲೂ—೩ ವಿಧವು.

ಉದಾಹರಣೆ.

ರೂಢನಾಮಕ್ಕೆ.	ಅಂಕಿತನಾಮಕ್ಕೆ.	ಭಾವನಾಮಕ್ಕೆ.
ಮನುಷ್ಯ	ಹಿಂದೂಸ್ಥಾನ	ಗುರುತ್ವ
ಮರ	ಮೈಸೂರು	ತಾಳ್ಮೆ
ಊರು	ಹಿಮಾಲಯ	ಬಿಳುಪು
ಬೆಟ್ಟ	ಕಾವೇರಿ	ದೊಡ್ಡಸ್ತಿಕೆ

49. ನಾಮಪದಗಳಿಗೆ ಬರುವ ಸಂಕೇತಗಳು ಯಾವವು ?
ಲಿಂಗ—ವಿಭಕ್ತಿ—ವಚನ—ಎಂಬ ೩ ಸಂಕೇತಗಳು.

50. ಲಿಂಗವೆಷ್ಟು ವಿಧವು ?
ಪುರುಷರನ್ನು ಹೇಳುವದು, ಪುಂಲಿಂಗವೆಂತಲೂ— ಸ್ತ್ರೀಯರನ್ನು ಹೇಳುವದು, ಸ್ತ್ರೀಲಿಂಗವೆಂತಲೂ—

ಪುಂಲಿಂಗ ಸ್ತ್ರೀಲಿಂಗ ವ್ಯತಿರಿಕ್ತವಾಗಿ ಪಶು ಪಕ್ಷಿ ಮೃಗಾದಿಗಳನ್ನು ಹೇಳುವದು ನಪುಂಸಕ ಲಿಂಗವೆಂತಲೂ—೩ ವಿಧವು.

ಉದಾಹರಣೆ.

ಪುಲ್ಲಿಂಗಳಿಗೆ	ಸ್ತ್ರೀಲಿಂಗಳಿಗೆ	ನಪುಂಸಕ ಲಿಂಗಳಿಗೆ
ಅರಸ	ತಾಯಿ	ಜ್ಞಾನ
ಮನುಷ್ಯ	ಮಗಳು	ಪಕ್ಷಿ
ಹುಡುಗ	ಹೆಂಗಸು	ಕುದುರೆ

ಇದಕ್ಕೆ ಪ್ರತಿಷೇಧಗಳು.

ತ್ರಿಲಿಂಗ—ಜನ

ಪುನಪುಂಸಕ—ಸೂರ್ಯ, ಚಂದ್ರ, ವರಾಹ, ಬಸವ, ಕೂರ್ಮ.

ಸ್ತ್ರೀನಪುಂಸಕ—ದೇವತೆ, ಸರಸ್ವತಿ, ಸಿರಿ.

ನಿತ್ಯ ನಪುಂಸಕ—ಕಳತ್ರ, ಅಪತ್ಯ, ಮೀನು, ಕೂಸು, ಮಗು.

51. ವಿಭಕ್ತಿಗಳೂ ಅವುಗಳ ಪ್ರತ್ಯಯಗಳೂ ಯಾವವು?

ಕರ್ತೃ ವಿಭಕ್ತಿ	ಪ್ರಥಮಾ	ಉ
ಸಂಭೋಧನಾವಿಭಕ್ತಿ	ಆಮಂತ್ರಣ	ಏ ಏ
ಕರ್ಮ ವಿಭಕ್ತಿ	ದ್ವಿತೀಯ	ಅ. ಅನ್ನು
ಕರಣ ವಿಭಕ್ತಿ	ತೃತೀಯ	ಇಂದ
ಸಂಪ್ರದಾನ ವಿಭಕ್ತಿ	ಚತುರ್ಥೀ	ಇಗೆ, ಗೆ
ಅಪಾದಾನ ವಿಭಕ್ತಿ	ಪಂಚಮೀ	ದೆಸೆಯಿಂದ
ಸಂಬಂಧ ವಿಭಕ್ತಿ	ಷಷ್ಠಿ	ಅ
ಅಧಿಕರಣ ವಿಭಕ್ತಿ	ಸಪ್ತಮೀ	ಅಲ್ಲಿ

52. ವಚನವೆಷ್ಟು ವಿಧವು ?

ಪ್ರಥಮಾದಿ ಸಪ್ತ ವಿಭಕ್ತಿಗಳಲ್ಲಿಯೂ ಏಕತ್ವವನ್ನು ನಿರ್ದೇಶಿಸುವದು ಏಕವಚನವೆಂತಲೂ—ಬಹುತ್ವವ

ನ್ನು ನಿರ್ದೇಶಿಸುವದು ಬಹುವಚನವೆಂತಲೂ—೨ ವಿಧವು. ಏಕತ್ವವೆಂದರೆ ಒಂದು, ಬಹುತ್ವವೆಂದರೆ ಅನೇಕ. ನಿರ್ದೇಶಿಸುವದಂದರೆ ತೋರಿಸುವದು.

53. ಏಕವಚನ ಬಹುವಚನಗಳನ್ನು ನಿರ್ಧರಿಸುವದು ಹ್ಯಾಗೆ?

೧ ಪುಂಲಿಂಗವಾದ ಅಕಾರಾಂತ ಪ್ರಕೃತಿಗೆ ಏಕವಚನ ದಲ್ಲಿ "ಅನು" ಪ್ರತ್ಯಯು ಬರುವದು.

ಸ್ತ್ರೀಲಿಂಗವಾದ ಅಕಾರಾಂತ ಪ್ರಕೃತಿಗೆ ಏಕವಚನ ದಲ್ಲಿ „ಅಳು" ಪ್ರತ್ಯಯು ಬರುವದು.

ಅಕಾರಾಂತವನ್ನುಳಿದ ಎಲ್ಲಾ ಪುಂ ಸ್ತ್ರೀಲಿಂಗ ಪ್ರಕೃತಿಗಳಿಗೂ ಅಕಾರಾಂತ ಸಹಿತವಾಗಿ ಎಲ್ಲಾ ನಪುಂಸಕಲಿಂಗ ಪ್ರಕೃತಿಗಳಿಗೂ ಏಕವಚನದಲ್ಲಿ "ಉ" ಪ್ರತ್ಯಯು ಬರುವದು.

೨ ಅಕಾರಾಂತವಾದ ಪುಂ ಸ್ತ್ರೀಲಿಂಗ ಪ್ರಕೃತಿಗಳಿಗೆ ಬಹುವಚನದಲ್ಲಿ „ಅರು" ಪ್ರತ್ಯಯ ಬರುವದು.

ಅಕಾರಾಂತ ನಪುಂಸಕಲಿಂಗ ಪ್ರಕೃತಿಗಳಿಗೂ ಇ ಎ ಉ ಋ ಕಾರಾಂತಗಳಾದ ಎಲ್ಲಾ ಪುಂ ಸ್ತ್ರೀ ನಪುಂಸಕಲಿಂಗ ಪ್ರಕೃತಿಗಳಿಗೂ ಬಹುವಚನದಲ್ಲಿ „ಗಳು" ಪ್ರತ್ಯಯು ಬರುವದು.

ಬಹುವಚನ ಪ್ರತ್ಯಯಗಳಾದ „ಅರು" „ಗಳು" ಪ್ರತ್ಯಯಗಳ ಮೇಲೆಯೇ ದ್ವಿತೀಯಾದಿ ಎಲ್ಲಾ ವಿಭಕ್ತಿ ಪ್ರತ್ಯಯಗಳನ್ನೂ ಹತ್ತಿಸಲಾಗುವದು. ನಿರ್ಧರಿಸುವದಂದರೆ ನಿಶ್ಚಯಿಸುವದು.

54. ಬಹು ವಚನ ಪ್ರತ್ಯಯಕ್ಕೆ ವಿಶೇಷವಿಧಿಗಳು ಯಾವವು?

೧ ಸೊಸೆ ಅತ್ತೆ ಅತ್ತಿಗೆ ಹುಡುಗಿ ನಾದಿನಿ ತಂಗಿ ಮು ದಿಕಿ ವಿಧವೆ ಅಜ್ಜಿ ಬೀಗತಿ ಹೆಂಡತಿ ಸೂಳೆ ಸ್ತ್ರೀ ಮೊದಲಾದ ಕೆಲವು ಸ್ತ್ರೀಲಿಂಗ ಪ್ರಕೃತಿಗಳಿಗೆ ಬಹು ವಚನದಲ್ಲಿ „ಅರು" ಪ್ರತ್ಯಯ ಬರುವದುಂಟು.

ಉದಾಹರಣೆ.

ಪ್ರಕೃತಿ.	ಬಹುವಚನ.
ಸೊಸೆ	ಸೊಸೆಯರು
ನಾದಿನಿ	ನಾದಿನಿಯರು
ಅತ್ತಿಗೆ	ಅತ್ತಿಗೆಯರು

೨ ಅಪ್ಪ ಅಣ್ಣ ತಮ್ಮ ಅಮ್ಮ ಅಕ್ಕ ಅವ್ವ ಮಾವ ಭಾವ ವೈದ್ಯ ಗಂಡ ಮೊದಲಾದ ಅಕಾರಾಂತ ಬಂ ಧುವಾಚಕ ಪುಂ ಸ್ತ್ರೀಲಿಂಗ ಪ್ರಕೃತಿಗಳಿಗೆ ಬಹುವ ಚನದಲ್ಲಿ „ಅಂದಿರು" ಪ್ರತ್ಯಯ ಬರುವದು. ಬಂಧು ವಾಚಕವೆಂದರೆ ನೆಂಟರನ್ನು ಹೇಳುವ ನಾಮವಾ ಚಕಗಳೆಂಬರ್ಥವು.

ಉದಾಹರಣೆ.

ಪ್ರಕೃತಿ.	ಬಹುವಚನ.
ಅಪ್ಪ	ಅಪ್ಪಂದಿರು
ಅಕ್ಕ	ಅಕ್ಕಂದಿರು
ಮಾವ	ಮಾವಂದಿರು

೩ ಧೊರೆ ಅರಸ ತಂದೆ ಮೊದಲಾದವುಗಳಿಗೆ ಗೌರವಾ ರ್ಥಕದಲ್ಲಿ „ಅವರು" ಪ್ರತ್ಯಯವು ಬರುವದು. ಗೌರ ವವೆಂದರೆ ಮರ್ಯಾದೆ.

ಉದಾಹರಣೆ.

ಪ್ರಕೃತಿ.	ಬಹುವಚನ.
ಧೊರೆ	ಧೊರೆಯವರು
ಅಣ್ಣ	ಅಣ್ಣನವರು

೪ ಮಗು ಮಗನು ಮಗಳು ಎಂಬ ಏಕವಚನಗಳಿಗೆ ಮಕ್ಕಳು ಎಂಬುವ ಒಂದೇ ರೂಪವಾದ ಬಹುವಚನ ಬರುವದು.

55. ಪ್ರಕೃತಿಯ ಅಂತ್ಯದಲ್ಲಿ ಪ್ರತ್ಯಯಗಳನ್ನು ಸೇರಿಸುವದಕ್ಕೆ ವಿಧಿಗಳೂ ಉದಾಹರಣೆಗಳೂ ಯಾವವು?

೧ ಅಕಾರಾಂತನಪುಂಸಕಲಿಂಗ ಪ್ರಕೃತಿಗಳಿಗೆ ಪ್ರತ್ಯಯಾನುಬಂಧನೆ ಮಾಡುವಲ್ಲಿ ಪ್ರಕೃತಿಗೂ ಪ್ರತ್ಯಯದ ಸ್ವರಕ್ಕೂ ನಡುವೆ ವಕಾರಾಗಮ ಬರುವದು. ಪ್ರತ್ಯಯಾನುಬಂಧನೆ ಅಂದರೆ ಪ್ರತ್ಯಯವನ್ನು ಕೂಡಿಸುವದು. ಪಂಚಮೀವಿಭಕ್ತಿ ಪ್ರತ್ಯಯವು ಪ್ರಕೃತಿಗೆ ಸೇರುವಾಗ ಯಾವಾಗಲೂ ಷಷ್ಠೀವಿಭಕ್ತಿಯ ಮೇಲೆ ಸೇರುತ್ತದೆ.

೨ ಇ ಎ ಕಾರಾಂತವಾದ ಪುಂ ಸ್ತ್ರೀ ನಪುಂಸಕ ಪ್ರಕೃತಿಗಳಿಗೆ ಪ್ರತ್ಯಯಗಳು ಸೇರಿದರೆ ಏಕವಚನದಲ್ಲಿ ಪ್ರಕೃತಿಗೂ ಪ್ರತ್ಯಯದ ಸ್ವರಕ್ಕೂ ನಡುವೆ ಯಕಾರಗಮ ಬರುವದು. ಉ ಊ ಋ ೠ ಒ ಓ ಕಾರಾಂತವಾದ ಪುಂಸ್ತ್ರೀ ನಪುಂಸಕ ಪ್ರಕೃತಿಗಳಿಗೆ ಪ್ರತ್ಯಯ ಸೇರುವಾಗ ಏಕವಚನದಲ್ಲಿ ಪ್ರಕೃತಿಗೂ ಪ್ರತ್ಯಯದ

ಸ್ವರಕ್ಕೂ ನಡುವೆ ಯಕಾರಾಗಮ ಬರುವದು. ಆದರೆ ಉಕಾರಾಂತದೇಶ್ಯ ಪ್ರಕೃತಿಗೆ ಈ ವಿಧಿಯಿಲ್ಲ.

೩ ಅಕಾರಾಂತನ ಪುಂಸಕಲಿಂಗ ಪ್ರಕೃತಿಗಳಿಗೆ ತೃತೀಯೆ ಷಷ್ಠೀ ಸಪ್ತಮೀವಿಭಕ್ತಿ ಪ್ರತ್ಯಯಗಳು ಸೇರುವಾಗ ನಡುವೆ ದಕಾರಾಗಮ ಬರುವದು. ಕೆಲವು ಕಡೆ ನಕಾರಾಗಮ ಬರುವದು.

೪ ಅಕಾರಾಂತ ನಪುಂಸಕ ಪ್ರಕೃತಿಗೆ ಚತುರ್ಥ್ಯೇಕ ವಚನದಲ್ಲಿ "ಕ್ಕೆ" ಪ್ರತ್ಯಯವು ಬರುವದು. ಎಕಾರಾಂತವಾದ ಪುಂ ಸ್ತ್ರೀ ನಪುಂಸಕ ಪ್ರಕೃತಿಗಳ ಚತುರ್ಥ್ಯೇಕವಚನದಲ್ಲಿ "ಗೆ" ಪ್ರತ್ಯಯವು ಬರುವದು. ಉಳಿದ ಎಲ್ಲಾ ಪುಂ ಸ್ತ್ರೀ ನಪುಂಸಕ ಪ್ರಕೃತಿಗಳಿಗೂ ಪ್ರತ್ಯಯಾನುಬಂಧನೆ ಮಾಡಲಾಗಿ ವಚನ ವ್ಯವಸ್ಥೆ ಇಲ್ಲದೆ ಚತುರ್ಥೀ ವಿಭಕ್ತಿಯಲ್ಲಿ "ಇಗೆ" ಪ್ರತ್ಯಯವೇ ಬರುವದು. ಕೆಲವರು ಏಕವಚನದಲ್ಲಿ ಪ್ರಕೃತಿಗೆ "ಗೆ" ಪ್ರತ್ಯಯವನ್ನು ಸೇರಿಸುವದರಿಂದ ಚತುರ್ಥೀ ವಿಭಕ್ತಿಯನ್ನು ಮಾಡಿ ಬರೆಯುವರು. ಇದು ಸರಿಯಲ್ಲ.

56. ಪ್ರಕೃತಿಪ್ರತ್ಯಯ ಸಂಯೋಗವಾದ ನಾಮವಾಚಕಗಳ ರೂಪವು ಹ್ಯಾಗೆ?

ಅವುಗಳ ರೂಪವನ್ನು ಈ ಕೆಳಗೆ ಬರೆದಿರುವ ಉದಾಹರಣೆಗಳಿಂದ ತಿಳಿಯಬೇಕು. ಪ್ರಕೃತಿ ಪ್ರತ್ಯಯ ಸಂಯೋಗವೆಂದರೆ ಪ್ರಕೃತಿಗೆ ಪ್ರತ್ಯಯವು ಕೂಡಿರುವಿಕೆ.

ಪುಲ್ಲಿಂಗ ನಾಮವಾಚಕಗಳು.

	ಅಕಾರಾಂತ ಪ್ರಕೃತಿ (ಭೃತ್ಯ)		ಇಕಾರಾಂತ ಪ್ರಕೃತಿ (ಯತಿ) *		ಉಕಾರಾಂತ ಪ್ರಕೃತಿ (ಗುರು †)	
ವಿಭಕ್ತಿ.	ಏಕವಚನ.	ಬಹುವಚನ.	ಏಕವಚನ.	ಬಹುವಚನ.	ಏಕವಚನ.	ಬಹುವಚನ.
ಪ್ರ.	ಭೃತ್ಯನು	ಭೃತ್ಯರು	ಯತಿಯು	ಯತಿಗಳು	ಗುರುವು	ಗುರುಗಳು
ಸಂ.	ಭೃತ್ಯನೇ	ಭೃತ್ಯರೇ	ಯತಿಯೇ	ಯತಿಗಳೇ	ಗುರುವೇ	ಗುರುಗಳೇ
ದ್ವಿ.	ಭೃತ್ಯನನ್ನು	ಭೃತ್ಯರನ್ನು	ಯತಿಯನ್ನು	ಯತಿಗಳನ್ನು	ಗುರುವನ್ನು	ಗುರುಗಳನ್ನು
ತೃ.	ಭೃತ್ಯನಿಂದ	ಭೃತ್ಯರಿಂದ	ಯತಿಯಿಂದ	ಯತಿಗಳಿಂದ	ಗುರುವಿನಿಂದ	ಗುರುಗಳಿಂದ
ಚ.	ಭೃತ್ಯನಿಗೆ	ಭೃತ್ಯರಿಗೆ	ಯತಿಗೆ	ಯತಿಗಳಿಗೆ	ಗುರುವಿಗೆ	ಗುರುಗಳಿಗೆ
ಪಂ.	ಭೃತ್ಯನ ದೆಸೆಯಿಂದ	ಭೃತ್ಯರ ದೆಸೆಯಿಂದ	ಯತಿಯ ದೆಸೆಯಿಂದ	ಯತಿಗಳ ದೆಸೆಯಿಂದ	ಗುರುವಿನ ದೆಸೆಯಿಂದ	ಗುರುಗಳ ದೆಸೆಯಿಂದ
ಷ.	ಭೃತ್ಯನ	ಭೃತ್ಯರ	ಯತಿಯ	ಯತಿಗಳ	ಗುರುವಿನ	ಗುರುಗಳ
ಸ.	ಭೃತ್ಯನಲ್ಲಿ	ಭೃತ್ಯರಲ್ಲಿ	ಯತಿಯಲ್ಲಿ	ಯತಿಗಳಲ್ಲಿ	ಗುರುವಿನಲ್ಲಿ	ಗುರುಗಳಲ್ಲಿ

*ಏಕಾರಂತ ಪ್ರಕೃತಿಯ ರೂಪವೂ ಹೀಗೆಯೇ. † ಋ ಋೂ ಕಾರಾಂತ ಪ್ರಕೃತಿಗಳ ರೂಪವನ್ನೂ ಹೀಗೆಯೇ ಊಹಿಸುವದು.

ಸ್ತ್ರೀಲಿಂಗ ನಾಮವಾಚಕಗಳು.

	ಅಕಾರಾಂತ ಪ್ರಕೃತಿ (ಸೇವಕ)		ಎಕಾರಾಂತ ಪ್ರಕೃತಿ (ಸೊಸೆ)*		ಉಕಾರಾಂತ ಪ್ರಕೃತಿ (ಹೆಂಗಸು)	
ವಿಭಕ್ತಿ.	ಏಕವಚನ.	ಬಹುವಚನ.	ಏಕವಚನ.	ಬಹುವಚನ.	ಏಕವಚನ.	ಬಹುವಚನ.
ಪ್ರ.	ಸೇವಕಳು	ಸೇವಕರು	ಸೊಸೆಯು	ಸೊಸೆಯರು	ಹೆಂಗಸು	ಹೆಂಗಸರು
ಸಂ.	ಸೇವಕಳೇ	ಸೇವಕರೇ	ಸೊಸೆಯೇ	ಸೊಸೆಯರೇ	ಹೆಂಗಸೇ	ಹೆಂಗಸರೇ
ದ್ವಿ.	ಸೇವಕಳನ್ನು	ಸೇವಕರನ್ನು	ಸೊಸೆಯನ್ನು	ಸೊಸೆಯರನ್ನು	ಹೆಂಗಸನ್ನು	ಹೆಂಗಸರನ್ನು
ತೃ.	ಸೇವಕಳಿಂದ	ಸೇವಕರಿಂದ	ಸೊಸೆಯಿಂದ	ಸೊಸೆಯರಿಂದ	ಹೆಂಗಸಿನಿಂದ	ಹೆಂಗಸರಿಂದ
ಚ.	ಸೇವಕಳಿಗೆ	ಸೇವಕರಿಗೆ	ಸೊಸೆಗೆ	ಸೊಸೆಯರಿಗೆ	ಹೆಂಗಸಿಗೆ	ಹೆಂಗಸರಿಗೆ
ಪಂ.	ಸೇವಕಳ ದೆಸೆಯಿಂದ	ಸೇವಕರ ದೆಸೆಯಿಂದ	ಸೊಸೆಯ ದೆಸೆಯಿಂದ	ಸೊಸೆಯರ ದೆಸೆಯಿಂದ	ಹೆಂಗಸಿನ ದೆಸೆಯಿಂದ	ಹೆಂಗಸರ ದೆಸೆಯಿಂದ
ಷ.	ಸೇವಕಳ	ಸೇವಕರ	ಸೊಸೆಯ	ಸೊಸೆಯರ	ಹೆಂಗಸಿನ	ಹೆಂಗಸರ
ಸ.	ಸೇವಕಳಲ್ಲಿ	ಸೇವಕರಲ್ಲಿ	ಸೊಸೆಯಲ್ಲಿ	ಸೊಸೆಯರಲ್ಲಿ	ಹೆಂಗಸಿನಲ್ಲಿ	ಹೆಂಗಸರಲ್ಲಿ

* ಇ ಈ ಕಾರಾಂತ ಪ್ರಕೃತಿಯ ರೂಪಗಳನ್ನೂ ಹೀಗೆಯೇ ಊಹಿಸ ತಕ್ಕದ್ದು.

ನಪುಂಸಕಲಿಂಗ ನಾಮವಾಚಕಗಳು.

	ಅಕಾರಾಂತ ಪ್ರಕೃತಿ (ಗಿಡ)		ಇಕಾರಾಂತ ಪ್ರಕೃತಿ (ಮರಿ)		ಉಕಾರಾಂತ ಪ್ರಕೃತಿ (ಹಣ್ಣು)	
ವಿಭಕ್ತಿ.	ಏಕವಚನ.	ಬಹುವಚನ.	ಏಕವಚನ.	ಬಹುವಚನ.	ಏಕವಚನ.	ಬಹುವಚನ.
ಪ್ರ.	ಗಿಡವು	ಗಿಡಗಳು	ಮರಿಯು	ಮರಿಗಳು	ಹಣ್ಣು	ಹಣ್ಣುಗಳು
ಸಂ.	ಗಿಡವೇ	ಗಿಡಗಳೇ	ಮರಿಯೇ	ಮರಿಗಳೇ	ಹಣ್ಣೇ	ಹಣ್ಣುಗಳೇ
ದ್ವಿ.	ಗಿಡವನ್ನು	ಗಿಡಗಳನ್ನು	ಮರಿಯನ್ನು	ಮರಿಗಳನ್ನು	ಹಣ್ಣನ್ನು	ಹಣ್ಣುಗಳನ್ನು
ತೃ.	ಗಿಡದಿಂದ	ಗಿಡಗಳಿಂದ	ಮರಿಯಿಂದ	ಮರಿಗಳಿಂದ	ಹಣ್ಣಿನಿಂದ	ಹಣ್ಣುಗಳಿಂದ
ಚ.	ಗಿಡಕ್ಕೆ	ಗಿಡಗಳಿಗೆ	ಮರಿಗೆ	ಮರಿಗಳಿಗೆ	ಹಣ್ಣಿಗೆ	ಹಣ್ಣುಗಳಿಗೆ
ಪಂ.	ಗಿಡದ ದೆಸೆಯಿಂದ	ಗಿಡಗಳ ದೆಸೆಯಿಂದ	ಮರಿಯ ದೆಸೆಯಿಂದ	ಮರಿಗಳ ದೆಸೆಯಿಂದ	ಹಣ್ಣಿನ ದೆಸೆಯಿಂದ	ಹಣ್ಣುಗಳ ದೆಸೆಯಿಂದ
ಷ.	ಗಿಡದ	ಗಿಡಗಳ	ಮರಿಯ	ಮರಿಗಳ	ಹಣ್ಣಿನ	ಹಣ್ಣುಗಳ
ಸ.	ಗಿಡದಲ್ಲಿ	ಗಿಡಗಳಲ್ಲಿ	ಮರಿಯಲ್ಲಿ	ಮರಿಗಳಲ್ಲಿ	ಹಣ್ಣಿನಲ್ಲಿ	ಹಣ್ಣುಗಳಲ್ಲಿ

* ಎ ಐ ಕಾರಾಂತ ಪ್ರಕೃತಿಯ ರೂಪಗಳನ್ನೂ ಹೀಗೆಯೇ ಊಹಿಸುವದು.

57. ಪ್ರತ್ಯಯವಿಲ್ಲದೆ ಪ್ರಕೃತಿಯನ್ನು ಮಾತ್ರ ಪ್ರಯೋಗಿಸುವದುಂಟೋ?
ಪ್ರಥಮೆ ದ್ವಿತೀಯೆ ಸಂಬೋಧನೆ ವಿಭಕ್ತಿಗಳಿಗೆ ಪ್ರತ್ಯಯ ರಹಿತವಾಗಿ ಪ್ರಕೃತಿಯನ್ನೇ ಪ್ರಯೋಗಿಸುವದುಂಟು.

ಉದಾಹರಣೆ.

ವಿಭಕ್ತಿ	ಪ್ರಕೃತಿರೂಪ	ಪ್ರತ್ಯಯಾಂತರೂಪ
ಪ್ರ	ಹಣ ಬಂತು	ಹಣವು ಬಂತು
ದ್ವಿ.	ಹಣ ಕೊಟ್ಟನು	ಹಣವನ್ನು ಕೊಟ್ಟನು
ಸಂ.	ರಾಮ	ರಾಮನೆ

ಸರ್ವನಾಮ. (*Pronouns.*)

58. ಸರ್ವನಾಮ ವೆಷ್ಟುವಿಧವು?
ಪುರುಷತ್ರಯಾರ್ಥಕ ಸರ್ವನಾಮವೆಂತಲೂ—ಆತ್ಮಾರ್ಥಕ ಸರ್ವನಾಮವೆಂತಲೂ—ಪ್ರಶ್ನಾರ್ಥಕ ಸರ್ವನಾಮವೆಂತಲೂ—೩ ವಿಧವು.

59. ಪುರುಷತ್ರಯಾರ್ಥಕ ಸರ್ವನಾಮದಲ್ಲಿ ಎಷ್ಟು ಭೇದಗಳು?
ಸಂಭಾಷಣೆಯಲ್ಲಿ ಮಾತನಾಡುವವನನ್ನು ನಿರ್ದೇಶಿಸುವ ಉತ್ತಮ ಪುರುಷವೆಂತಲೂ—ಮಾತನಾಡುವವನಿಗೆ ಅಭಿಮುಖನಾಗಿ ಕೇಳುವವನನ್ನು ನಿರ್ದೇಶಿಸುವ ಮಧ್ಯಮ ಪುರುಷವೆಂತಲೂ—ಈ ಇಬ್ಬರ ಸಂಭಾಷಣೆಗೆ ವಿಷಯನಾಗಿರುವವನನ್ನು ನಿರ್ದೇಶಿಸುವ ಪ್ರಥಮ ಪುರುಷವೆಂತಲೂ—೩ ಭೇದಗಳು. ನಿರ್ದೇಶಿಸುವದೆಂದರೆ ತೋರಿಸುವದು.

ಉದಾಹರಣೆ.

		ಏಕವಚನ.	ಬಹುವಚನ.
ಉತ್ತಮ ಪುರುಷ.		ನಾನು	ನಾವು
ಮಧ್ಯಮ ಪುರುಷ.		ನೀನು	ನೀವು
ಪ್ರಥಮ ಪುರುಷ.	ಪುಂ.	ಅವನು	ಅವರು
	ಸ್ತ್ರೀ.	ಅವಳು	ಅವರು
	ನಪುಂ.	ಅದು	ಅವು (ಅವುಗಳು)

ಇಲ್ಲಿ ಪ್ರಥಮ ಪುರುಷ ಪುಲ್ಲಿಂಗೈಕ ವಚನಕ್ಕೆ ಗೌರವಾರ್ಥಕದಲ್ಲಿ ಅತನು ಎಂತಲೂ—ನಿರ್ದಿಷ್ಟಾರ್ಥಕದಲ್ಲಿ ಇವನು ಈತನು ಎಂತಲೂ—ಸ್ತ್ರೀಲಿಂಗೈಕ ವಚನಕ್ಕೆ ಗೌರವಾರ್ಥಕದಲ್ಲಿ ಆಕೆ ಎಂತಲೂ_ನಿರ್ದಿಷ್ಟಾರ್ಥಕದಲ್ಲಿ ಇವಳು ಈಕೆ ಎಂತಲೂ—ನಪುಂಸಕೈಕ ವಚನಕ್ಕೆ ನಿರ್ದಿಷ್ಟಾರ್ಥಕದಲ್ಲಿ ಇದು ಎಂತಲೂ—ಬೇರೇ ರೂಪವಾಗುವದು.

60. ಆತ್ಮಾರ್ಥಕ ಸರ್ವನಾಮವು ಯಾವದು?

ಆತ್ಮಾರ್ಥಕ ಸರ್ವನಾಮವು ಪ್ರಥಮ ಪುರುಷದ ಲಿಂಗತ್ರಯದಲ್ಲಿಯೂ ಸ್ವತ್ವವನ್ನು ಸೂಚಿಸುವಲ್ಲಿ ಬರುತ್ತದೆ. ಸ್ವತ್ವವೆಂದರೆ ತನ್ನದೆಂಬರ್ಥ.

ಉದಾಹರಣೆ.

ಏಕವಚನ.	ಬಹುವಚನ.
ತಾನು	ತಾವು

61. ಪ್ರಶ್ನಾರ್ಥಕ ಸರ್ವನಾಮಗಳು ಯಾವವು?

ಅವು ಯಾವವೆಂದರೆ,

	ಏಕವಚನ.	ಬಹುವಚನ.
ಪುಂಲಿಂಗ.	ಯಾವನು	ಯಾರು.
ಸ್ತ್ರೀಲಿಂಗ.	ಯಾವಳು	
ನಪುಂಸಕಲಿಂಗ.	ಯಾವದು	ಯಾವವು.
	ಏನು	

62. ಸರ್ವನಾಮ ವಿಭಕ್ತಿ ರೂಪಗಳು ಹ್ಯಾಗೆ?

ಅವುಗಳನ್ನು ಇಲ್ಲಿ ಬರೆದಿರುವ ಉದಾಹರಣೆಗಳಿಂದ ತಿಳಿಯಲಾಗುವದು.

ಪುರುಷತ್ರಯಾರ್ಥಕ ಸರ್ವನಾಮಗಳು.

	ಉತ್ತಮ ಪುರುಷ.		ಪ್ರಥಮ ಪುರುಷ.				
	ಏಕವಚನ.	ಬಹುವಚನ.	ಏಕವಚನ.		ಬಹುವಚನ.	ಏಕವಚನ.	ಬಹುವಚನ.
ವಿಭಕ್ತಿ			ಪುಂಲಿಂಗ.	ಸ್ತ್ರೀಲಿಂಗ.	ಪುಂಸ್ತ್ರೀಲಿಂಗ	ನಪುಂಸಕಲಿಂಗ.	
ಪ್ರ.	ನಾನು	ನಾವು	ಅವನು	ಅವಳು	ಅವರು	ಅದು	ಅವು (ಅವುಗಳು)
ದ್ವಿ.	ನನ್ನನ್ನು	ನಮ್ಮನ್ನು	ಅವನನ್ನು	ಅವಳನ್ನು	ಅವರನ್ನು	ಅದನ್ನು	ಅವುಗಳನ್ನು
ತೃ.	ನನ್ನಿಂದ	ನಮ್ಮಿಂದ	ಅವನಿಂದ.	ಅವಳಿಂದ	ಅವರಿಂದ	ಅದರಿಂದ	ಅವುಗಳಿಂದ
ಚ.	ನನಗೆ	ನಮಗೆ	ಅವನಿಗೆ	ಅವಳಿಗೆ	ಅವರಿಗೆ	ಅದಕ್ಕೆ	ಅವುಗಳಿಗೆ (ಅವಕ್ಕೆ)
ಪಂ.	ನನ್ನ ದೆಸೆಯಿಂದ	ನಮ್ಮದೆಸೆಯಿಂದ	ಅವನ ದೆಸೆಯಿಂದ	ಅವಳ ದೆಸೆಯಿಂದ	ಅವರ ದೆಸೆಯಿಂದ	ಅದರ ದೆಸೆಯಿಂದ	ಅವುಗಳ ದೆಸೆಯಿಂದ
ಷ.	ನನ್ನ	ನಮ್ಮ	ಅವನ	ಅವಳ	ಅವರ	ಅದರ	ಅವುಗಳ
ಸ.	ನನ್ನಲ್ಲಿ	ನಮ್ಮಲ್ಲಿ	ಅವನಲ್ಲಿ	ಅವಳಲ್ಲಿ	ಅವರಲ್ಲಿ	ಅದರಲ್ಲಿ	ಅವುಗಳಲ್ಲಿ
[illegible]	ನೀನು	ನೀವು	ಇವನು	ಇವಳು	ಇವರು	ಇದು	ಇವು (ಇವುಗಳು)
	ತಾನು	ತಾವು	ಯಾವನು	ಯಾವಳು	ಯಾರು	ಯಾವದು	ಯಾವವು (ಯಾವವುಗಳು)
			ಆತನು				
	ಹೀಗೆಯೇ		ಈತನು	ಹೀಗೆಯೇ		ಹೀಗೆಯೇ	

ಆದರೆ ಏನು ಶಬ್ದ ಹೀಗೆ ಇರುವದು.

ವಿಭಕ್ತಿ.	ನಿತ್ಯೈಕ ವಚನ.
ಪ್ರ.	ಏನು
ದ್ವಿ.	ಏನನ್ನು
ತೃ.	ಯಾತರಿಂದ
ಚ.	ಯಾತಕ್ಕೆ (ಯಾಕೆ)
ಪಂ.	ಯಾತರ ದೆಸೆಯಿಂದ
ಷ.	ಯಾತರ
ಸ.	ಯಾತರಲ್ಲಿ

ಗುಣವಾಚಕ. (Adjectives.)

63. ಗುಣವಾಚಕವೆಷ್ಟು ವಿಧವು ?

ಸಂಸ್ಕೃತ ಗುಣವಾಚಕವೆಂತಲೂ—ಕನ್ನಡ ಗುಣವಾಚಕವೆಂತಲೂ—೨ ವಿಧವು.

64. ಸಂಸ್ಕೃತ ಗುಣವಾಚಕವು ಎಷ್ಟು ಭೇದಗಳಾಗುವದು?

ಸಹಜ ಗುಣವನ್ನು ವಿಶೇಷಿಸುವ ನೈಜವೆಂತಲೂ—ನೈಜಕ್ಕೆ "ತರ" ಎಂಬ ಪ್ರತ್ಯಯವನ್ನು ಕೂಡಿಸಿ ಅಧಿಕ ಗುಣವನ್ನು ವಿಶೇಷಿಸುವ ತರ ವೆಂತಲೂ—"ತಮ" ಎಂಬ ಪ್ರತ್ಯಯವನ್ನು ಕೂಡಿಸಿ ಅತ್ಯಧಿಕ ಗುಣವನ್ನು ವಿಶೇಷಿಸುವ ತಮವೆಂತಲೂ—೩ ಭೇದಗಳಾಗುವವು.

ಉದಾಹರಣೆ.

ನೈಜ.	ತರ.	ತಮ.
ಶುಭ	ಶುಭತರ	ಶುಭತಮ
ಸುಖ	ಸುಖತರ	ಸುಖತಮ

ಇದಲ್ಲದೆ ನೈಜ ಗುಣವಾಚಕದ ಆದಿಯಲ್ಲಿ ಅತಿ—ಅತ್ಯಂತ ಎಂಬ ಪ್ರತ್ಯಯಗಳನ್ನು ಕೂಡಿಸುವದರಿಂದಲೂ ತರ ತಮಗಳಾಗುವವು.

ಉದಾಹರಣೆ.

ನೈಜ	ತರ	ತಮ
ಮೃದು	ಅತಿಮೃದು	ಅತ್ಯಂತ ಮೃದು
ಸೂಕ್ಷ್ಮ	ಅತಿಸೂಕ್ಷ್ಮ	ಅತ್ಯಂತ ಸೂಕ್ಷ್ಮ

65. ಕನ್ನಡ ಗುಣವಾಚಕದಲ್ಲಿ ಎಷ್ಟು ಭೇದಗಳು ?

ಈ ಸಂಸ್ಕೃತ ಗುಣವಾಚಕಗಳು ತತ್ಸಮ ಗುಣವಾಚಕಗಳೆನ್ನಿಸಿಕೊಳ್ಳುವವು.

ನಾಮವಾಚಕದ ಆದಿಯಲ್ಲಿ ಸೇರಿ ಅವುಗಳನ್ನು ವಿಶೇಷಿಸುವದಾಗಿ ಪ್ರತ್ಯಯಗಳನ್ನು ಹೊಂದದ ಶುದ್ಧ ಗುಣವಾಚಕವೆಂತಲೂ—ಶುದ್ಧ ಗುಣವಾಚಕಗಳಿಗೆ ಪ್ರತ್ಯಯಗಳನ್ನು ಹತ್ತಿಸಲಾಗಿ ನಾಮವಾಚಕಗಳಂತೆ ರೂಪ ನಿಷ್ಪತ್ತಿಯನ್ನು ಹೊಂದಿ ಗುಣ ಯುಕ್ತವಾದ ವಸ್ತುಗಳನ್ನು ಸ್ವತಂತ್ರವಾಗಿ ಬೋಧಿಸುವೆನಿಷ್ಪನ್ನ ಗುಣವಾಚಕ ವೆಂತಲೂ—ಸಂಖ್ಯೆಯಿಂದ ವಸ್ತುಗಳನ್ನು ವಿಶೇಷಿಸುವ ಸಂಖ್ಯಾವಾಚಕವೆಂತಲೂ—ಸಂಖ್ಯೆಗೆ "ಅನೆ" ಎಂಬ ಪ್ರತ್ಯಯವನ್ನು ಕೂಡಿಸಲು ಸಂಖ್ಯೆಯಿಂದ ಬಂದು ಮುಖ್ಯ ವಸ್ತುವನ್ನು ನಿರ್ದೇಶಿಸುವ ಸಂಖ್ಯಾನಿರ್ದಿಷ್ಟವಾಚಕವೆಂತಲೂ—ನಾಮವಾಚಕದ ಪರಿಮಿತಿಯನ್ನು ವಿಶೇಷಿಸುವ ಪರಿಮಾಣ ವಾಚಕವೆಂತಲೂ—ನಾಮವಾಚಕದ ಗುಣ

ಸಂಖ್ಯಾಪರಿಮಿತಿಗಳನ್ನು ಕೇಳುವ ಪ್ರಶ್ನಾರ್ಥಕ ಗುಣವಾಚಕವೆಂತಲೂ_ನಾಮವಾಚಕದ ಗುಣ ಪರಿಮಿತಿಗಳನ್ನು ನಿರ್ದೇಶಿಸಿ ಹೇಳುವ ನಿದರ್ಶಕ ಗುಣವಾಚಕವೆಂತಲೂ—೭ ಭೇದಗಳು.

66. ಶುದ್ಧ ಗುಣವಾಚಕಗಳು ಯಾವವು?

ಅವುಗಳು ಯಾವವೆಂದರೆ,

ಬಿಳೀ, ಕಿರೀ, ನೆರೇ, ಹಿರೀ,

ಕರೀ, ಹೊಸ, ಒಳ್ಳೇ, ಹಳೇ, ಇತ್ಯಾದಿಗಳು.

ಆದರೆ ಕನ್ನಡದಲ್ಲಿ ಶುದ್ಧ ಗುಣವಾಚಕಗಳು ವಿಶೇಷವಾಗಿಲ್ಲದಿರುವ ಕಾರಣ ಸಂಸ್ಕೃತ ಗುಣವಾಚಕ ನಾಮವಾಚಕಗಳಿಗೂ ಕನ್ನಡ ನಾಮವಾಚಕಗಳಿಗೂ ತುದಿಯಲ್ಲಿ "ಅದ, ಉಳ್ಳ" ಎಂಬ ಪ್ರತ್ಯಯಗಳನ್ನು ಸೇರಿಸಲಾಗಿ ಅನೇಕ ಶುದ್ಧಗುಣವಾಚಕಗಳಾಗುವವು.

ಉದಾಹರಣೆ.

ನಾಮವಾಚಕ.		ಗುಣವಾಚಕ.
ಬಲ	ಬಲವಾದ	ಬಲವುಳ್ಳ
ಸೌಖ್ಯ	ಸೌಖ್ಯವಾದ	ಸೌಖ್ಯವುಳ್ಳ
ಉದ್ದ	ಉದ್ದವಾದ	ಉದ್ದವುಳ್ಳ

ಇಲ್ಲಿ ತಿಳಿಯ ಬೇಕಾದ ಅಂಶವೇನೆಂದರೆ, ಮುಂಚೆ ಹೇಳಿದ ಸಂಸ್ಕೃತ ಗುಣವಾಚಕವು ಸಂಸ್ಕೃತ ನಾಮವಾಚಕವನ್ನು ವಿಶೇಷಿಸುವಾಗ ಇವುಗಳ ಮಧ್ಯದಲ್ಲಿ ಪ್ರತ್ಯಯುವ ಗತ್ಯವಿಲ್ಲದಿದ್ದರೂ—ಸಂಸ್ಕೃತ ಗುಣವಾಚಕವು ಕನ್ನಡ ನಾಮವಾಚಕವನ್ನು ವಿಶೇ

ಷಿಸುವಾಗ ಮಧ್ಯದಲ್ಲಿ ಯಾವಾಗಲೂ "ಅದ" ಎಂಬ ಪ್ರತ್ಯಯವನ್ನು ಸೇರಿಸಬೇಕು.

ಉದಾಹರಣೆ.

ಉನ್ನತ ಮರ=ಉನ್ನತವಾದ ಮರ.

67. ನಿಷ್ಪನ್ನ ಗುಣವಾಚಕಗಳು ಯಾವವು?

ಶುದ್ಧ ಗುಣವಾಚಕಗಳಿಗೆ ಅನು, ಅಳು, ಅರು, ಅದು, ಅವುಗಳು ಎಂಬ ತ್ರಿಲಿಂಗವಚನದ್ವಯ ಸೂಚಕಗಳಾದ ಪ್ರತ್ಯಯಗಳನ್ನು ಹತ್ತಿಸಿ ನಾಮವಾಚಕಗಳಂತೆ ರೂಪ ನಿಷ್ಪತ್ತಿ ಮಾಡಲಾಗಿ ಗುಣಯುಕ್ತವಾದ ವಸ್ತುಗಳನ್ನು ಸ್ವತಂತ್ರವಾಗಿ ಬೋಧಿಸುವ ನಿಷ್ಪನ್ನ ಗುಣವಾಚಕಗಳಾಗುವವು.

ಉದಾಹರಣೆ.

ಏಕವಚನ.	ಬಹುವಚನ.	ಏಕವಚನ.	ಬಹುವಚನ.
ಪುಂ. ಸ್ತ್ರೀ.		ಪುಂ ಸ್ತ್ರೀ.	ನಪುಂಸಕ.

ಕರಿಯನು, ಕರಿಯಳು, ಕರಿಯರು, ಕರಿದು, ಕರಿಯವು.
ಹಿರಿಯನು, ಹಿರಿಯಳು, ಹಿರಿಯರು, ಹಿರಿದು, ಹಿರಿಯವು.

ಆದರೆ ಇವಕ್ಕೆ ಪ್ರತಿಷೇಧವಾಗಿ ಹೊಸ ಹಳೇ ಎಂಬ ಶುದ್ಧ ಗುಣವಾಚಕಗಳ ಮೇಲೆ ಪುಂ ಸ್ತ್ರೀಲಿಂಗ ಪ್ರತ್ಯಯಗಳನ್ನು ಅನುಬಂಧಿಸುವಾಗ ಮಧ್ಯದಲ್ಲಿ ಬಕಾರಾಗಮವೂ ಬಳ್ಳೀ ಎಂಬ ಶುದ್ಧ ಗುಣವಾಚಕಕ್ಕೆ ಪುಂ ಸ್ತ್ರೀಲಿಂಗ ಪ್ರತ್ಯಯಗಳನ್ನು ಹತ್ತಿಸುವಾಗ ನಡುವೆ ವಕಾರದೇಶವೂ ಬರುವದು.

ಉದಾಹರಣೆ.

ಏಕವಚನ.		ಬಹುವಚನ.
ಪುಂ.	ಸ್ತ್ರೀ.	ಪುಂಸ್ತ್ರೀ.
ಹಳಬನು	ಹಳಬಳು	ಹಳಬರು.
ಹೊಸಬನು	ಹೊಸಬಳು	ಹೊಸಬರು.
ಬಳ್ಳೇವನು	ಬಳ್ಳೇವಳು	ಬಳ್ಳೇವರು.

ಈ ನಿಷ್ಪನ್ನ ಗುಣವಾಚಕಗಳೆಲ್ಲಾ ಸರ್ವನಾಮಗಳಂತೆ ವಿಭಕ್ತಿ ಪ್ರತ್ಯಯಗಳನ್ನು ಹೊಂದುವವು.

೬೪. ಸಂಖ್ಯಾ ವಾಚಕಗಳ ವಿವರವು ಹ್ಯಾಗೆ?

ನಾಮವಾಚಕಗಳನ್ನು ಸಂಖ್ಯೆಯಿಂದ ವಿಶೇಷಿಸುವವುಗಳಾಗಿ ಸರ್ವ ನಾಮಗಳಂತೆ ರೂಪ ನಿಷ್ಪತ್ತಿಯನ್ನು ಹೊಂದುವ ಒಂದು ಎರಡು ಎಂಬ ಸಂಖ್ಯಾವಾಚಕಗಳಿಗೆ ಏಳು ಎಂಬ ಸಂಖ್ಯೆಯುವರಿವಿಗೆ ಪುಂಸ್ತ್ರೀ ಲಿಂಗಗಳಲ್ಲಿ ಒಬ್ಬನು ಒಬ್ಬಳು ಇತ್ಯಾದಿ ಆಗಮಗಳು ಬರುವವು. ಆದರೆ ಒಂದು ಎಂಬದನ್ನುಳಿದ ಸಂಖ್ಯಾ ವಾಚಕಗಳಿಗೆ ತ್ರಿಲಿಂಗಗಳಲ್ಲಿಯೂ ಬಹು ವಚನವೇ ಹೊರ್ತು ಏಕವಚನವಿಲ್ಲ.

ಉದಾಹರಣೆ.

ಒಂದು ಎಂಬ ಸಂಖ್ಯೆಗೆ.

ಪು	ಸ್ತ್ರೀ	ನಪುಂಸಕ
ಒಬ್ಬನು	ಒಬ್ಬಳು	ಒಂದು*

ಉಳಿದ ಸಂಖ್ಯಾ ವಾಚಕಗಳು.

ಪುಂ ಸ್ತ್ರೀ		ನಪುಂಸಕ
ಇಬ್ಬರು	..	ಎರಡು
ಮೂವರು	..	ಮೂರು
ನಾಲ್ವರು	..	ನಾಲ್ಕು
ಐವರು	..	ಐದು
ಆರ್ವರು	..	ಆರು
ಏಳ್ವರು	..	ಏಳು

* ಪುಂ ಸ್ತ್ರೀಲಿಂಗಗಳಿಗೆ ಗೌರವಾರ್ಥಕವು ಒಬ್ಬರು.

ಇದಲ್ಲದೆ ಇಲ್ಲಿ ತಿಳಿಯ ಬೇಕಾದದ್ದೇನೆಂದರೆ ಒಂ ದೆಂಬದನ್ನುಳಿದ ಸಂಖ್ಯಾ ವಾಚಕಗಳೆಲ್ಲಾ ಸ್ವಭಾ ವವಾಗಿ ಬಹುವಚನ ಉಳ್ಳವುಗಳಾದಾಗ್ಯೂ ನ ಪುಂಸಕ ಲಿಂಗದಲ್ಲಿ ಮಾತ್ರ ಎರಡುಗಳು ಮೂರು ಗಳು ಎಂತಲೂ ಗಣಿತದಲ್ಲಿ ಮಗ್ಗೀಗಳನ್ನು ಹೇಳು ವಾಗ ಒಂದ್ಲು ಎರಡ್ಲು ಮೂರ್ಲು ಎಂತಲೂ ವಿಕಲ್ಪ ವಾಗಿ ಬಹುವಚನವನ್ನು ಹೇಳುವ ಪದ್ಧತಿ ಉಂಟು, ಅವುಗಳೆಲ್ಲಾ ಪ್ರಯೋಗ ಗಮ್ಯಗಳು. ಅಂದರೆ ಪ್ರ ಯೋಗದಿಂದ ತಿಳುಕೊಳ್ಳತಕ್ಕವುಗಳು. ಈ ಸಂಖ್ಯಾ ವಾಚಕಗಳನ್ನೆಲ್ಲಾ ಸರ್ವನಾಮದಂತೆ ಬಹುವಚ ನದಲ್ಲಿ ಮಾತ್ರ ಪ್ರತ್ಯಯಗಳೊಂದಿಗೆ ರೂಪ ನಿಷ್ಪತ್ತಿ ಮಾಡಲಾಗುವದು.

69. ಸಂಖ್ಯಾ ನಿರ್ದಿಷ್ಟ ವಾಚಕಗಳು ಯಾವವು ?

ಸಂಖ್ಯೆಗೆ „ಅನೆ" ಎಂಬ ಪ್ರತ್ಯಯವನ್ನು ಕೂಡಿಸಿ ಸಂಖ್ಯೆಯಿಂದ ಒಂದು ಮುಖ್ಯವಸ್ತುವನ್ನು ನಿರ್ದೇ ಶಿಸುವ ಸಂಖ್ಯಾ ನಿರ್ದಿಷ್ಟ ವಾಚಕಗಳಿಗೆ ತ್ರಿಲಿಂಗ ನಾಮವಾಚಕಗಳ ಅಡಿಯಲ್ಲಿ ಸೇರಿ ಅವುಗಳನ್ನು ನಿರ್ದೇಶಿಸುವಾಗ ರೂಪ ನಿಷ್ಪತ್ತಿ ಇಲ್ಲದಿದ್ದರೂ— ಇವುಗಳಿಗೆ ಪ್ರಥಮ ಪುರುಷ ತ್ರಿಲಿಂಗ ಸರ್ವನಾಮ ಗಳನ್ನು ಹತ್ತಿಸುವದರಿಂದ ಸಂಖ್ಯಾನಿರ್ದಿಷ್ಟ ವಸ್ತು ವನ್ನು ಸ್ವತಂತ್ರವಾಗಿ ಬೋಧಿಸುವದಲ್ಲದೆ ಸರ್ವ ನಾಮಗಳಂತೆ ರೂಪನಿಷ್ಪತ್ತಿಯನ್ನು ಹೊಂದುವವು.

ಉದಾಹರಣೆ.

ತ್ರಿಲಿಂಗ	ಪು.	ಸ್ತ್ರೀ.	ನಪುಂಸಕ.
ಒಂದನೆ	ಒಂದನೇವನು	ಒಂದನೇವಳು	ಒಂದನೇದು
ಎರಡನೆ	ಎರಡನೇವನು	ಎರಡನೇವಳು	ಎರಡನೇದು
ಹತ್ತನೆ	ಹತ್ತನೇವನು	ಹತ್ತನೇವಳು	ಹತ್ತನೇದು
ನೂರನೆ	ನೂರನೇವನು	ನೂರನೇವಳು	ನೂರನೇದು

ಆದರೆ ಒಂದನೆ ಎಂಬದಕ್ಕೆ ಬದಲಾಗಿ ಮೊದಲನೆ, ಮೊದಲನೇವನು ಮೊದಲನೇವಳು ಮೊದಲನೇದು ಎಂಬ ರೂಪಗಳನ್ನೇ ಬಹಳವಾಗಿ ಪ್ರಯೋಗಿಸುವರು.

70. ಪರಿಮಾಣವಾಚಕಗಳು ಯಾವವು ?

ಅವುಗಳು ಯಾವವೆಂದರೆ, ಬಹಳ ಸ್ವಲ್ಪ ಕೆಲವು ಹಲವು ಎಲ್ಲಾ ಇತ್ಯಾದಿಗಳು ನಾಮವಾಚಕಗಳಿಗೆ ಪೂರ್ವದಲ್ಲಿದ್ದು ಅವುಗಳನ್ನು ವಿಶೇಷಿಸುವಾಗ ರೂಪ ನಿಷ್ಪತ್ತಿ ಇಲ್ಲದಿದ್ದಾಗ್ಯೂ ಇವುಗಳಿಗೆ "ಅರು" ಎಂಬ ಪ್ರತ್ಯಯವನ್ನು ಹತ್ತಿಸಿ ಪು ಸ್ತ್ರೀಲಿಂಗ ಬಹುವಚನದಲ್ಲಿಯೂ "ಅವುಗಳು" ಎಂಬ ಪ್ರತ್ಯಯಗಳನ್ನು ಕೂಡಿಸಿ ನಪುಂಸಕಲಿಂಗ ಬಹುವಚನದಲ್ಲಿಯೂ ರೂಪ ನಿಷ್ಪತ್ತಿ ಮಾಡಲಾಗುವದು.

ಉದಾಹರಣೆ.

ಪುಂ ಸ್ತ್ರೀಲಿಂಗ.	ನಪುಂಸಕಲಿಂಗ.
ಕೆಲವರು	ಕೆಲವು
ಹಲವರು	ಹಲವು
ಎಲ್ಲರು	ಎಲ್ಲವುಗಳು

71. ಪ್ರಶ್ನಾರ್ಥಕ ಗುಣವಾಚಕಗಳು ಯಾವವು?

ಅವುಗಳು ಯಾವವೆಂದರೆ, "ಎಂಥ, ಎಷ್ಟನೇ" ಎಂಬ ಪ್ರಶ್ನಾರ್ಥಗಳಿಗೆ ಕ್ರಮವಾಗಿ ಪ್ರಥಮ ಪುರುಷದ ಸರ್ವನಾಮಗಳನ್ನು ಶೇರಿಸಲಾಗಿ ತ್ರಿಲಿಂಗ ನಾಮವಾಚಕಗಳ ಗುಣ ಸಂಖ್ಯಾ ಪರಿಮಾಣಗಳನ್ನು ಕೇಳುವವುಗಳಾಗಿ ಸರ್ವನಾಮಗಳಂತೆ ರೂಪ ನಿಷ್ಪತ್ತಿಯನ್ನು ಹೊಂದುವ ಪ್ರಶ್ನಾರ್ಥಕ ಗುಣವಾಚಕಗಳಾಗುವವು.

ಏಕವಚನ.		ಬಹುವಚನ.	ಏಕವಚನ.	ಬಹುವಚನ.
ಪುಂ	ಸ್ತ್ರೀ	ಪುಂ ಸ್ತ್ರೀ	ನಪುಂಸಕ	
ಎಂಥಾವನು	ಎಂಥಾವಳು	ಎಂಥಾವರು	ಎಂಥಾದ್ದು	ಎಂಥಾವು
ಎಷ್ಟನೇವನು	ಎಷ್ಟನೇವಳು	ಎಷ್ಟನೇವರು	ಎಷ್ಟನೇದು	ಎಷ್ಟನೇವು

72. ನಿದರ್ಶಕ ಗುಣವಾಚಕಗಳು ಯಾವವು?

ಪ್ರಶ್ನಾರ್ಥಕ ಗುಣವಾಚಕಗಳಿಗೆ ಪ್ರತ್ಯುತ್ತರವಾಗಿ ನಾಮವಾಚಕದ ಗುಣ ಸಂಖ್ಯಾ ಪರಿಮಾಣಗಳನ್ನು ತೋರಿಸಿ ಹೇಳುವ "ಅಂಥ, ಇಂಥ, ಅಷ್ಟನೇ, ಇಷ್ಟನೇ" ಎಂಬವುಗಳು ನಾಮವಾಚಕಗಳ ಆದಿಯಲ್ಲಿ ಶೇರಿ ಅವುಗಳನ್ನು ವಿಶೇಷಿಸುವಾಗ ರೂಪ ನಿಷ್ಪತ್ತಿ ಹೊಂದದಿದ್ದರೂ ಸ್ವತಂತ್ರವಾಗಿ ಹೇಳುವಾಗ ಪ್ರಥಮ ಪುರುಷದ ಸರ್ವನಾಮಗಳನ್ನು ಶೇರಿಸಲಾಗಿ ರೂಪ ನಿಷ್ಪತ್ತಿ ಹೊಂದುವ ನಿದರ್ಶಕ ಗುಣವಾಚಕಗಳಾಗುವವು.

ಉದಾಹರಣೆ.

ಏಕವಚನ.	ಬಹುವಚನ.	ಏಕವಚನ.	ಬಹುವಚನ.	
ಪುಂ	ಸ್ತ್ರೀ	ಪುಂಸ್ತ್ರೀ	ನಪುಂಸಕ	
ಅಂಥವನು	ಅಂಥವಳು	ಅಂಥವರು	ಅಂಥಾದ್ದು	ಅಂಥಾವು
ಇಂಥಾವನು	ಇಂಥಾವಳು	ಇಂಥಾವರು	ಇಂಥಾದ್ದು	ಇಂಥಾವು
ಅಷ್ಟನೇವನು	ಅಷ್ಟನೇವಳು	ಅಷ್ಟನೇವರು	ಅಷ್ಟನೇದು	ಅಷ್ಟನೇವು
ಇಷ್ಟನೇವನು	ಇಷ್ಟನೇವಳು	ಇಷ್ಟನೇವರು	ಇಷ್ಟನೇದು	ಇಷ್ಟನೇವು

ಕ್ರಿಯಾಪದ. (*Verbs.*)

73. ಕ್ರಿಯಾಪದವೆಷ್ಟು ವಿಧವು?

ವಿಧಿಗೆ ಅನುಸಾರವಾಗಿ ಸಮವಾದ ರೂಪ ನಿಷ್ಪತ್ತಿಯನ್ನು ಹೊಂದುವ ಕ್ರಿಯಾಪದವೆಂತಲೂ—ಸಮವಿಲ್ಲದೆ ವ್ಯತ್ಯಾಸವಾಗಿ ರೂಪನಿಷ್ಪತ್ತಿ ಹೊಂದುವ ವಿಕೃತಿ ಕ್ರಿಯಾಪದವೆಂತಲೂ—ರೂಪ ನಿಷ್ಪತ್ತಿ ಇಲ್ಲದ ರೂಪ ವಿಹೀನ ಕ್ರಿಯಾಪದವೆಂತಲೂ—ಕ್ರಿಯಾಪದ ವಿಕೃತಿ ಕ್ರಿಯಾಪದಗಳ ಸಂಯೋಗದಿಂದುಂಟಾಗುವ ಸಂಯುಕ್ತ ಕ್ರಿಯಾಪದವೆಂತಲೂ—೪ ವಿಧವು.

74. ಕ್ರಿಯಾಪದದಲ್ಲಿನ ಮುಖ್ಯ ಸಂಕೇತಗಳು ಎಷ್ಟು?

ಕ್ರಿಯಾಪದಗಳು ರೂಪ ನಿಷ್ಪತ್ತಿಯನ್ನು ಹೊಂದುವದಕ್ಕೆ ಮುಂಚೆ ಧಾತುವೆಂತಲೂ—ಧಾತುಗಳ ಮೇಲೆ ಶೇರುವ ಪ್ರತ್ಯಯಗಳು ಆಖ್ಯಾತ ಪ್ರತ್ಯಯಗಳೆಂತಲೂ—೨ ವಿಧವು.

75. ಧಾತು ಎಷ್ಟು ವಿಧವು ?

ಪ್ರತ್ಯಯುವಿಲ್ಲದೆ ಶುದ್ಧವಾಗಿರುವ ದೇಶ್ಯ ಧಾತುವು ಸಿದ್ಧ ಧಾತುವೆಂತಲೂ—ಇಸು ಮೊದಲಾದ ಪ್ರತ್ಯಯ ಯುಕ್ತ ಧಾತುವು ಪ್ರತ್ಯಯಾಂತ ಧಾತುವೆಂತಲೂ— ೨ ವಿಧವು.

76. ಸಿದ್ಧಧಾತು ಪ್ರತ್ಯಯಾಂತ ಧಾತುಗಳಲ್ಲಿ ಎಷ್ಟು ಭೇದಗಳು ?

ಧಾತುವಿನ ಕೃತ್ಯಕ್ಕೆ ವಿಷಯುವಾದ ಕರ್ಮ ಪದವುಳ್ಳ ಸಕರ್ಮಕ ಧಾತುವೆಂತಲೂ—ಕರ್ಮಪದವನ್ನಪೇಕ್ಷಿಸದೆ ಸ್ಥಿತಿಯನ್ನು ಹೇಳುವ ಅಕರ್ಮಕ ಧಾತುವೆಂತಲೂ— ಕೃತ್ಯವನ್ನು ಇತರರ ಮುಖಾಂತರವಾಗಿ ಮಾಡಿಸುವ ಅರ್ಥವುಳ್ಳ ಪ್ರೇರಕ ಧಾತುವೆಂತಲೂ—೩ ವಿಧವು.

ಉದಾಹರಣೆ.

ಸಕರ್ಮಕಧಾತುವಿಗೆ.	ಅಕರ್ಮಕಧಾತುವಿಗೆ.	ಪ್ರೇರಕಧಾತುವಿಗೆ.
ಹೊಡೆ	ಹೋಗು, ನಡೆ	ನಡಿಸು, ಮಾಡಿಸು

77. ಇಸು ಪ್ರತ್ಯಯದ ಪ್ರಯೋಗ ವಿಧಿಗಳು ಯಾವವು ?

೧ ಸಕರ್ಮಕ ಸಿದ್ಧ ಧಾತುವಿಗೆ ಇಸು ಪ್ರತ್ಯಯವನ್ನು ಬಂಧಿಸುವದರಿಂದ ಪ್ರೇರಕ ಧಾತುವಾಗುವದು.

ಉದಾಹರಣೆ. ಕಲಿ + ಇಸು = ಕಲಿಸು

೨ ಅಕರ್ಮಕ ಸಿದ್ಧ ಧಾತುವಿಗೆ ಇಸು ಪ್ರತ್ಯಯವನ್ನು ಕೂಡಿಸುವದರಿಂದ ಸಕರ್ಮಕ ಧಾತುವಾಗುವದು.

ಉದಾಹರಣೆ. ಮಲಗು + ಇಸು = ಮಲಗಿಸು.

೩ ಸಂಸ್ಕೃತ ನಾಮವಾಚಕ ಗುಣವಾಚಕಗಳಿಗೆ ಇಸು ಪ್ರತ್ಯಯವನ್ನು ಜೋಡಿಸುವದರಿಂದ ಹಲವು ಹೊಸ ಧಾತುಗಳಾಗುವವು.

ಉದಾಹರಣೆ.

ಭೋಗ—ಭೋಗಿಸು, ಸ್ತುತಿ—ಸ್ತುತಿಸು, ಸಮೀಪ—ಸಮೀಪಿಸು, ದುಃಖ—ದುಃಖಿಸು, ಅನುಭವ—ಅನುಭವಿಸು, ಯತ್ನ—ಯತ್ನಿಸು,

ಇದಲ್ಲದೆ ಸಂಸ್ಕೃತದ ಅಥವಾ ಕನ್ನಡದ ನಾಮವಾಚಕ ಗುಣವಾಚಕಗಳಿಗೆ ಮಾಡು ಪಡು ಆಗು ಕೊಳ್ಳು ಎಂಬ ದೇಶ್ಯ ಶಿದ್ಧ ಧಾತುಗಳನ್ನು ಅನುಬಂಧಿಸುವದರಿಂದ ಹಲವು ಹೊಸ ಧಾತುಗಳಾಗುವವು. ಇವುಗಳಿಗೆ ಸಮಾಸ ಕ್ರಿಯೆಗಳೆಂತಲೂ ಪ್ರತ್ಯಯಾಂತ ಧಾತುಗಳೆಂತಲೂ ಸಹ ಹೆಸರು.

ಉದಾಹರಣೆ.

ತಡೆ ಮಾಡು, ದುಃಖಪಡು, ಗುಣವಾಗು, ಹೆಸರುಗೊಳ್ಳು.

78. ಕ್ರಿಯಾರೂಪಗಳೆಷ್ಟು ವಿಧವು?

ಸರ್ವನಾಮಗಳಿಂದ ಹುಟ್ಟಿದ ಆಖ್ಯಾತ ಪ್ರತ್ಯಯಗಳನ್ನು ಹೊಂದುವ ಪುರುಷತ್ರಯಾರ್ಥಕ ಕ್ರಿಯಾ ರೂಪವೆಂತಲೂ—ಕ್ರಿಯೆಯಿಂದುಂಟಾದ ಹೆಸರುಗಳನ್ನು ತಿಳಿಸುವ ನಾಮಾತ್ಮಕ ಕ್ರಿಯಾ ರೂಪವೆಂತಲೂ—ವ್ಯತ್ಯಾಸ ಹೊಂದದೆ ಯಾವಾಗಲೂ ಏಕ ರೂಪವಾಗಿರುವ ಅವ್ಯಯಾತ್ಮಕ ಕ್ರಿಯಾ ರೂಪವೆಂತಲೂ—೩ ವಿಧವು.

79. ಪುರುಷತ್ರಯಾರ್ಥಕ ಕ್ರಿಯಾರೂಪವೆಷ್ಟು ವಿಧವು?

ಧಾತುಗಳ ಮೇಲೆ ಈಗ ನಡೆಯುವ ಕಾಲವನ್ನು ಹೇಳುವ ಆಖ್ಯಾತ ಪ್ರತ್ಯಯಗಳು ಸೇರಿದರೆ ವರ್ತ

ಮಾನ ರೂಪವೆಂತಲೂ—ಹಿಂದೆ ನಡೆದ ಕಾಲವನ್ನು ತಿಳಿಸುವ ಆಖ್ಯಾತ ಪ್ರತ್ಯಯಗಳು ಶೇರಿದರೆ ಭೂತ ರೂಪವೆಂತಲೂ—ಮುಂದೆ ಬರುವ ಕಾಲವನ್ನು ಹೇಳುವ ಆಖ್ಯಾತ ಪ್ರತ್ಯಯಗಳು ಶೇರಿದರೆ ಭವಿಷ್ಯದ್ರೂಪವೆಂತಲೂ—ಕ್ರಿಯೆಯನ್ನು ಸಂದೇಹವಾಗಿ ಮಾಡುತ್ತೇನೆಂಬರ್ಥದಲ್ಲಿ ಬರುವ ಆಖ್ಯಾತ ಪ್ರತ್ಯಯಗಳು ಶೇರಿದರೆ ಸಂಶಯ ರೂಪವೆಂತಲೂ—ಆಜ್ಞೆಯನ್ನೊರೆಯುವ ಆಖ್ಯಾತ ಪ್ರತ್ಯಯಗಳು ಶೇರಿದರೆ ವಿಧಿ ರೂಪವೆಂತಲೂ—ನಿಷೇಧಾರ್ಥವನ್ನು ಹೇಳುವ ಆಖ್ಯಾತ ಪ್ರತ್ಯಯಗಳು ಶೇರಿದರೆ ನಿಷೇಧ ರೂಪವೆಂತಲೂ—೬ ವಿಧವು.

80. ಈ ರೂಪಗಳಲ್ಲಿ ಇನ್ನೇನಾದರೂ ವಿಶೇಷ ಉಂಟೋ?

ಈ ಪ್ರತಿ ರೂಪಗಳಲ್ಲಿಯೂ ಉತ್ತಮ ಮಧ್ಯಮ ಪ್ರಥಮ ಪುರುಷಗಳೂ—ಪುಂ ಸ್ತ್ರೀ ನಪುಂಸಕ ಲಿಂಗಗಳೂ—ಏಕವಚನ ಬಹುವಚನಗಳೂ—ಬರುವವು. ಆದ್ದರಿಂದಲೇ ಇದಕ್ಕೆ ಪುರುಷತ್ರಯಾರ್ಥಕ ಕ್ರಿಯಾರೂಪವೆಂದು ಹೆಸರು.

81. ಮೇಲೆ ಹೇಳಿದ ಆರು ವಿಧವಾದ ಆಖ್ಯಾತ ಪ್ರತ್ಯಯಗಳು ಯಾವವು?

ಅವುಗಳನ್ನೆಲ್ಲಾ ಪುರುಷತ್ರಯ ಲಿಂಗತ್ರಯ ವಚನದ್ವಯ ಸಹಿತವಾಗಿ ಇಲ್ಲಿ ಬರೆದಿರುವ ಪಟ್ಟಿಯಿಂದ ತಿಳಿಯಬೇಕು.

ಆಖ್ಯಾತಪ್ರತ್ಯಯಗಳ ಪಟ್ಟಿ.

	ವರ್ತಮಾನ ರೂಪ.		ಭೂತ ರೂಪ.		ಭವಿಷ್ಯದ್ರೂಪ		ಸಂಶಯ ರೂಪ.		ವಿಧಿ ರೂಪ.		ನಿಷೇಧ ರೂಪ.	
			ಉ	ತ್ತ	ಮ	ಪು	ರು	ಷ.				
	ಏಕ	ಬಹು	ಏಕ	ಬಹು	ಏಕ	ಬಹು	ಏಕ	ಬಹು	ಏಕ	ಬಹು	ಏಕ	ಬಹು
	ಏನೆ	ಏವೆ	ಎನು	ಎವು	ಎನು	ಎವು	ಏನು	ಏವು	ಉವೆ	ಉವ / ಓಣ	ಎನು	ಎವು
			ಮ	ಧ್ಯ	ಮ	ಪು	ರು	ಷ.				
	ಈ	ಈರಿ	ಇಎ	ಇರಿ	ಇ	ಇರಿ	ಈಯೆ	ಈರಿ	ಉ	ಇರಿ	ಎ	ಅರಿ
			ಪ್ರ	ಥ	ಮ	ಪು	ರು	ಷ.				
ಪುಂ.	ಅನೆ	ಆರೆ	ಅನು	ಅರು	ಅನು	ಅರು	ಆನು	ಆರು	ಅಲಿ	ಅಲಿ	ಅನು	ಅರು
ಸ್ತ್ರೀ.	ಆಳೆ	ಆರೆ	ಅಳು	ಅರು	ಅಳು	ಅರು	ಆಳು	ಆರು	ಅಲಿ	ಅಲಿ	ಅಳು	ಅರು
ನಪುಂ.	ಅದೆ	ಅವೆ	ಇತು	ಅವು	ಅದು	ಅವು	ಈತು	ಆವು	ಅಲಿ	ಅಲಿ	ಅದು	ಅವು

82. ಆಖ್ಯಾತ ಪ್ರತ್ಯಯಗಳನ್ನು ಧಾತುವಿಗೆ ಸೇರಿಸುವ ಸಂಧಿ ವಿಧಿಗಳು ಯಾವವು?

೧. ಧಾತುವಿಗೆ ವರ್ತಮಾನ ಪ್ರತ್ಯಯಗಳು ಪರವಾದಾಗ ಧಾತುವಿಗೂ ಪ್ರತ್ಯಯಕ್ಕೂ ನಡುವೆ "ಉತ್ತ" ಎಂಬ ಆಗಮ ಬರುತ್ತದೆ.

೨. ಭೂತ ಪ್ರತ್ಯಯಗಳು ಪರವಾದಾಗ "ದ" ಕಾರಾಗಮ ಬರುತ್ತದೆ. ಆದರೆ ಉಕಾರಾಂತ ಧಾತುವಿಗೆ ದ ಕಾರಾಗಮ ಬಂದಾಗ ಧಾತುವಿನ ಉಕಾರಕ್ಕೆ "ಇ" ಕಾರಾದೇಶ ಬರುತ್ತದೆ.

೩. ಧಾತುವಿಗೆ ಭವಿಷ್ಯತ್ಪ್ರತ್ಯಯಗಳು ಪರವಾದಾಗ ಧಾತುವಿಗೂ ಪ್ರತ್ಯಯಕ್ಕೂ ಮಧ್ಯದಲ್ಲಿ "ಉವ" ಎಂಬ ಆಗಮ ಬರುತ್ತದೆ.

೪. ಧಾತುವಿಗೆ ಈತು ಈರಿ ಎಂಬವನ್ನುಳಿದ ಎಲ್ಲಾ ಸಂಶಯರೂಪ ಪ್ರತ್ಯಯಗಳು ಪರವಾದಾಗಲೂ ಧಾತ್ವಂತದ ಉಕಾರಕ್ಕೆ ಇಕಾರಾದೇಶವೂ ಪ್ರತ್ಯಯದಲ್ಲಿನ ಸ್ವರಕ್ಕೆ ಎಕಾರಾದೇಶವೂ ಬರುತ್ತದೆ.

೫. ಧಾತುವಿಗೆ ವಿಧಿ ಪ್ರತ್ಯಯಗಳು ಪರವಾದಾಗ ಮಧ್ಯಮ ಪುರುಷೈಕವಚನವು ಧಾತು ಸ್ವರೂಪದಲ್ಲಿಯೇ ನಿಲ್ಲುವದು. ನಿಂತ ಏಕವಚನ ಬಹುವಚನಗಳಲ್ಲಿ ಧಾತ್ವಂತದ ಉಕಾರಕ್ಕೆ ಅಕಾರಾದೇಶವೂ ಮಧ್ಯಮ ಪುರುಷ ಬಹುವಚನದಲ್ಲಿ ಮಾತ್ರ ಅದಕ್ಕೆ ಇಕಾರಾದೇಶವೂ ಬರುವದು.

೬. ಧಾತುವಿಗೆ ನಿಷೇಧ ಪ್ರತ್ಯಯಗಳು ಪರವಾದಾಗ ಆಗಮಾದೇಶಗಳು ಬಂದೂ ಇಲ್ಲದೆ ಧಾತು ಪ್ರತ್ಯಯಗಳ ಸಂಬಂಧವು ಕನ್ನಡ ಸಂಧಿ ವಿಧಿಗಳನ್ನನುಸರಿಸಿ ಬರುವದು. ಇವುಗಳ ಉದಾಹರಣೆಗಳನ್ನು ಮುಂದೆ ಬರದಿರುವ ಕ್ರಿಯಾರೂಪ ನಿಷ್ಪತ್ತಿಯನ್ನು ನೋಡಿದರೆ ತಿಳಿಯಲಾಗುವದು.

ಕ್ರಿಯಾರೂಪ ನಿಷ್ಪತ್ತಿ ಉಕಾರಾಂತ ಧಾತು (ಮಾಡು)

	ವರ್ತಮಾನ ರೂಪ.		ಭೂತರೂಪ.		ಭವಿಷ್ಯದ್ರೂಪ	
	ಏಕವಚನ.	ಬಹುವಚನ.	ಏಕವಚನ,	ಬಹುವಚನ.	ಏಕವಚನ	ಬಹುವಚನ.
ಉ	ಮಾಡುತ್ತೇನೆ	ಮಾಡುತ್ತೇವೆ	ಮಾಡಿದೆನು	ಮಾಡಿದೆವು	ಮಾಡುವೆನು	ಮಾಡುವೆವು
ಮ.	ಮಾಡುತ್ತೀ	ಮಾಡುತ್ತೀರಿ	ಮಾಡಿದಿ	ಮಾಡಿದಿರಿ	ಮಾಡುವಿ	ಮಾಡುವಿರಿ
ಪ್ರ ಪುಂ.	ಮಾಡುತ್ತಾನೆ	ಮಾಡುತ್ತಾರೆ	ಮಾಡಿದನು	ಮಾಡಿದರು	ಮಾಡುವನು	ಮಾಡುವರು
ಸ್ತ್ರೀ.	ಮಾಡುತ್ತಾಳೆ	ಮಾಡುತ್ತಾರೆ	ಮಾಡಿದಳು	ಮಾಡಿದರು	ಮಾಡುವಳು	ಮಾಡುವರು
ನಪುಂ.	ಮಾಡುತ್ತದೆ	ಮಾಡುತ್ತವೆ	ಮಾಡಿತು	ಮಾಡಿದವು	ಮಾಡುವದು	ಮಾಡುವವು

	ಸಂಶಯ ರೂಪ.		ವಿಧಿ ರೂಪ.		ನಿಷೇಧ ರೂಪ.	
	ಏಕವಚನ.	ಬಹುವಚನ.	ಏಕವಚನ.	ಬಹುವಚನ.	ಏಕವಚನ.	ಬಹುವಚನ.
ಉ.	ಮಾಡೇನು	ಮಾಡೇವು	ಮಾಡುವೆ	ಮಾಡುವ ಮಾಡೋಣ	ಮಾಡೆನು	ಮಾಡೆವು
ಮ.	ಮಾಡೀಯೆ	ಮಾಡೀರಿ	ಮಾಡು	ಮಾಡಿರಿ	ಮಾಡೆ	ಮಾಡರಿ
ಪ್ರ ಪುಂ.	ಮಾಡ್ಯಾನು	ಮಾಡ್ಯಾರು	ಮಾಡಲಿ	ಮಾಡಲಿ	ಮಾಡನು	ಮಾಡರು
ಸ್ತ್ರೀ.	ಮಾಡ್ಯಾಳು	ಮಾಡ್ಯಾರು	ಮಾಡಲಿ	ಮಾಡಲಿ	ಮಾಡಳು	ಮಾಡರು
ನಪುಂ.	ಮಾಡೀತು	ಮಾಡ್ಯಾವು	ಮಾಡಲಿ	ಮಾಡಲಿ	ಮಾಡದು	ಮಾಡವು

ಕ್ರಿಯಾರೂಪ ನಿಷ್ಪತ್ತಿ ಎ ಇ ಕಾರಾಂತ ಧಾತು, (ಕರ, ಹೊಲಿ) *

	ವರ್ತಮಾನ ರೂಪ.		ಭೂತ ರೂಪ.		ಭವಿಷ್ಯ ದ್ರೂಪ.	
	ಏಕವಚನ.	ಬಹುವಚನ.	ಏಕವಚನ.	ಬಹುವಚನ.	ಏಕವಚನ	ಬಹುವಚನ.
ಉ.	ಕರೆಯುತ್ತೇನೆ	ಕರೆಯುತ್ತೇವೆ	ಕರೆದೆನು	ಕರೆದೆವು	ಕರೆಯುವೆನು	ಕರೆಯುವೆವು
ಮ.	ಕರೆಯುತ್ತಿ	ಕರೆಯುತ್ತೀರಿ	ಕರೆದೆ (ದಿ)	ಕರೆದಿರಿ	ಕರೆಯುವಿ	ಕರೆಯುವಿರಿ
ಪ್ರ. ಪುಂ.	ಕರೆಯುತ್ತಾನೆ	ಕರೆಯುತ್ತಾರೆ	ಕರೆದನು	ಕರೆದರು	ಕರೆಯುವನು	ಕರೆಯುವರು
ಸ್ತ್ರೀ.	ಕರೆಯುತ್ತಾಳೆ	ಕರೆಯುತ್ತಾರೆ	ಕರೆದಳು	ಕರೆದರು	ಕರೆಯುವಳು	ಕರೆಯುವರು
ನಪುಂ.	ಕರೆಯುತ್ತದೆ	ಕರೆಯುತ್ತವೆ	ಕರೆಯಿತು	ಕರೆದವು	ಕರೆಯುವದು	ಕರೆಯುವವು

	ಸಂಶಯ ರೂಪ.		ವಿಧಿ ರೂಪ.		ನಿಷೇಧ ರೂಪ.	
	ಏಕವಚನ.	ಬಹುವಚನ	ಏಕವಚನ.	ಬಹುವಚನ.	ಏಕವಚನ.	ಬಹುವಚನ.
ಉ.	ಕರೆದೇನು	ಕರೆದೇವು	ಕರೆಯುವೆ ಕರೆಯುವ	ಕಕರೆಯೋಣ	ಕರೆಯೆನು	ಕರೆಯೆವು
ಮ.	ಕರೆದೀಯೆ	ಕರೆದೀರಿ	ಕರೆ	ಕರೆಯಿರಿ	ಕರೆಯೆ	ಕರೆಯರಿ
ಪ್ರ. ಪುಂ.	ಕರೆದಾನು	ಕರೆದಾರು	ಕರೆಯಲಿ	ರೆಯಲಿ	ಕರೆಯನು	ಕರೆಯರು
ಸ್ತ್ರೀ.	ಕರೆದಾಳು	ಕರೆದಾರು	ಕರೆಯಲಿ	ಕರೆಯಲಿ	ಕರೆಯಳು	ಕರೆಯರು
ನಪುಂ.	ಕರೆದೀತು	ಕರೆದಾವು	ಕರೆಯಲಿ	ಕರೆಯಲಿ	ಕರೆಯದು	ಕರೆಯವು

* ಹೊಲಿ ಎಂಬ ಧಾತುವಿನ ರೂಪಗಳನ್ನು ಹೀಗೆಯೇ ಊಹಿಸತಕ್ಕದ್ದು.

83. ನಾಮಾತ್ಮಕ ಕ್ರಿಯಾರೂಪವೆಷ್ಟು ವಿಧವು?
ವರ್ತಮಾನ ಭವಿಷ್ಯದ್ರೂಪಗಳಲ್ಲಿ ಧಾತುವಿಗೆ "ಉವ" ಎಂಬ ಪ್ರತ್ಯಯವನ್ನೂ ಭೂತ ರೂಪದಲ್ಲಿ "ಇದ,ದ" ಎಂಬ ಪ್ರತ್ಯಯಗಳನ್ನೂ ನಿಷೇಧ ರೂಪದಲ್ಲಿ "ಅದ" ಎಂಬ ಪ್ರತ್ಯಯವನ್ನೂ ಸೇರಿಸುವದರಿಂದ ಗುಣವಾಚಕದಂತೆ ನಾಮಪದಗಳನ್ನು ವಿಶೇಷಿಸುವ ಕೃದ್ವಾಚಿ ಎಂತಲೂ—ಈ ಕೃದ್ವಾಚಿಗಳಿಗೆ ಪ್ರಥಮ ಪುರುಷಲಿಂಗತ್ರಯ ಸರ್ವನಾಮಗಳನ್ನು ಕೂಡಿಸುವದರಿಂದಲಾಗುವ ಕೃನ್ನಾಮವೆಂತಲೂ—ಧಾತುವಿಗೆ ವರ್ತಮಾನ ರೂಪದಲ್ಲಿ " ಓಣ " ಎಂಬ ಪ್ರತ್ಯಯವನ್ನೂ ಭವಿಷ್ಯದ್ರೂಪದಲ್ಲಿ " ಉವದು " ಎಂಬ ಪ್ರತ್ಯಯವನ್ನೂ ಭೂತರೂಪದಲ್ಲಿ ಭೂತ ಕೃದ್ವಾಚಿಗೆ "ದು" ಎಂಬ ಪ್ರತ್ಯಯವನ್ನೂ ನಿಷೇಧ ರೂಪದಲ್ಲಿ ನಿಷೇಧ ಕೃದ್ವಾಚಿಗೆ "ದು" ಪ್ರತ್ಯಯವನ್ನೂ ಅನುಬಂಧಿಸುವದರಿಂದಲಾಗುವ ಕ್ರಿಯಾ ನಾಮವೆಂತಲೂ—೩ ವಿಧವು.

ಉದಾಹರಣೆ.

ಕೃದ್ವಾಚಿಗೆ.

ವರ್ತಮಾನ.	ಭೂತ.	ಭವಿಷ್ಯತ್ತು.	ನಿಷೇಧ.
ಮಾಡುವ	ಮಾಡಿದ	ಮಾಡುವ	ಮಾಡದ
ಕರೆಯುವ	ಕರೆದ	ಕರೆಯುವ	ಕರೆಯದ

ಕೃನ್ನಾಮಕ್ಕೆ.

ವರ್ತಮಾನ.	ಭವಿಷ್ಯತ್.	ಭೂತ.	ನಿಷೇಧ.
ಮಾಡುವವನು		ಮಾಡಿದವನು	ಮಾಡದವನು
ಕರೆಯುವವನು		ಕರೆದವನು	ಕರೆಯದವನು

ಕ್ರಿಯಾನಾಮಕ್ಕೆ.

ವರ್ತಮಾನ.	ಭೂತ.	ಭವಿಷ್ಯತ್.	ನಿಷೇಧ,
ಮಾಡೋಣ	ಮಾಡಿದ್ದು	ಮಾಡುವದು	ಮಾಡದ್ದು
ಕರೆಯೋಣ	ಕರೆದದ್ದು	ಕರೆಯುವದು	ಕರೆಯದ್ದು

ಮೇಲೆ ಹೇಳಿದ ಕೃನ್ನಾಮ ಕ್ರಿಯಾನಾಮಗಳು ತ್ರಿಲಿಂಗಗಳಲ್ಲಿಯೂ ಸರ್ವನಾಮಗಳಂತೆ ರೂಪ ನಿಷ್ಪತ್ತಿ ಹೊಂದುವವು.

84. ಅವ್ಯಯಾತ್ಮಕ ಕ್ರಿಯಾ ರೂಪವೆಷ್ಟು ವಿಧವು?

ಧಾತುಗಳ ಮೇಲೆ "ಅ, ಅಲು, ಅಲಿಕ್ಕೆ" ಎಂಬ ಪ್ರತ್ಯಯಗಳನ್ನು ಸೇರಿಸಲು ಕಾಲ ತ್ರಯಗಳಲ್ಲಿಯೂ ವ್ಯತ್ಯಾಸವಾಗದೆ ಕ್ರಿಯೆಯನ್ನು ಭಾವಾರ್ಥವಾಗಿ ಹೇಳುವ ಭಾವ ರೂಪವೆಂತಲೂ—ವರ್ತಮಾನ ಭವಿಷ್ಯದ್ರೂಪಗಳಲ್ಲಿ "ಉತ್ತಾ" ಎಂಬ ಅಸಮಾಪಕ ಪ್ರತ್ಯಯವನ್ನೂ ಭೂತರೂಪದಲ್ಲಿ ಇ, ದು, ಎಂಬ ಅಸಮಾಪಕ ಪ್ರತ್ಯಯಗಳನ್ನೂ ನಿಷೇಧರೂಪದಲ್ಲಿ "ಅದೆ" ಎಂಬ ಅಸಮಾಪಕ ಪ್ರತ್ಯಯವನ್ನೂ ಹೊಂದಿ ಮತ್ತೊಂದು ಕ್ರಿಯೆಯನ್ನಾ ಕಾಂಕ್ಷಿಸುವ ನ್ಯೂನ ರೂಪವೆಂತಲೂ—೨ ವಿಧವು. ಕಾಲತ್ರಯ ವೆಂದರೆ: ವರ್ತಮಾನ ಭೂತ ಭವಿಷ್ಯತ್ಕಾಲಗಳು ಮೂರು.

ಉದಾಹರಣೆ.

ಭಾವರೂಪಕ್ಕೆ.		ನ್ಯೂನ ರೂಪಕ್ಕೆ.		
		ವರ್ತಮಾನ, ಭವಿಷ್ಯತ್ತು.	ಭೂತ	ನಿಷೇಧ.
ಮಾಡ,	ಕರೆಯ			
ಮಾಡಲು,	ಕರೆಯಲು	ಮಾಡ ತ್ತಾ	ಮಾಡಿ	ಮಾಡದೆ
ಮಾಡಲಿಕ್ಕೆ.	ಕರೆಯಲಿಕ್ಕೆ	ಕರೆಯುತ್ತಾ	ಕರೆದು	ಕರೆಯದೆ

85. ವಿಕೃತ ಕ್ರಿಯಾ ಪದಗಳು ಯಾವವು?

ಕೆಲವು ಧಾತುಗಳನ್ನು ರೂಪ ನಿಷ್ಪತ್ತಿ ಮಾಡುವಾಗ ಮುಂಚೆ ಹೇಳಿದ ವಿಧಿಗಳಿಗೆ ವ್ಯತಿರಿಕ್ತವಾಗಿ ಭೂತ ಭವಿಷ್ಯದ್ರೂಪಗಳಲ್ಲಿಯೂ ವಿಧಿ ನಿಷೇಧ ರೂಪಗಳಲ್ಲಿಯೂ ವಿಕೃತಿಯೆನ್ನೈದುವವು. ಅದಕಾರಣ ಇವುಗಳಿಗೆ, ವಿಕೃತ ಕ್ರಿಯಾಪದಗಳೆಂಬ ಹೆಸರಾಯಿತು. ಇವುಗಳ ವಿಕೃತಿ ರೂಪಗಳನ್ನು ಇಲ್ಲಿ ಬರೆದಿರುವ ಪಟ್ಟಿಯಿಂದ ತಿಳುಕೊಳ್ಳಲಾದೀತು.

ವಿಕೃತಾ ಕ್ರಿಯಾಪದಗಳ ಪಟ್ಟಿ.

ಧಾತು.	ಭೂತಕೃದ್ವಾಚಿ.	ಪ್ರಥಮ ಪುರುಷ ನಪುಂಸಕೈಕ ವಚನ.	ಆಯಾ ವರ್ಗದ ಧಾತುಗಳು.
ಆಗು	ಆದ	ಆಯಿತು	ಆಗು ಹೋಗು
ಈ	ಇತ್ತ	ಇತ್ತಿತು	ಈ ಸಾ
ಈನು	ಈದ	ಈದಿತು	ಈನು
ಉಣ್ಣು	ಉಂಡ	ಉಂಡಿತು	ಉಣ್ಣು
ಏಳು	ಎದ್ದ	ಎದ್ದಿತು	ಏಳು ಬೀಳು
ಕಲಿ	ಕಲಿತ	ಕಲಿಯಿತು	ಅರಿ ಅವಿ ಕಲಿ ಕಳಿ ಕುರಿ ಕೊಳೆ ಚಳಿ ಬಲಿ ಮರೆ ಮೆಲೆ ಮೊಳೆ ಕಿಡರು
ಕಳು	ಕದ್ದ	ಕದ್ದಿತು	ಇರು ಕಳು ಗೆಲ್ಲು ಮೆಲ್ಲು
ಕಾಣು	ಕಂಡ	ಕಂಡಿತು	ಕಾಣು
ಕೀಳು	ಕಿತ್ತ	ಕಿತ್ತಿತು	ಕೀಳು
ಕೊಡು	ಕೊಟ್ಟ	ಕೊಟ್ಟಿತು	ಅಡು ಇಡು ಉಡು ಕೆಡು ಕೊಡು ತೊಡು ನೆಡು ಪಡು ಬಿಡು ಸುಡು
ಕೊಳ್ಳು	ಕೊಂಡ	ಕೊಂಡಿತು	ಕೊಳ್ಳು
ತಳರು	ತಳರ್ದ	ತಳರಿತು	ಕವಲು ಕೊನರು ತಳಿರು ಬೆಗುರು ಜವರು ಮಡಲು ಮಿಳಿರು
ತಿನ್ನು	ತಿಂದ	ತಿಂದಿತು ತಿಂತು	ಅನ್ನು ಎನ್ನು ತಿನ್ನು ಅಳು ಆಸರು ಉಳು ಎಚ್ಚರು
ತೆರು	ತೆತ್ತ	ತೆತ್ತಿತು	ತೆರು ಬೇಸರು ಹೆರು ಹೊರು
ನಿಲ್ಲು	ನಿಂತ	ನಿಂತಿತು	ನಿಲ್ಲು
ನೋನು	ನೋತ	ನೋತಿತು	ಆನು ಕೂರು ಜೋಲು ನೂಲು ನೇಲು ನೋನು ಸಾಲು ಸೀನು ಸೋಲು ಹೇಲು
ಬೇ	ಬೆಂದ	ಬೆಂದಿತು	ಬೇ ನೋ ಮಿಾ
ಮಿದಿ	ಮಿತ್ತ	ಮಿತ್ತಿತು	ಮಿದಿ
ಸಲ್ಲು	ಸಂದ	ಸಂದಿತು ಸಂತು	ಕೊಲ್ಲು ತರು ಬರು ಸಲ್ಲು
ಹಸಿ	ಹಸಿದ	ಹಸಿಯಿತು	ಅಲೆ ಅಸೆ ಎಸೆ ಕಿಸೀ ಕುಸಿ ದುಡಿ ನುಸಿ ಬಲಿ ಪುಸಿ ಬಿರಿ ಬೆಸೆ ಬಸೆ ಮುನಿ ಹಸಿ ಹಿಸಿ ಹುಸಿ ಹೊಸೆ
ಹೂ	ಹೂತ	ಹೂತಿತು	ಕೀ ಬಾ ಬೀ ಹೂ
ಹೊಗು	ಹೊಕ್ಕ	ಹೊಕ್ಕಿತು	ಉಗು ನಗು ಬಿಗು ಮಿಗು ಹೊಗು
ಹೊದಿ	ಹೊದ್ದ	ಹೊದ್ದಿತು	ಬದಿ ಕದಿ ಹಡಿ ಹೊದಿ
ಹೊರಡು	ಹೊರಟ	ಹೊರಟಿತು	ಬಿಸಾಡು ಬಿಸುಡು ಹೊರಡು

ವಿಕೃತ ಭವಿಷ್ಯದ್ರೂಪಗಳು.

ಧಾತು.	ಭವಿಷ್ಯದ್ರೂಪ.	
ಅನ್ನು	ಅಂಬ	ಅಂಬುವ
ಎನ್ನು	ಎಂಬ	ಎಂಬುವ
ತಿನ್ನು	ತಿಂಬ	ತಿಂಬುವ
ಕೊಳ್ಳು	ಕೊಂಬ	ಕೊಂಬುವ
ಕಾಣು	ಕಾಂಬ	ಕಾಂಬುವ
ಉಣ್ಣು	ಉಂಬ	ಉಂಬುವ

ವಿಕೃತ ಮಧ್ಯಮ ಪುರುಷ ವಿಧಿರೂಪಗಳು.

ಧಾತು.	ಏಕವಚನ.	ಬಹುವಚನ.	
ತರು	ತಾ	ತನ್ನಿ	ತನ್ನಿರಿ
ಬರು	ಬಾ	ಬನ್ನಿ	ಬನ್ನಿರಿ

ಉಳಿದ ರೂಪಗಳನ್ನೆಲ್ಲಾ ಮುಂಚೆ ಹೇಳಿದ ಕ್ರಿಯಾ ರೂಪಗಳಂತೆಯೇ ಊಹಿಸಲಾಗುವದು. ಆದರೆ ಆಗು ಹೋಗು ಎಂಬ ಧಾತುಗಳ ಭೂತನ್ಯೂನಗಳು ಆಗಿ ಹೋಗಿ ಎಂದು ವಿಕಲ್ಪವಾಗಿ ಬರುವವು. ನಿಂತವುಗಳ ಭೂತನ್ಯೂನ ರೂಪಗಳೆಲ್ಲಾ ಕೃದ್ವಾಚಿಗಳ ಸ್ವರಕ್ಕೆ ಉಕಾರಾದೇಶ ಮಾಡಲು ಕ್ರಮವಾಗಿ ಆಗುವವು.

ವಿಕೃತ ನಿಷೇಧ ರೂಪಗಳು.

ಧಾತು.	ನಿಷೇಧನ್ಯೂನ.	ನಿಷೇಧಕೃದ್ವಾಚಿ.
ತರು	ತಾರದೆ	ತಾರದ
ಬರು	ಬಾರದೆ	ಬಾರದ

ವಿಕೃತ ಕ್ರಿಯಾ ಪದವಾದ ಇರು ಧಾತುವಿನ ಪ್ರಯೋಗವು ವಿಶೇಷವಾಗಿರುವದ್ದರಿಂದ ಅದರ ರೂಪ ನಿಷ್ಪತ್ತಿಯನ್ನು ಇಲ್ಲಿ ಬರೆದಿದೆ.

ಇರು ಧಾತುವಿನ ರೂಪನಿಷ್ಪತ್ತಿ.

	ವರ್ತಮಾನ ರೂಪ.				ಭೂತರೂಪ.		ಭವಿಷ್ಯದ್ರೂಪ.	
	ಏಕವಚನ.	ಬಹುವಚನ.	ಏಕವಚನ.	ಬಹುವಚನ.	ಏಕವಚನ.	ಬಹುವಚನ	ಏಕವಚನ.	ಬಹುವಚನ
ಉ	ಇರುತ್ತೇನೆ	ಇರುತ್ತೇವೆ.	ಇದ್ದೇನೆ	ಇದ್ದೇವೆ	ಇದ್ದೆನು	ಇದ್ದೆವು	ಇರುವೆನು	ಇರುವೆವು
ಮ.	ಇರುತ್ತೀ	ಇರುತ್ತೀರಿ	ಇದ್ದೀ	ಇದ್ದೀರಿ	ಇದ್ದಿ	ಇದ್ದಿರಿ	ಇರುವಿ	ಇರುವಿರಿ
ಪ್ರ. ಪುಂ.	ಇರುತ್ತಾನೆ	ಇರುತ್ತಾರೆ	ಇದ್ದಾನೆ	ಇದ್ದಾರೆ	ಇದ್ದನು	ಇದ್ದರು	ಇರುವನು	ಇರುವರು
ಸ್ತ್ರೀ.	ಇರುತ್ತಾಳೆ	ಇರುತ್ತಾರೆ	ಇದ್ದಾಳೆ	ಇದ್ದಾರೆ	ಇದ್ದಳು	ಇದ್ದರು	ಇರುವಳು	ಇರುವರು
ನಪುಂ.	ಇರುತ್ತದೆ	ಇರುತ್ತವೆ	ಇದೆ	ಇವೆ	ಇತ್ತು	ಇದ್ದವು	ಇರುವದು	ಇರುವವು

	ಸಂಶಯ ರೂಪ.		ವಿಧಿರೂಪ.		ನಿಷೇಧ ರೂಪ.	
	ಏಕವಚನ.	ಬಹುವಚನ.	ಏಕವಚನ.	ಬಹುವಚನ.	ಏಕವಚನ.	ಬಹುವಚನ.
ಉ.	ಇದ್ದೇನು	ಇದ್ದೇವು	ಇರುವೆ	ಇರುವ ಇರೋಣ	ಇರೆನು	ಇರೆವು
ಮ.	ಇದ್ದೀಯೆ	ಇದ್ದೀರಿ	ಇರು	ಇರಿ	ಇರೆ	ಇರರಿ
ಪ್ರ. ಪುಂ.	ಇದ್ದಾನು	ಇದ್ದಾರು	ಇರಲಿ	ಇರಲಿ	ಇರನು	ಇರರು
ಸ್ತ್ರೀ.	ಇದ್ದಾಳು	ಇದ್ದಾರು	ಇರಲಿ	ಇರಲಿ	ಇರಳು	ಇರರು
ನಪುಂ.	ಇದ್ದೀತು	ಇದ್ದಾವು	ಇರಲಿ	ಇರಲಿ	ಇರದು	ಇರವು

86. ರೂಪವಿಹೀನ ಕ್ರಿಯಾಪದಗಳು ಯಾವವು ?

ಕೆಲವು ಕ್ರಿಯಾಪದಗಳು ಧಾತು ವಿಲ್ಲದವುಗಳಾಗಿಯೂ ಕೆಲವು ಕಾಲ ರೂಪ ಭೇದಗಳಿಲ್ಲದವುಗಳಾಗಿಯೂ ಇರುವದರಿಂದ ಇವುಗಳಿಗೆ ರೂಪ ವಿಹೀನ ಕ್ರಿಯಾಪದಗಳೆಂದು ಹೆಸರಾಯಿತು. ಇವುಗಳಲ್ಲಿ ರೂಪ ವಿಹೀನ ಅವ್ಯಯ ಕ್ರಿಯೆಗಳೆಂತಲೂ, ರೂಪ ವಿಹೀನ ಆಖ್ಯಾತ ಕ್ರಿಯಾಪದಗಳೆಂತಲೂ, ೨ ವಿಧವು. ಇವುಗಳನ್ನು ಇಲ್ಲಿ ಬರೆದಿರುವ ಪಟ್ಟಿಯನ್ನು ನೋಡಿ ತಿಳಿಯತಕ್ಕದ್ದು.

ರೂಪ ವಿಹೀನ ಅವ್ಯಯ ಕ್ರಿಯೆಗಳು.

ಬೇಕು	ಬೇಡ	ಬೇಡಿರಿ	
ಬಹುದು	ಬಾರದು	ಬಾರದ	ಬಾರದೆ
ಅಲ್ಲ	ಅಲ್ಲದ	ಅಲ್ಲದೆ	
ಇಲ್ಲ	ಇಲ್ಲದ	ಇಲ್ಲದೆ	
ಸಾಕು	ಸಾಲದು	ಸಾಲದ	ಸಾಲದೆ
ಉಂಟು	ಉಳ್ಳ	ತಕ್ಕ	

ಆದರೆ ಇವುಗಳನ್ನೆಲ್ಲಾ ಮತ್ತೊಂದು ಧಾತುವಿನ ಭಾವ ರೂಪದ ಸಂಗಡ ಸೇರಿಸಿ ಪ್ರಯೋಗಿಸುವಾಗ ಇವುಗಳೇ ಸಹಾಯಕ ಕ್ರಿಯೆಗಳೆನ್ನಿಸುವವು.

ರೂಪ ವಿಹೀನ ಆಖ್ಯಾತ ಕ್ರಿಯೆಗಳಿಗೆ ಯೆಲ್ಲಾ ರೂಪಗಳೂ ಇಲ್ಲದಿರುವದರಿಂದ ಈ ಕೆಳಗೆ ಬರೆದಿರುವ ಪಟ್ಟಿಯೇ ಸಂಪೂರ್ಣ ರೂಪಗಳುಳ್ಳದ್ದೆಂದು ತಿಳಿಯಬೇಕು.

ರೂಪ ವಿಹೀನ ಆಖ್ಯಾತ ಕ್ರಿಯೆಗಳು.

ಉತ್ತಮ ಪುರುಷ.		ಮಧ್ಯಮ ಪುರುಷ.		ಪ್ರಥಮ ಪುರುಷ.				
ಏಕವಚನ.	ಬಹುವಚನ.	ಏಕವಚನ.	ಬಹುವಚನ.	ಏಕವಚನ.		ಬಹುವಚನ.	ಏಕವಚನ.	ಬಹುವಚನ.
				ಪುಂ.	ಸ್ತ್ರೀ.	ಪುಂಸ್ತ್ರೀ.	ನಪುಂಸಕ.	
ಆಪೆನು	ಆಪೆವು	ಆಪಿ	ಆಪಿರಿ	ಆಪನು	ಆಪಳು	ಆಪರು	ಆಪದು	ಆಪವು
ಆರೆನು	ಆರೆವು	ಆರಿ	ಆರಿರಿ	ಆರನು	ಆರಳು	ಆರರು	ಆರದು	ಆರವು
ಬಲ್ಲೆನು	ಬಲ್ಲೆವು	ಬಲ್ಲೆ	ಬಲ್ಲಿರಿ	ಬಲ್ಲನು	ಬಲ್ಲಳು	ಬಲ್ಲರು	ಬಲ್ಲದು	ಬಲ್ಲವು
ಒಲ್ಲೆನು	ಒಲ್ಲೆವು	ಒಲ್ಲೆ	ಒಲ್ಲಿರಿ	ಒಲ್ಲನು	ಒಲ್ಲಳು	ಒಲ್ಲರು	ಒಲ್ಲದು	ಒಲ್ಲವು

ನ್ಯೂನ ರೂಪ.	ಕೃದ್ವಾಚಿ.	ಕೃನ್ನಾಮ.	ಕ್ರಿಯಾನಾಮ.
ಆಪದೆ	ಆಪದ	ಆಪವನು	ಆಪದು
ಆರದೆ	ಆರದ	ಆರದವನು	ಆರದ್ದು
,,	ಬಲ್ಲ	ಬಲ್ಲವನು	ಬಲ್ಲದ್ದು
ಒಲ್ಲದೆ	ಒಲ್ಲದ	ಒಲ್ಲದವನು	ಒಲ್ಲದ್ದು

87. ಸಂಯುಕ್ತ ಕ್ರಿಯಾಪದಗಳುಯಾವವು?

ಕರ್ತ್ರರ್ಥಕ ಸಂಯುಕ್ತ ಕ್ರಿಯೆಗಳೆಂತಲೂ—ಕರ್ಮಣ್ಯರ್ಥಕ ಸಂಯುಕ್ತ ಕ್ರಿಯೆಗಳೆಂತಲೂ—೨ ವಿಧವು.

88. ಕರ್ತ್ರರ್ಥಕ ಸಂಯುಕ್ತ ಕ್ರಿಯಾರೂಪಗಳೆಷ್ಟು ವಿಧವು?

ಧಾತುಗಳ ವರ್ತಮಾನ ನ್ಯೂನ ರೂಪಗಳಿಗೆ ಇರು ಧಾತುವಿನ ವರ್ತಮಾನ ಭೂತ ಭವಿಷ್ಯದ್ರೂಪಗಳನ್ನು ಕೂಡಿಸುವದರಿಂದ ಇನ್ನೂ ಕ್ರಿಯೆ ಆಗಲಿಲ್ಲವೆಂಬರ್ಥವುಳ್ಳ ಅಪೂರ್ಣ ವರ್ತಮಾನ ಭೂತ ಭವಿಷ್ಯತ್ತುಗಳೆಂತಲೂ—ಧಾತುಗಳ ಭೂತ ನ್ಯೂನ ರೂಪಗಳಿಗೆ ಮೇಲೆ ಹೇಳಿದ ಇರು ಧಾತುವಿನ ರೂಪತ್ರಯಗಳನ್ನು ಕೂಡಿಸುವದರಿಂದ ಕ್ರಮವಾಗಿ ಕ್ರಿಯೆ ಸಂಪೂರ್ಣವಾಯಿತೆಂಬರ್ಥವುಳ್ಳ ಪೂರ್ಣ ವರ್ತಮಾನ ಭೂತ ಭವಿಷ್ಯತ್ತುಗಳೆಂತಲೂ—೬ ವಿಧವು. ಇದಲ್ಲದೆ ಇವುಗಳಲ್ಲಿ ಸಂಯುಕ್ತ ನಿಷೇಧ ರೂಪಗಳೂ ಕೃದ್ವಾಚಿಗಳೂ ನ್ಯೂನ ರೂಪಗಳೂ ಕೃನ್ನಾಮಗಳೂ ಕ್ರಿಯಾನಾಮಗಳೂ ಎಂಬ ಎಲ್ಲಾ ಭೇದಗಳೂ ಉಂಟು. ಅವುಗಳ ವಿವರವನ್ನೆಲ್ಲಾ ಇಲ್ಲಿ ಬರೆದಿರುವ ಉದಾಹರಣೆಗಳಿಂದ ತಿಳಿಯಲಾದೀತು.

ಕರ್ತ್ರರ್ಥಕ ಸಂಯುಕ್ತ ಕ್ರಿಯಾರೂಪ ನಿಷ್ಪತ್ತಿ.

ಅಪೂರ್ಣ ವರ್ತಮಾನ ರೂಪ.	ಅಪೂರ್ಣ ಭೂತ ರೂಪ.	ಅಪೂರ್ಣ ಭವಿಷ್ಯದ್ರೂಪ.
ಮಾಡುತ್ತಾ ಇದ್ದೇನೆ	ಮಾಡುತ್ತಾ ಇದ್ದೆನು	ಮಾಡುತ್ತಾ ಇರುವೆನು
ಮಾಡುತ್ತಿದ್ದೇನೆ	ಮಾಡುತ್ತಿದ್ದೆನು	ಮಾಡುತ್ತಿರುವೆನು

ಪೂರ್ಣ ವರ್ತಮಾನ ರೂಪ.	ಪೂರ್ಣ ಭೂತ ರೂಪ.	ಪೂರ್ಣ ಭವಿಷ್ಯ ದ್ರೂಪ.
ಮಾಡಿ ಯಿದ್ದೇನೆ	ಮಾಡಿ ಯಿದ್ದೆನು	ಮಾಡಿ ಯಿರುವೆನು
ಮಾಡಿದ್ದೇನೆ	ಮಾಡಿದ್ದೆನು	ಮಾಡಿರುವೆನು

ನಿಷೇಧ ರೂಪಗಳು.

ವರ್ತಮಾನ ರೂಪ.	ಭೂತ ರೂಪ.	ಭವಿಷ್ಯದ್ರೂಪ.
ಮಾಡದೇ ಯಿದ್ದೇನೆ	ಮಾಡದೇ ಯಿ.ದ್ದೆನು	ಮಾಡದೇ ಯಿರುವೆನು
ಮಾಡದಿದ್ದೇನೆ	ಮಾಡದಿದ್ದೆನು	ಮಾಡದಿರುವೆನು

ಇವುಗಳನ್ನೆಲ್ಲಾ ಪುರುಷತ್ರಯ ವಚನ ದ್ವಯಗಳಲ್ಲಿ ಯೂ ರೂಪ ನಿಷ್ಪತ್ತಿ ಮಾಡಲಾಗುವದು.

ನ್ಯೂನ ರೂಪಗಳು.

ವರ್ತಮಾನ ಭವಿಷ್ಯತ್ತುಗಳು.	ಭೂತ.	ನಿಷೇಧ.
ಮಾಡುತ್ತಿರುತ್ತಾ	ಮಾಡುತ್ತಿದ್ದು	ಮಾಡುತ್ತಿರದೆ
ಮಾಡಿರುತ್ತಾ	ಮಾಡಿ ಯಿದ್ದು	ಮಾಡಿ ಯಿರದೆ

ಭಾವ ರಪಗಳು.

ಮಾಡುತ್ತಿರ	ಮಾಡುತ್ತಿರಲು	ಮಾಡುತ್ತಿರಲಿಕ್ಕೆ
ಮಾಡಿ ಯಿರ	ಮಾಡಿ ಯಿರಲು	ಮಾಡಿ ಯಿರಲಿಕ್ಕೆ
ಮಾಡಿರ	ಮಾಡಿರಲು	ಮಾಡಿರಲಿಕ್ಕೆ

ಕೃದ್ವಾಚಿಗಳು.

ವರ್ತಮಾನ ಭವಿಷ್ಯತ್ತುಗಳು.	ಭೂತ.	ನಿಷೇಧ.
ಮಾಡುತ್ತಿರುವ	ಮಾಡುತ್ತಿದ್ದ	ಮಾಡುತ್ತಿರದ
ಮಾಡಿ ಯಿರುವ	ಮಾಡಿ ಯಿದ್ದ	ಮಾಡಿ ಯಿರದ
ಮಾಡಿರುವ	ಮಾಡಿದ್ದ	ಮಾಡಿರದ

ಕೃನ್ನಾಮಗಳು.

ವರ್ತಮಾನ ಭವಿಷ್ಯತ್ತುಗಳು.	ಭೂತ.	ನಿಷೇಧ.
ಮಾಡುತ್ತಿರುವವನು	ಮಾಡುತ್ತಿದ್ದವನು	ಮಾಡುತ್ತಿರದವನು
ಮಾಡಿ ಯಿರುವವನು	ಮಾಡಿ ಯಿದ್ದವನು	ಮಾಡಿ ಯಿರದವನು
ಮಾಡಿರುವವನು	ಮಾಡಿದ್ದವನು	ಮಾಡಿರದವನು

ಕ್ರಿಯಾನಾಮಗಳು.

ವರ್ತಮಾನ	ಭೂತ.	ಭವಿಷ್ಯತ್ತು.
ಮಾಡುತ್ತಿರೋಣ	ಮಾಡುತ್ತಿದ್ದದ್ದು	ಮಾಡುತ್ತಿರುವದು
ಮಾಡಿ ಯಿರೋಣ	ಮಾಡಿ ಯಿದ್ದದ್ದು	ಮಾಡಿ ಯಿರುವದು
ಮಾಡಿರೋಣ	ಮಾಡಿದ್ದದ್ದು	ಮಾಡಿರುವದು

89. ಕರ್ಮಣ್ಯರ್ಥಕ ಸಂಯುಕ್ತ ಕ್ರಿಯಾಪದಗಳು ಯಾವವು?

ಧಾತುಗಳ ಭಾವರೂಪವಾದ "ಮಾಡಲು" ಎಂಬಂಥವುಗಳಿಗೆ "ಪಡು" ಎಂಬ ಕನ್ನಡ ಧಾತುವನ್ನು ಶೇರಿಸಲಾಗಿ ಆಗುವ ಧಾತುಗಳಿಗೆ ಆಖ್ಯಾತ ರೂಪ ಭಾವರೂಪ ನ್ಯೂನ ರೂಪ ಕೃದ್ವಾಚಿ ಕೃನ್ನಾಮ ಕ್ರಿಯಾನಾಮ ನಿಷೇಧ ರೂಪ ಸಂಯುಕ್ತ ರೂಪಗಳೆಂಬ ಎಲ್ಲಾ ವ್ಯತ್ಯಾಸಗಳೂ ಉಂಟು, ಆದ್ದರಿಂದ ಅವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿವರಿಸಲವಶ್ಯವಿಲ್ಲದೆ ಉದಾಹರಣೆ ಮೂಲಕವಾಗಿ ಎಲ್ಲಾ ಭೇದಗಳನ್ನೂ ತೋರಿಸಿ ಇದೆ. ಆದರೆ ಕನ್ನಡದಲ್ಲಿಯೂ ಕರ್ಮಣ್ಯರ್ಥಕ ಸಂಯುಕ್ತ ಕ್ರಿಯಾ ಪದಗಳನ್ನು ಅಪರೂಪವಾಗಿ ಪ್ರಯೋಗಿಸುವ ಕಾಲದಲ್ಲಿ ಕರ್ಮಪದವನ್ನು ಕರ್ತೃಪದದಂತೆ ಪ್ರಥಮಾ ವಿಭಕ್ತಿಯಲ್ಲಿ ಪ್ರಯೋಗಿಸುವ ಕಾರಣ ಇವುಗಳಿಗೆ ಕರ್ಮಣ್ಯರ್ಥಕಗಳೆಂಬ ಹೆಸರಾಯಿತು.

ಕರ್ಮಣ್ಯರ್ಥಕ ಸಂಯುಕ್ತ ಕ್ರಿಯಾರೂಪ ನಿಷ್ಪತ್ತಿ.

	ವರ್ತಮಾನರೂಪ.	ಭೂತರೂಪ.	ಭವಿಷ್ಯದ್ರೂಪ.
ಏಕ.	ಕರೆಯಲ್ಪಡುತ್ತೇನೆ	ಕರೆಯಲ್ಪಟ್ಟೆನು	ಕರೆಯಲ್ಪಡುವೆನು
ಬಹು.	ಕರೆಯಲ್ಪಡುತ್ತೇವೆ	ಕರೆಯಲ್ಪಟ್ಟೆವು	ಕರೆಯಲ್ಪಡುವೆವು

	ಸಂಶಯರೂಪ.	ವಿಧಿರೂಪ.	ನಿಷೇಧರೂಪ.
ಏಕ.	ಕರೆಯಲ್ಪಟ್ಟೇನು	ಕರೆಯಲ್ಪಡುವೆ	ಕರೆಯಲ್ಪಡೆನು
ಬಹು.	ಕರೆಯಲ್ಪಟ್ಟೇವು	ಕರೆಯಲ್ಪಡೋಣ	ಕರೆಯಿಲ್ಪಡೆವು

ಹೀಗೆಯೇ ಪುರುಷತ್ರಯ ವಚನದ್ವಯಗಳಲ್ಲಿಯೂ ರೂಪ ನಿಷ್ಪತ್ತಿ ಊಹಿಸಿ ಹೇಳಿ ಕೊಳ್ಳುವದು.

ನ್ಯೂನರೂಪಗಳು.	ಭಾವರೂಪಗಳು.	ಕೃದ್ವಾಚಿಗಳು.
ಕರೆಯಲ್ಪಡುತ್ತಾ	ಕರೆಯಲ್ಪಡ	ಕರೆಯಲ್ಪಡುವ
ಕರೆಯಲ್ಪಟ್ಟು	ಕರೆಯಲ್ಪಡಲು	ಕರೆಯಲ್ಪಟ್ಟ
ಕರೆಯಲ್ಪಡದೆ	ಕರೆಯಲ್ಪಡಲಿಕ್ಕೆ	ಕರೆಯಲ್ಪಡದ

ಕೃನ್ನಾಮಗಳು.	ಕ್ರಿಯಾನಾಮಗಳು.
ಕರೆಯಲ್ಪಡೋಣ	ಕರೆಯಲ್ಪಡುವವನು
ಕರೆಯಲ್ಪಟ್ಟಿದ್ದು	ಕರೆಯಲ್ಪಟ್ಟವನು
ಕರೆಯಲ್ಪಡುವದು	ಕರೆಯಲ್ಪಡದವನು

ಅಪೂರ್ಣವರ್ತಮಾನ.	ಅಪೂರ್ಣಭೂತ.	ಅಪೂರ್ಣಭವಿಷ್ಯತ್ತು
ಕರೆಯಲ್ಪಡುತ್ತಿದ್ದೇನೆ	ಕರೆಯಲ್ಪಡುತ್ತಿದ್ದೆನು	ಕರೆಯಲ್ಪಡುತ್ತಿರುವೆನು

ಪೂರ್ಣವರ್ತಮಾನ.	ಪೂರ್ಣಭೂತ.	ಪೂರ್ಣಭವಿಷ್ಯತ್ತು.
ಕರೆಯಲ್ಪಟ್ಟು ಇದ್ದೇನೆ	ಕರೆಯಲ್ಪಟು ಇದ್ದೆನು	ಕರೆಯಲ್ಪಟ್ಟು ಇರುವೆನು

ಈ ಕೃನ್ನಾಮ ಕ್ರಿಯಾನಾಮ ಅಪೂರ್ಣ ಪೂರ್ಣ ರೂಪಗಳನ್ನೆಲ್ಲಾ ಪುರುಷತ್ರಯ ಲಿಂಗತ್ರಯ ವಚನ ದ್ವಯಗಳಲ್ಲಿಯೂ ರೂಪ ನಿಷ್ಪತ್ತಿ ಮಾಡ ಬಹುದಾದ ಕಾರಣ ಅವುಗಳನ್ನೆಲ್ಲಾ ಊಹಿಸಿಕೊಳ್ಳಬೇಕು.

ಅವ್ಯಯ. (Particles.)

90. ಅವ್ಯಯವೆಷ್ಟು ವಿಧವು?

ಕ್ರಿಯೆಗಳನ್ನು ವಿಶೇಷಿಸುವ ಕ್ರಿಯಾ ವಿಶೇಷಣಾವ್ಯಯವೆಂತಲೂ—ವಿಭಕ್ತಿ ಪ್ರತ್ಯಯಗಳಿಗೆ ಬದಲಾಗಿ ನಾಮವಾಚಕ ಸರ್ವ ನಾಮಗಳ ತುದಿಯಲ್ಲಿ ಸೇರಿ ವಿಭಕ್ತ್ಯರ್ಥವನ್ನು ಕೊಡುವ ವಿಭಕ್ತ್ಯರ್ಥ ಕಾವ್ಯಯಗಳೆಂತಲೂ—ಪದಗಳನ್ನೂ ವಾಕ್ಯಗಳನ್ನೂ ಕೂಡಿಸುವದಕ್ಕಾಗಿ ಬರುವ ಸಂಬಂಧ ಕಾವ್ಯಯಗಳೆಂತಲೂ—ಪಶು, ಪಕ್ಷಿ, ಮೃಗಾದಿಗಳ ಕೂಗುಗಳನ್ನೂ ಭೇರ್‍ಯಾದಿಗಳ ಅನರ್ಥ ಧ್ವನಿಗಳನ್ನೂ ತಿಳಿಯಪಡಿಸುವ ಅರ್ಥಹೀನ ಧ್ವನಿತಾವ್ಯಯಗಳೆಂತಲೂ—ಮನಸ್ಸಿನಲ್ಲಿನ ಸುಖ ದುಃಖ ಸಂತಾಪ ಆಶ್ಚರ್‍ಯಾದಿಗಳನ್ನು ಧ್ವನಿಯಿಂದ ಬೋಧಿಸುವ ಭಾವನಿದರ್ಶಕಾವ್ಯಯಗಳೆಂತಲೂ—೫ವಿಧವು.

91. ಕ್ರಿಯಾ ವಿಶೇಷಣ ವೆಷ್ಟುವಿಧವು?

ಕ್ರಿಯೆಯು ಸಂಭವಿಸಿದ ಸ್ಥಳವನ್ನು ವಿಶೇಷಿಸುವ ಸ್ಥಾನ ವಾಚಕವೆಂತಲೂ—ಕಾಲವನ್ನು ವಿಶೇಷಿಸುವ ಕಾಲವಾಚಕವೆಂತಲೂ—ಕ್ರಿಯೆ ನಡದ ರೀತಿಯನ್ನು ಹೇಳುವ ರೀತಿ ವಾಚಕವೆಂತಲೂ—೩ವಿಧವು.

ಉದಾಹರಣೆ.

ಸ್ಥಾನವಾಚಕ.	ಕಾಲವಾಚಕ.	ರೀತಿವಾಚಕ.
ಎಲ್ಲಿ	ಎಂದು	ಹ್ಯಾಗೆ
ಅಲ್ಲಿ	ಅಂದು	ಹೀಗೆ
ಆಚೆ	ಯಾವಾಗ	ಹಾಗೆ
ಈಚೆ	ಆಗ	ಬೇಗ
ಹೊರಗೆ	ಈಗ	ಮೆಲ್ಲನೆ
ಮೇಲೆ	ನಿನ್ನೆ	ತಣ್ಣನೆ
ಕೆಳಗೆ	ಮೊನ್ನೆ	ಸುಮ್ಮನೆ
ಹಿಂದೆ	ನಾಳೆ	ತಣ್ಣಗೆ
	ನಾಳಿದ್ದು	ಬೆಳ್ಳಗೆ

ಆದರೆ ಇಲ್ಲಿ ತಿಳಿಯಬೇಕಾದ ಅಂಶವೇನಂದರೆ, ಕನ್ನಡ ಭಾಷೆಯಲ್ಲಿ ಅನೇಕ ರೀತಿ ವಾಚಕಗಳಿಲ್ಲದಿರುವದರಿಂದ ಸಂಸ್ಕೃತ ಅಥವಾ ಕನ್ನಡ ನಾಮವಾಚಕ ಗುಣವಾಚಕಗಳಿಗೆ "ಆಗಿ" ಎಂಬ ಪ್ರತ್ಯಯವನ್ನು ಕೂಡಿಸುವದರಿಂದ ರೀತ್ಯರ್ಥವನ್ನು ವಿಶೇಷಿಸುವ ಅನೇಕವಾದ ರೀತಿ ವಾಚಕಗಳಾಗುವವು.

ಉದಾಹರಣೆ.

ನಾಮವಾಚಕ.	ರೀತಿವಾಚಕ.	ಗುಣವಾಚಕ.	ರೀತಿವಾಚಕ
ಶಾಂತ	ಶಾಂತವಾಗಿ	ಸುಖ	ಸುಖವಾಗಿ
ಕಪ್ಪು	ಕಪ್ಪಾಗಿ	ದೊಡ್ಡ	ದೊಡ್ಡದಾಗಿ

ಇದಲ್ಲದೆ ಸ್ಥಾನವಾಚಕ ಕಾಲವಾಚಕಗಳಲ್ಲಿ ಕೆಲವು ವಾಡಿಕೆಯಾಗಿ ನಾಮಪದಗಳಂತೆ ಏಕವಚನದಲ್ಲಿ ಮಾತ್ರ ವಿಭಕ್ತಿರೂಪಗಳನ್ನು ಹೊಂದುವವು. ಅವುಗಳೆಲ್ಲಾ ಪ್ರಯೋಗ ಗಂವ್ಯಗಳು.

ಉದಾಹರಣೆ.

ನಿನ್ನೆ	ಅಲ್ಲಿ
ನಿನ್ನೆಯನ್ನು	ಅಲ್ಲಿಯನ್ನು
ನಿನ್ನೆಯಿಂದ	ಅಲ್ಲಿಂದ
ನಿನ್ನೆಗೆ	ಅಲ್ಲಿಗೆ
ನಿನ್ನೆಯ ದೆಶೆಯಿಂದ	ಅಲ್ಲಿನ ದೆಶೆಯಿಂದ
ನಿನ್ನೆಯ	ಅಲ್ಲಿನ
ನಿನ್ನೆಯಲ್ಲಿ	ಅಲ್ಲಿ

92. ವಿಭಕ್ತ್ಯರ್ಥಕಾವ್ಯಯಗಳು ಯಾವವು?

ವಿಭಕ್ತ್ಯರ್ಥಕಾವ್ಯಯಗಳು ನಾಮಪದಗಳ ಸಂಗಡ ಶೇರಿ ವಿಭಕ್ತ್ಯರ್ಥವನ್ನು ಕೊಡುವದಲ್ಲದೆ ಕೆಲವು ನಾಮಪದಗಳೇ ಅವ್ಯಯಗಳಾಗಿ ಪ್ರಯೋಗಿಸಲ್ಪಡುವ ಕಾರಣ ಇವುಗಳಿಗೆ ವಿಭಕ್ತ್ಯರ್ಥ ಕಗಳೆಂದು ಹೆಸರಾಯಿತು. ಅವುಗಳಲ್ಲಿ ಕೆಲವನ್ನು ಇಲ್ಲಿ ಬರೆದಿರುವ ಉದಾಹಾರಣೆಯಿಂದ ತಿಳಿದು ಉಳಿದದ್ದನ್ನೂಹಿಸಲಾಗುವದು.

ಉದಾಹರಣೆ.

ಒಡನೆ	ಕಡೆಗೆ	ಪರ್ಯಂತರಕ್ಕೆ	ಬಳೀಲಿ	ರೀತಿಯಿಂದ
ಒಂದಿಗೆ	ಕಡೇಲಿ	ಪರ್ಯಂತರದಲ್ಲಿ	ಬೈ	ರೀತಿಯಲ್ಲಿ
ಒಳಗೆ	ಕಾರಣ	ಬಳಿಯಲ್ಲಿ	ಮೂಲ	ಸಂಗಡ
ಓಸ್ಕರ	ಕುರಿತು	ಬಳಿಗೆ	ಮುಖಾಂತರ	ಸಂಗಾತ
ಓಸರ	ಕೂಡ	ಬಳಿಯ	ಮೇರೆಗೆ	ಹತ್ತರ
ಓಪಾದಿಯಲ್ಲಿ	ನಿಮಿತ್ತ			

93. ಸಂಬಂಧಕಾವ್ಯಯಗಳು ಯಾವವು?

ಇವುಗಳು ವಾಕ್ಯಗಳನ್ನು ಸಮನ್ವಯವಾಗಿ ಪೋಣಿಸುವದಕ್ಕೆ ಪ್ರಯೋಗಿಸುವವು. ಅವುಗಳ ವಿವರವನ್ನೆಲ್ಲಾ ಉದಾಹಾರಣೆಗಳಿಂದಲೂ ರೂಢಿಯಿಂದಲೂ ಊಹಿಸ ಬಹುದು.

ಉದಾಹರಣೆ.

ಮತ್ತು	ಆಗಲಿ	ಆದರೂ	ಹೊರ್ತು
ಸುದಾ	ಅಲ್ಲದೆ	ಇನ್ನು	ಕೂಡ್ಲೆ
ಸಹ	ಇಲ್ಲವೆ	ಆದರೆ	ಇದಲ್ಲದೆ
ಅಥವಾ	ಆದಾಗ್ಯೂ	ಇಲ್ಲದೆ	ಪರಂತು

94. ಅರ್ಥ ಹೀನಧ್ವನಿತಾವ್ಯಯಗಳು ಯಾವವು ?

ಅವುಗಳು ಮೃಗಾದಿಗಳ ಕೂಗುಗಳನ್ನು ತಿಳಿಸುವದಕ್ಕೂ ಭೇರಿ ತುಪಾಕಿ ಮೊದಲಾದವುಗಳ ಸದ್ದನ್ನು ತಿಳಿಯಪಡಿಸುವದಕ್ಕೂ ಮನುಷ್ಯರು ಕೆಲಸವನ್ನು ಮಾಡುವ ವೇಗವನ್ನು ತಿಳಿಸುವದಕ್ಕೂ ಪ್ರಯೋಗಿಸುವ ಅರ್ಥ ಹೀನವಾದ ಶಬ್ದಗಳು.

ಉದಾಹರಣೆ.

ವ್ಯಾವು	ಧಣಧಣನೆ	ದಭಿಲ್ಲನೆ
ವ್ಯಾ	ಚರಚರನೆ	ಫಕ್ಕನೆ
ಬೇ—	ಘರಘರನೆ	ಫಲ್ಲನೆ
ಕೊಕ್ಕೊ	ಧೊಮ್ಮನೆ	ದೊಟ್ಟನೆ
ಕುಕ್ಕೊ	ಲೊಟಲೊಟನೆ	ಝುಟ್ಟನೆ ಇತ್ಯಾದಿ.

95. ಭಾವ ನಿದರ್ಶಕಾವ್ಯಯಗಳು ಯಾವವು ?

ಅವುಗಳು ಯಾವವೆಂದರೆ.

ದುಃಖಕ್ಕೆ.	ಸಂತೋಷಕ್ಕೆ.	ಮೆಚ್ಚಿಕೆಗೆ.	ಜಿಹಾಸೆಗೆ.
ಅಯ್ಯೊ	ಆಃ—ಆಃ	ಶಹಬಾಸ	ಛೀ
ಅಯ್ಯಯ್ಯೊ	ಅಹಹ	ಐಶಾಬಾಸ	ಅಶೇ
ಅಕಟಾ	ಅಬ್ಬಾ	ಐಸಲೇ	ಇಶಿ
ಕುಯ್ಯೋ	ಅಮಮ	ಭಲಾ	ಅಬ್
ಮೊರ್ರೋ	ಅಲಲಾ	ಅಲಾ	ಧೂತ್
ಓಯನೆ		ಓಹೋ	ಅಶ್

2. ಶಬ್ದಸಮಾಸ ಪ್ರಕರಣ. (Compound words.)

96. ಶಬ್ದಸಮಾಸ ಪ್ರಕರಣದಲ್ಲಿ ಯೇನು ಹೇಳಲ್ಪಡುತ್ತದೆ?
ಶಬ್ದಸಮಾಸ ಭೇದಗಳೂ ಅವುಗಳ ರೂಪಗಳೂ ವಿಧಿಗಳೂ ಹೇಳಲ್ಪಡುತ್ತವೆ.

97. ಶಬ್ದಸಮಾಸವೆಂದರೇನು?
ನಾಮ ಪ್ರತ್ಯಯ ಆಖ್ಯಾತ ಪ್ರತ್ಯಯಗಳಿಲ್ಲದಂತೆ ಅನೇಕ ಶಬ್ದಗಳನ್ನು ಒಂದಾಗಿ ಶೇರಿಸಿ ನುಡಿದು ಏಕಾರ್ಥವುಳ್ಳ ಏಕ ಪದವನ್ನು ಮಾಡುವದೇ ಶಬ್ದ ಸಮಾಸವೆಂದೆನಿಸುವದು. ಹೀಗೆ ಸಮಾಸ ಮಾಡಿದ ಪದಗಳಲ್ಲಿ ಮೊದಲಿನ ಪದಕ್ಕೆ ಪೂರ್ವ ಪದವೆಂತಲೂ ಎರಡನೇ ಪದಕ್ಕೆ ಪರ ಪದವೆಂತಲೂ ಹೆಸರು. ಆದರೆ ಸಮಾಸ ಮಾಡುವಲ್ಲಿ ಅನೇಕ ಪದಗಳಿದ್ದಾಗ್ಯೂ ಎರಡೆರಡು ಪದಗಳನ್ನೇ ಒಂದು ಸಮಾಸ ಮಾಡಿ ಇಂಥಾ ಸಮಾಸಗಳುಳ್ಳ ಮತ್ತೊಂದು ದೊಡ್ಡ ಸಮಾಸವಾಗ ಒಹುದು. ಆದದರಿಂದಲೇ ಪೂರ್ವ ಪದ ಪರ ಪದಗಳೆಂದು ಮುಖ್ಯ ಸಂಕೇತಗಳು ಬರುತ್ತವೆ.

98. ಶಬ್ದಸಮಾಸವೆಷ್ಟು ವಿಧವು?
ಕನ್ನಡದಲ್ಲಿ ಬರುವ ಅನೇಕ ಸಂಸ್ಕೃತ ಪದಗಳು ವೊಂದಾಗಿ ಶೇರಿ ಸಮಾಸವಾಗುವ ಸಂಸ್ಕೃತ ಶಬ್ದ ಸಮಾಸವೆಂತಲೂ' ಅನೇಕ ಕನ್ನಡ ಪದಗಳು ವೊಂದಾಗಿ ಶೇರಿ ಸಮಾಸವಾಗುವ ಕನ್ನಡ ಶಬ್ದ ಸಮಾಸವೆಂತಲೂ, ಲಕ್ಷಣ ವ್ಯತಿರಿಕ್ತವಾಗಿ ಪ್ರಾ

ಚೀನ ಕವಿಗಳು ಸಂಸ್ಕೃತ ಪದಕ್ಕೂ ಕನ್ನಡ ಪದಕ್ಕೂ ಸಮಾಸ ಮಾಡಿ ಪ್ರಯೋಗಿಸಿರುವ ಅರಿಸಮಾಸವೆಂತಲೂ ೩ ವಿಧವು.

99. ಸಂಸ್ಕೃತ ಶಬ್ದ ಸಮಾಸವೆಷ್ಟು ವಿಧವು?

ಪೂರ್ವ ಪದವು ಅರ್ಥವುಳ್ಳದ್ದಾದರೂ ಪರ ಪದವೇ ಮುಖ್ಯಾರ್ಥವುಳ್ಳದ್ದಾಗಿ ಸಮಾಸವಾಗುವ ತತ್ಪುರುಷ ಸಮಾಸವೆಂತಲೂ— ಪೂರ್ವಪದವು ಪರ ಪದಕ್ಕೆ ವಿಶೇಷಣವಾಗಿಯಾದರೂ ಉಪ ವಿಶೇಷಣವಾಗಿಯಾದರೂಯಿದ್ದು ಸಮಾಸವಾಗುವ ಕರ್ಮಧಾರಯ ಸಮಾಸವೆಂತಲೂ—ಪೂರ್ವಪದವು ಪರಪದಕ್ಕೆ ಸಂಖ್ಯಾ ಗುಣವಾಚಕವಾಗಿದ್ದು ಸಮಾಸವಾಗುವ ದ್ವಿಗು ಸಮಾಸವೆಂತಲೂ—ಎರಡು ಅಥವಾ ಅನೇಕ ಪದಗಳನ್ನುಳ್ಳದ್ದಾಗಿ ಗುಣವನ್ನಾಗಲಿ ವಸ್ತುಗಳನ್ನಾಗಲಿ ಉಂಟಾಗಿದೆ ಯೆಂಬರ್ಥವನ್ನು ಕೊಡುವ ಬಹುವ್ರೀಹಿ ಸಮಾಸವೆಂತಲೂ—ಪ್ರಧಾನಾರ್ಥವುಳ್ಳ ಪೂರ್ವ ಪದ ಉತ್ತರ ಪದಗಳನುಳ್ಳದ್ದಾಗಿ ಉತ್ತರ ಪದಾಂತ್ಯದಲ್ಲಿಯೇ ಬಹುವಚನ ಪ್ರತ್ಯಯವುಳ್ಳ ದ್ವಂದ್ವ ಸಮಾಸವೆಂತಲೂ—ಪ್ರಧಾನಾರ್ಥವುಳ್ಳ ಅವ್ಯಯವು ಪೂರ್ವ ಪದವಾಗಿದ್ದು ಸಮಾಸವಾಗುವ ಅವ್ಯಯೀಭಾವ ಸಮಾಸವೆಂತಲೂ—೬ ವಿಧವು.

100. ತತ್ಪುರುಷ ಸಮಾಸ ವೆಷ್ಟು ವಿಧವು?

ಪೂರ್ವ ಪದದಲ್ಲಿ ಯಾವ ವಿಭಕ್ತಿ ಪ್ರತ್ಯಯವು ಲೋಪಿಸಿ ಇರುವದೋ ಅದರ ಅರ್ಥಾನುಸಾರವಾಗಿ ಸಪ್ತ ವಿಭಕ್ತಿಗಳಿಗೂ ಹೇಳಿ ಕೊಳ್ಳುವಾಗ ಪ್ರಥಮಾ ತತ್ಪು

ರುಷ ದ್ವಿತೀಯಾ ತತ್ಪುರುಷವೆಂದು ಸಪ್ತ ವಿಭಕ್ತಿ ಪ್ರತ್ಯಯಗಳಿಗೂ ವಿಶೇಷಿಸಲಾಗಿ ೭ ವಿಧವಾಗುವದು.

ಉದಾಹರಣೆ.

		ಪ್ರತ್ಯಯಸಹಿತ ರೂಪಗಳು.	ಸಮಾಸಿತ ರೂಪಗಳು.
ಪ್ರ.	ತ.	ಮೂಲಕ್ಕೆ ಊರ್ಧ್ವ.	ಊರ್ಧ್ವಮೂಲ
ದ್ವಿ.	ತ.	ನಿದ್ರೆಯನ್ನು ಅತೀತ	ನಿದ್ರಾತೀತ
ತೃ.	ತ.	ಮನಸ್ಸಿನಿಂದ ನಮಸ್ಕಾರ.	ಮನೋನಮಸ್ಕಾರ
ಚ.	ತ.	ಯಕ್ಷನಿಗೆ ಬಲಿ.	ಯಕ್ಷಬಲಿ
ಪಂ.	ತ.	ರಾಜನದೆಸೆಯಿಂದ ಭೀತಿ.	ರಾಜಭೀತಿ.
ಷ.	ತ.	ಧರ್ಮದಸಾರ.	ಧರ್ಮಸಾರ.
ಸ.	ತ.	ರಣದಲ್ಲಿ ವಿಕ್ರಮ.	ರಣವಿಕ್ರಮ

ಇದಲ್ಲದೆ ಇಲ್ಲಿ ತಿಳಿಯಬೇಕಾದ ಅಂಶವೇನಂದರೆ, ಸಮಾಸ ಮಾಡುವದರಿಂದ ಪದಗಳ ಮಧ್ಯದಲ್ಲಿನ ಪ್ರತ್ಯಯಗಳು ಲೋಪಿಸದೇ ಯಿದ್ದರೆ ಅವುಗಳಿಗೆ ಅಲುಕ್ಸಮಾಸವೆಂದು ಹೆಸರು.

ಉದಾಹರಣೆ.

ಪ್ರತ್ಯಯಸಹಿತ ರೂಪ.	ಸಮಾಸಿತ ರೂಪ.
ಕಂಠದಲ್ಲಿ ಕಾಲವು ಯಾರಿಗೋ	ಕಂಠೇಕಾಲ.
ವಾಕ್ಕಿನ ದೆಸೆಯಿಂದ ಯುಕ್ತಿ	ವಾಚೋಯುಕ್ತಿ.

101. ಕರ್ಮಧಾರಯ ಸಮಾಸವು ಹ್ಯಾಗೆ?

ಅದು ಸಮಾಸದಲ್ಲಿನ ಪೂರ್ವ ಪದವು ವಿಶೇಷಣವಾಗಿದ್ದರೆ ವಿಶೇಷಣ ಪೂರ್ವಪದ ಕರ್ಮಧಾರಯವೆಂತಲೂ—ಪರ ಪದವು ವಿಶೇಷಣವಾಗಿಯಿದ್ದರೆ ವಿಶೇಷಣೋತ್ತರಪದಕರ್ಮಧಾರಯವೆಂತಲೂ— ಪೂರ್ವಪ

ದವು ಉಪಮಾನವಾಗಿದ್ದರೆ ಉಪಮಾನ ಪೂರ್ವಪದ ಕರ್ಮಧಾರಯವೆಂತಲೂ—ಪರಪದವು ಉಪಮಾನ ವಾಗಿದ್ದರೆ ಉಪಮಾನೋತ್ತರ ಪದಕರ್ಮಧಾರಯ ವೆಂತಲೂ—ಪೂರ್ವ ಪದವು ನಾಮವಾಚಕವಾಗಿದ್ದು ಪರಪದದ ಅಂಕಿತವನ್ನು ಹೇಳುವದಾಗಿದ್ದರೆ ಸಂಭಾ ವನಾ ಪೂರ್ವಪದ ಕರ್ಮಧಾರಯವೆಂತಲೂ—ಪೂರ್ವ ಪದದ ಗುಣವು ಪರ ಪದವನ್ನು ದಾರ್ಢ್ಯವಾಗಿ ವಿಶೇಷಿಸಿದರೆ ಅವಧಾರಣಾಪೂರ್ವ ಪದಕರ್ಮಧಾರಯ ವೆಂತಲೂ—೬ ವಿಧವು. ಇವುಗಳ ವಿವರವನ್ನು ಈ ಉದಾಹರಣೆಗಳಿಂದರಿಯುವದು.

ಉದಾಹರಣೆ.

ಸಮಾಸ ನಾಮಗಳು	ಸಮಾಸಿತ ರೂಪಗಳು
ವಿಶೇಷಣ ಪೂರ್ವಪದ	ನಿಲೋತ್ಪಲ, ಅಧಿಕಮಾರುತ.
ವಿಶೇಷಣೋತ್ತರಪದ	ವೈಯಾಕರಣಖ ಸೂಚಿ.
ಉಪಮಾನ ಪೂರ್ವಪದ	ಮೇಘಶ್ಯಾಮ.
ಉಪಮಾನೋತ್ತರಪದ	ನರರಾಕ್ಷಸ, ಪುರುಷ ಸಿಂಹ.
ಸಂಭಾವನೆ ಪೂರ್ವಪದ	ಚೂತವೃಕ್ಷ, ಮಹೇಂದ್ರಪರ್ವತ.
ಅವಧಾರಣ ಪೂರ್ವಪದ	ವಿದ್ಯಾಧನ, ವಾತಾಹಾರ.

102. ದ್ವಿಗು ಸಮಾಸ ಪದಗಳು ಯಾವವು ?

ಪೂರ್ವ ಪದವು ಸಂಖ್ಯಾ ಗುಣವಾಚಕವಾಗಿಯೂ ಪರ ಪದವು ನಾಮವಾಚಕವಾಗಿಯೂ ಉಳ್ಳವುಗಳು.

ಉದಾಹರಣೆ.

ತ್ರಿಲೋಕ	ಅಷ್ಟವಸು	ಶತಮುಖ
ಷಟ್ಕರ್ಮ	ನವಸಿಧಿ	ಸಹಸ್ರಕಿರಣ
ಸಪ್ತಸಮುದ್ರ	ದಶಕುಮಾರ	ಅಯುತಜಪಕಿತ್ಯಾದಿ

103. ಬಹುವ್ರೀಹಿ ಸಮಾಸವೆಷ್ಟು ವಿಧವು ?

ಎರಡು ಪದಗಳಿಂದ ಸಮಾಸವಾಗುವ ದ್ವಿಪದ ಬಹುವ್ರೀಹಿಯೆಂತಲೂ—ಅನೇಕ ಪದಗಳಿಂದ ಸಮಾಸವಾಗುವ ಬಹುಪದ ಬಹುವ್ರೀಹಿಯೆಂತಲೂ—ಬಡನೆಯೆಂಬರ್ಥವುಳ್ಳ ಸಹಪದವು ಪೂರ್ವಪದವಾಗಿದ್ದು ಬಹುವ್ರೀಹಿಯಾಗುವ ಸಹ ಪೂರ್ವಪದ ಬಹು ವ್ರೀಹಿಯೆಂತಲೂ—ಏಕಾರ್ಥವಾದ ಯೆರಡು ತೃತೀಯಾಂತ ಪದಗಳು ಕಲಹ ಪ್ರದರ್ಶಕವಾಗಿ ಸಮಾಸವಾಗುವ ವ್ಯತೀಹಾರ ಬಹುವ್ರೀಹಿಯೆಂತಲೂ—೪ ವಿಧವು.

ಉದಾಹರಣೆ.

ದ್ವಿಪದ ಬ.	ಮಹಾಬಲ, ಪ್ರಾಪ್ತಾಗ್ನಿ, ಕೃತಾರ್ಥ
ಬಹುಪದ ಬ.	ಶ್ರೀಮತ್ಪೀತಾಂಬರ, ದಿವ್ಯಸುಂದರ ಶರೀರ
ಸಹಪೂರ್ವಪದ ಬ.	ಸಪುತ್ರ, ಸರಥ, ಸಧನ, ಸಕಳತ್ರ
ವ್ಯತೀಹಾರ ಬ	ಕೇಶಾಕೇಶಿ, ಖಡ್ಗಾಖಡ್ಗಿ, ಗದಾಗದಿ.

104. ದ್ವಂದ್ವ ಸಮಾಸವೆಷ್ಟುವಿಧವು ?

ಎರಡು ಸಮಾನಾರ್ಥಕ ಪದಗಳು ಶೇರಿ ಪರಪದಾಂತ್ಯದಲ್ಲಿ ಪ್ರತ್ಯಯವುಳ್ಳದ್ದಾಗಿ ಸಮಾಸವಾಗುವ ದ್ವಿಪದೇತರಯೋಗ ದ್ವಂದ್ವವೆಂತಲೂ—ಸಮಾನಾರ್ಥಕಗಳಾದ ಅನೇಕ ಪದಗಳು ಶೇರಿ ಅಂತ್ಯ ಪದದ ತುದಿಯಲ್ಲಿ ಪ್ರತ್ಯಯವುಳ್ಳದ್ದಾಗಿ ಸಮಾಸವಾಗುವ ಬಹುಪದೇತರಯೋಗ ದ್ವಂದ್ವವೆಂತಲೂ—೨ ವಿಧವು.

ಉದಾಹರಣೆ.

ದ್ವಿಪದೇತರಯೋಗ	ದ್ವ. ರಾಮರಾವಣರು. ವಾಲಿಸುಗ್ರೀವರು
ಬಹುಪದೇತರಯೋಗ	ದ್ವ. ಆಗಾಮಿಸಂಚಿತ ಪ್ರಾರಬ್ಧಗಳು, ಹಸ್ತ್ಯಶ್ವರಥಪದಾತಿಗಳು,

105. ಅವ್ಯಯೀಭಾವ ಸಮಾಸ ವೆಷ್ಟುವಿಧವು ?

ಪೂರ್ವಪದವು ಅವ್ಯಯುವಾಗಿದ್ದು ಪರಪದವು ನಾಮ ಪದವಾಗಿದ್ದು ಸಮಾಸವಾಗುವ ಅವ್ಯಯ ಪೂರ್ವ ಅವ್ಯಯೀಭಾವ ಸಮಾಸವೆಂತಲೂ—ಪೂರ್ವಪದವು ನಾಮಪದವಾಗಿದ್ದು ಪರಪದವು ಅವ್ಯಯುವಾಗಿದ್ದು ಸಮಾಸವಾಗುವ ನಾಮಪೂರ್ವ ಅವ್ಯಯೀಭಾವ ಸಮಾಸವೆಂತಲೂ—೨ ವಿಧವು.

ಉದಾಹರಣೆ.

ಅವ್ಯಯಪೂರ್ವ ಅ	ಸಂಭದ್ರ, ನಿಷ್ಪಾಪ, ಉಪಲೋಚನ, ಯಥಾಕಾಲ, ಯಥಾಕ್ರಮ,
ನಾಮಪೂರ್ವ ಅ.	ದಿನಂಪ್ರತಿ, ಮಾಸಂಪ್ರತಿ, ವೃಕ್ಷಂಪ್ರತಿ

106. ಕನ್ನಡ ಶಬ್ದಸಮಾಸ ವೆಷ್ಟುವಿಧವು?

ಸಂಸ್ಕೃತ ಶಬ್ದ ಸಮಾಸದ ಹಾಗೆಯೇ ಕನ್ನಡದಲ್ಲಿಯೂ ತತ್ಪುರುಷ "ಕರ್ಮಧಾರಯ, ದ್ವಿಗು, ಬಹುವ್ರೀಹಿ, ದ್ವಂದ್ವ" ಅವ್ಯಯೀಭಾವವೆಂಬ ೬ ವಿಧಗಳಲ್ಲದೆ ಶಬ್ದ ನಿರ್ಣಯ ಪ್ರಕರಣದಲ್ಲಿ ಹೇಳಿದ ಸಂಖ್ಯಾವಾಚಕ ಸಂಖ್ಯಾನಿರ್ದಿಷ್ಟವಾಚಕ ಪ್ರಶ್ನಾರ್ಥಕ ಗುಣವಾಚಕ ನಿದರ್ಶಕ ಗುಣವಾಚಕ ಕೃನ್ನಾಮ ಎಂಬಿವುಗಳೆಲ್ಲಾ ಸಮಾಸದಲ್ಲಿ ಗಮಕ ಸಮಾಸವೆಂದು ಕರೆಯಲ್ಪಡುವ ಕಾರಣ, ಇದೂ ಶೇರಿ ಕನ್ನಡ ಶಬ್ದ ಸಮಾಸವು ೭ ವಿಧವು. ಆದರೆ ಸಂಸ್ಕೃತ ಶಬ್ದ ಸಮಾಸದ ಹಾಗೆಯೇ ಇದೂ ಇರುವ ಕಾರಣ ಪ್ರತ್ಯೇಕ ಪ್ರತ್ಯೇಕವಾಗಿ ವಿವರಿಸಲವಶ್ಯವಿಲ್ಲದೆ ಉದಾಹರಣೆ ಮೂಲಕವಾಗಿ ಬರದು ಇದೆ. ಇದಲ್ಲದೆ ಸಂಸ್ಕೃತ ಸಮಾಸಕ್ಕೂ ಕನ್ನಡ ಸಮಾಸಕ್ಕೂ ಸಮಾಸವಾಗುವದರಲ್ಲಿ ಭೇದವಿಲ್ಲದಿದ್ದರೂ ಪದಗಳನ್ನು

ಜೋಡಿಸುವದರಲ್ಲಿ ತಿಳಿಯ ಬೇಕಾದ ಸಂಧಿ ವಿಧಿಗಳು ಭೇದವಾಗಿರುತ್ತವೆ. ಅವುಗಳು ಯಾವವೆಂದರೆ,

೧ ಸಂಸ್ಕೃತ ಶಬ್ದ ಸಮಾಸವನ್ನು ಮಾಡುವದರಲ್ಲಿ ಪದಗಳಸಂಧಿಯೂ ಸಂಸ್ಕೃತ ಸ್ವರ ವ್ಯಂಜನ ಸಂಧಿ ವಿಧಿಗಳನ್ನನುಸರಿಸಿ ಇರುವದು.

೨ ಕನ್ನಡ ಶಬ್ದ ಸಮಾಸ ಮಾಡುವದರಲ್ಲಿ ಪೂರ್ವಪದಗಳು ಇ ಎ ಕಾರಾಂತಕಗಳಾಗಿದ್ದರೆ ದೀರ್ಘ ಗಳಾಗಿಯೂ, ಉ ಕಾರಾಂತ ವಾಗಿದ್ದರೆ ಉ ಸ್ವರಕ್ಕೆ ಅ ಕಾರಾದೇಶವೂ ಬರುವದು.

೩ ಪೂರ್ವಪದವು ಗುಣವಾಚಕವಾಗಿಯಾಗಲಿ ಅವ್ಯಯವಾಗಿಯಾಗಲಿ ಇದ್ದರೆ ಅದರ ಅಂತಾಕ್ಷರಕ್ಕೆ ಲೋಪವು ಬರುವದುಂಟು.

೪ ಪೂರ್ವಪದವು ಸಂಖ್ಯಾ ವಾಚಕ ವಾಗಿದ್ದರೆ ಒಂದಕ್ಕೆ ಓರ್ ಎಂತಲೂ, ಎರಡಕ್ಕೆ ಈರ್ ಎಂತಲೂ, ಹತ್ತಕ್ಕೆ ಸಂಯುಕ್ತನ ಕಾರವೂ ಬರುವದು. ಮತ್ತೆ ಅದು ಇದು ಯಾವದು ಎಂಬ ಸರ್ವನಾಮಗಳಿಗೆ ಆ ಈ ಯಾವ ಎಂದಾಗುವದು.

ಈ ವಿಧಿಗಳಿಗೆ ಉದಾಹರಣೆಗಳನ್ನು ಇಲ್ಲಿ ಬರೆದಿರುವ ಸಮಾಸ ಪದಗಳ ಉದಾಹರಣೆಗಳಲ್ಲಿಯೇ ಊಹಿಸಿಕೊಳ್ಳುವದಲ್ಲದೆ ಕನ್ನಡದಲ್ಲಿ ಮುಖ್ಯವಾಗಿರುವ ಸಮಾಸಗಳನ್ನೇ ಉದಹರಿಸಿ ಇರುವದರಿಂದ ಸಂಸ್ಕೃತ ಶಬ್ದ ಸಮಾಸದಂತೆ ಪ್ರತಿ ಒಂದು ಸಮಾಸವೂ ಅನೇಕ ವಿಧಗಳಾಗಿ ಭೇದವಾಗುವದಿಲ್ಲವೆಂತಲೂ, ಅದರಿಂದಲೇ ಮುಖ್ಯ ಭಾಗಗಳನ್ನೆಲ್ಲಾ ನ್ಯೂನತೆ ಯಿಲ್ಲದ ಹಾಗೆ ಬರದಿದೆ ಯೆಂತಲೂ, ತಿಳಿಯ ಬೇಕು ನ್ಯೂನತೆಯೆಂದರೆ ಕೊರತೆ.

ಉದಾಹರಣೆ.

ಸಮಾಸದ ಹೆಸರುಗಳು	ಪ್ರತ್ಯಯ ಸಹಿತರೂಪ.	ಸಮಾಸಿತರೂಪ.
ತತ್ಪುರುಷ,	ಕೋಟವನ್ನು ಮಾಡು	ಕೋಟಮಾಡು
	ಮನೆಯನ್ನು ಕಟ್ಟು	ಮನೇಕಟ್ಟು
	ತೇರಿಗೆ ಮರ	ತೇರುಮರ
	ಬಳೆಗೆ ಚಿನ್ನ	ಬಳೇಚಿನ್ನ
	ಹುಲಿಯ ದೆಸೆಯಿಂದ ಅಳ್ಕು	ಹುಲಿಯಳ್ಕು
	ಮರದ ಕೊಂಬು	ಮರಗೊಂಬು
	ಬಾಳೆಯ ಹಂಣು	ಬಾಳೇಹಂಣು
	ಕೆಲಸದಲ್ಲಿ ಜಾಣನು	ಕೆಲಸಜಾಣನು
ಅಲುಕ್ಸಮಾಸ	ಬೇವಿನ ಮರ	ಬೇವಿನಮರ
	ಮಾವಿನ ಹಂಣು	ಮಾವಿನಹಂಣು
	ಪೇಲದ ಮರ	ಪೇಲದಮರ
ಕರ್ಮಧಾರಯ	ಬಿಳೀತಾವರೆ	ಬಿಳಿದಾವರೆ
	ಕೆಂಪು ತಾವರೆ	ಕೆಂದಾವರೆ
	ತಂಪಾದ ನೀರು	ತಣ್ಣೀರು
ದ್ವಿಗು	ಒಂದು ತಲೆ	ಒರ್ತಲೆ
	ಎರಡು ಕಟ್ಟು	ಇಕ್ಕಟ್ಟು
	ಮೂರು ನೂರು	ಮುನ್ನೂರು
	ನಾಲ್ಕು ನೂರು	ನನ್ನೂರು
	ಐದು ಮೊಗ	ಐಮೊಗ
	ಹತ್ತು ಒಂದು	ಹನ್ನೊಂದು
ಬಹುವ್ರೀಹಿ	ನಿಡುತೋಳುಳ್ಳವನು	ನಿಡುದೋಳನು
	ಮೂರು ಕಣ್ಣುಳ್ಳವನು	ಮುಕ್ಕಣ್ಣನು
	ಹೊಸಮನೆ ಉಳ್ಳವನು	ಹೊಸಮನೆಯವನು
	ಕೆಂಪುಕೂದಲು ವುಳ್ಳವನು	ಕೆಂಗೂದಲನು
	ಎಸಳು ಕಣ್ಣು ಉಳ್ಳವನು	ಎಸಳುಗಣ್ಣನು
ವ್ಯತೀಹಾರ ಬಹುವ್ರೀಹಿ	ಕೋಲಿನಿಂದಆಗುವಕಾಳಗ	ಕೋಲಾಕೋಲಿ
	ಜುಟ್ಟು ಹಿಡಿದು ಆಗುವ ಕಾಳಗ	ಜುಟ್ಟಾಜುಟ್ಟಿ.

ಸಮಾಸದ ಹೆಸರುಗಳು	ಪ್ರತ್ಯಯಸಹಿತರೂಪ.	ಸಮಾಸಿತರೂಪ.
ದ್ವಂದ್ವ	ತಾಯಿಯೂ ತಂದೆಯೂ	ತಾಯಿತಂದೆಗಳು
ದ್ವಿಪದೇತರಯೋಗ,	ಮರವೂ ಗಿಡವೂ	ಮರಗಿಡಗಳು
	ದನವೂ ಕರವೂ	ದನಕರುಗಳು
ಬಹುಪದೇತರಯೋಗ,	ಆನೇಯೂ ಕುದುರೆಯೂ ತೇರೂ	ಆನೆಕುದುರೆತೇರುಗಳು
	ದನವೂ ಕುರಿಯೂ ಮೇಕೆಯೂ ಎಮ್ಮೆಯೂ	ದನಕುರಿಮೇಕೆ ಎಮ್ಮೆಗಳು
ಅವ್ಯಯೀಭಾವ.	ಮುಂದೆ ಕಡೆ	ಮುಂಗಡೆ
	ಹಿಂದೆ ಕಟ್ಟು	ಹಿಂಗಟ್ಟು
	ಮುಂದಿನ ಕೈ	ಮುಂಗೈ
ಗಮಕ ಸಮಾಸ	ಮಾಡುವ ಅವನು	ಮಾಡುವವನು
	ಅಂಥ ಅವನು	ಅಂಥವನು
	ಓಡುವ ಕುದುರೆ	ಓಡುವಕುದುರೆ
	ಮೂರನೆ ಅವನು	ಮೂರನೇವನು

107. ಅರಿಸಮಾಸವು ಹ್ಯಾಗೆ?

ಸಂಸ್ಕೃತ ಪದವೂ ಕನ್ನಡ ಪದವೂ ಎರಡೂ ಸೇರುವಹಾಗೆ ಪುರಾತನ ಕವಿಗಳು ಸಮಾಸವನ್ನು ಮಾಡಿ ಇದ್ದಾರೆ. ಅವುಗಳು ಅರಿ ಸಮಾಸವೆನ್ನಿಸುವವು. ಮಹಾ ಕವಿಪಳು ಪ್ರಯೋಗಿಸಿ ಇರುವದನ್ನಲ್ಲದೆ ಹೊಸದಾಗಿ ಅರಿಸಮಾಸ ಮಾಡಲಾಗದು.

ಆದರೆ ಸಂಸ್ಕೃತ ಪದಗಳಿಗೆ ಕನ್ನಡ ಕ್ರಿಯಾಪದಗಳನ್ನು ಸೇರಿಸಿ ಸಮಾಸ ಕ್ರಿಯೆ ಮಾಡಿದಾಗ್ಯೂ ಮಹತ್, ಎಲ್ಲಾ; ಎಂಬ ಪದಗಳಿಗೆ ಕನ್ನಡ ಅಥವಾ ಸಂಸ್ಕೃತ ಪದಗಳನ್ನು ಸೇರಿಸಿ ಸಮಾಸ ಮಾಡಿದಾಗ್ಯೂ ಅರಿಸಮಾಸವೆಂಬ ದೋಷವಿಲ್ಲ.

ಅರಸು ಕುಮಾರ	ಮಂಗಳಾರತಿ	ಮಾಸಾಮೆಂತ
ಕಡುರಾಗ	ಅರಸುಗುಣ	ಎಲ್ಲಾರತ್ನ
ಕೂರಸಿ	ಕಡುದರ್ಪ	ಮಾರಾಜ
ತುರಗದಳ	ಗಜಘೋರು	ಮಾಗೆಲಸ
ಗಜದುಳಿ	ದಳಮುಖ್ಯ	ಮಾಸಿರಿ

108. ಸಮಾಸದಲ್ಲಿ ಇನ್ನೇನು ವಿಶೇಷವು ?

ಸಮಾಸದಲ್ಲಿ ಮುಂಚೆ ಹೇಳಿದ ವಿಶೇಷಗಳಲ್ಲದೆ ಮತ್ತೇನೂ ವಿಶೇಷಗಳಿಲ್ಲದಿದ್ದಾಗೂ ಕೆಲವು ಸ್ಥಳಗಳಲ್ಲಿ ಅವ್ಯಯಗಳನ್ನೂ ಸರ್ವನಾಮಗಳನ್ನೂ ಎರಡೆರಡಾಗಿ ಶೇರಿಸಿ ಹೇಳುವ ಪದ್ಧತಿ ಉಂಟಾದ್ದರಿಂದ ಅವುಗಳಿಗೆ ಸಮಾಸಿತ ಸರ್ವನಾಮಗಳೆಂತಲೂ, ಸಮಾಸಿತ ಅವ್ಯಯಗಳೆಂತಲೂ, ಹೆಸರಾಗುವದು. ಅವುಗಳನ್ನು ಇಲ್ಲಿ ಬರೆದಿರುವ ಉದಾಹರಣೆಗಳಿಂದರಿಯುವದು.

ಉದಾಹರಣೆ.

ಜೇರೊಬ್ಬನು	ಒಬ್ಬಾನೊಬ್ಬನು	ಹ್ಯಾಗೆಂದರೆ
ಮತ್ತೊಂದು	ಒಂದಾನೊಂದು	ಆದಕಾರಣ
ಇನ್ನೊಂದು	ಜೇರೆ ಜೇರೆ	ಮೇಲೆ ಮೇಲೆ
ಯಾವನೊಬ್ಬನು	ಸುಮ್ಮ ಸುಮ್ಮನೆ	ಆಗಾಗ್ಯೆ
ಯಾವನಾದರೂ	ಮೆಲ್ಲ ಮೆಲ್ಲನೆ	ಈಗಲಾದರೂ
ಯಾವದೊಂದು	ಯಾಕಂದರೆ	ಯಾವಾಗ

---

3. ಶಬ್ದೋತ್ಪತ್ತಿ ಪ್ರಕರಣ. (Derivation of words.)

109. ಶಬ್ದೋತ್ಪತ್ತಿ ಪ್ರಕರಣದಲ್ಲಿ ಏನು ಹೇಳಲ್ಪಡುತ್ತದೆ ?

ಶಬ್ದಗಳ ಉತ್ಪತ್ತಿ ವಿಧಿಗಳೂ—ಶಬ್ದ ನಿರ್ಣಯ ಪ್ರಕರಣದಲ್ಲಿಹೇಳಿದ ತತ್ಸಮ ಶಬ್ದಗಳಿಗೆ ಕನ್ನಡ ಪ್ರ

ತ್ಯಯಗಳನ್ನು ಅನುಬಂಧಿಸುವಾಗ ಆಗುವ ವ್ಯತ್ಯಾಸ ಗಳೂ—ಸಂಸ್ಕೃತ ಶಬ್ದಗಳು ವಿಕೃತಿಯನ್ನು ಹೊಂದಿ ತದ್ಭವ ಶಬ್ದಗಳಾಗುವ ವಿಧಿಗಳೂ—ದೇಶ್ಯ ಪದವಿಧಿ ಗಳೂ ಅನ್ಯದೇಶ್ಯಪದ ವ್ಯತ್ಯಾಸಗಳೂ ಹೇಳಲ್ಪಡು ತ್ತವೆ.

110. ಈ ಪ್ರಕರಣದಲ್ಲಿ ಬರುವ ಮುಖ್ಯ ಸಂಕೇತಗಳ್ಯಾವವು?

ಶಬ್ದಗಳ ಪ್ರಥಮ ರೂಪವಾಗಿದ್ದು ಕ್ರಿಯಾರ್ಥವನ್ನು ಕೊಡುತ್ತಾ ಆದ್ಯಂತಗಳಲ್ಲಿ ಇತರ ಪ್ರತ್ಯಯಗಳನ್ನು ಹೊಂದ ಬಹುದಾದ ಮೂಲ ಧಾತುವೆಂತಲೂ—ಮೂ ಲಧಾತುವಿಗೆ ಆದಿಯಲ್ಲಿ ಶೇರಿ ವಿವಿಧಾರ್ಥಗಳನ್ನು ಕೊ ಡುವ ಪೂರ್ವ ಪ್ರತ್ಯಯಗಳೆಂತಲೂ—ಅಂತ್ಯದಲ್ಲಿ ಶೇ ರುವ ಪರ ಪ್ರತ್ಯಯಗಳೆಂತಲೂ—ಕ್ರಿಯಾರ್ಥವನ್ನು ಕೊಡುವ ಮೂಲ ಧಾತುವಿಗೆ ಪರ ಪ್ರತ್ಯಯಗಳನ್ನು ಶೇರಿಸಿದ ಮೇಲೆ ಅವುಗಳು ಪ್ರಕೃತಿ ಯೆಂತಲೂ—೪ ಸಂಕೇತಗಳು. ಪೂರ್ವ ಪ್ರತ್ಯಯಗಳಿಗೆ ಉಪಸರ್ಗಗ ಳೆಂತಲೂ ಪ್ರಾದಿಗಳೆಂತಲೂ ಹೆಸರುಂಟು.

111. ತತ್ಸಮಾದಿ ಪ್ರತಿ ಶಬ್ದಗಳಲ್ಲಿಯೂ ರೂಪಭೇದಗಳೆಷ್ಟು?

ಬೇರೆ ಶಬ್ದಗಳಿಂದ ಹುಟ್ಟದೆ, ಅಥವಾ ಪೂರ್ವ ಪರ ಪ್ರತ್ಯಯಗಳನ್ನು ಹೊಂದದೆ ತಮ್ಮಷ್ಟಗೆ ತಾವೇ ಇರುವ ಸಿದ್ಧ ಶಬ್ದಗಳೆಂತಲೂ—ಸಿದ್ಧ ಶಬ್ದಗಳಿಗೆ ವಿವಿಧಾರ್ಥಗಳುಳ್ಳ ಪೂರ್ವ ಪರಪ್ರತ್ಯಯಗಳನ್ನು ಹ ಚ್ಚಿಸುವದರಿಂದುಂಟಾಗುವ ತದ್ಧಿತಾಂತ ಶಬ್ದಗಳೆಂತ ಲೂ—೨ ಭೇದಗಳು.

ಉದಾಹರಣೆ.

ಸಿದ್ಧಶಬ್ದಗಳು	ತದ್ಧಿತಾಂತಶಬ್ದಗಳು.
ಧರ್ಮ	ಧರ್ಮಿಷ್ಠ
ವಚನ	ದುರ್ವಚನ
ಗುಣ	ಸುಗುಣ
ಬಾಲ	ಬಾಲತ್ವ
ಕುರುಡ	ಕುರುಡತನ

ಇಲ್ಲಿ ತಿಳಿಯತಕ್ಕ ವಿಶೇಷವೇನಂದರೆ, ಸಂಸ್ಕೃತ ಪದವಾಗಿದ್ದರೆ ತತ್ಸಮ ಸಿದ್ಧ ಶಬ್ದ ತತ್ಸಮ ತದ್ಧಿತಾಂತ ಶಬ್ದಗಳೆಂತಲೂ—ತದ್ಭವವಾಗಿದ್ದರೆ ತದ್ಭವಸಿದ್ಧ ಶಬ್ದ ತದ್ಭವ ತದ್ಧಿತಾಂತ ಶಬ್ದಗಳೆಂತಲೂ—ದೇಶ್ಯವಾಗಿದ್ದರೆ ದೇಶ್ಯ ಸಿದ್ಧ ಶಬ್ದ ದೇಶ್ಯ ತದ್ಧಿತಾಂತ ಶಬ್ದವೆಂತಲೂ—ತಿಳಿಯಬೇಕು. ಆದರೆ ತತ್ಸಮ ಸಿದ್ಧ ಶಬ್ದಗಳಿಗೆ ತತ್ಸಮ ಪೂರ್ವ ಪರ ಪ್ರತ್ಯಯಗಳೂ, ತದ್ಭವಾದಿಗಳಿಗೆ ಅವುಗಳ ಪ್ರತ್ಯಯಗಳೂ ಶೇರುವವೇ ಹೊರ್ತು ಒಂದನ್ನು ಮತ್ತೊಂದಕ್ಕೆ ಶೇರಿಸಲಾಗದು, ತತ್ಸಮ ಶಬ್ದಗಳಿಗೆ ಕನ್ನಡ ವಿಭಕ್ತಿ ಪ್ರತ್ಯಯ ಕ್ರಿಯಾ ಪ್ರತ್ಯಯಗಳನ್ನು ಅನುಬಂಧಿಸುವದರಲ್ಲಿ ಈ ವಿಧಿ ಇಲ್ಲ.

112. ತತ್ಸಮ ಮೂಲ ಧಾತುಗಳು ಯಾವವು ?

ಅವು ಸುಮಾರು ೨೦೦೦ ಮೂಲ ಧಾತುಗಳು ಇರುವದರಿಂದ ಅವುಗಳನ್ನೆಲ್ಲಾ ಬರೆಯಲಪಶ್ಯವಿಲ್ಲದೆ ಕನ್ನಡದಲ್ಲಿ ದಿಕ್ಪ್ರದರ್ಶಕವಾಗಿ ಕೆಲವು ಧಾತುಗಳನ್ನು ಅರ್ಥ ಸಹಿತವಾಗಿ ಉದಾಹರಣೆಗೋಸ್ಕರ ಇಲ್ಲಿ ಬರೆ

ದಿರುವದರಿಂದ ಇವುಗಳ ಹಾಗೆಯೇ ಎಲ್ಲಾ ಧಾತುಗಳ ವ್ಯತ್ಯಾಸಗಳನ್ನೂ ಆಲೋಚಿಸಲಾಗುವದು. ದಿಕ್ಪ್ರದರ್ಶಕವೆಂದರೆ ಮಾರ್ಗತೋರಿಸುವದೆಂಬರ್ಥ.

ಮೂಲಧಾತುಗಳು.	ಅರ್ಥ.	ಉದಾಹರಣೆಗಳು.
ಅಟ್	ಹೋಗುವದು	ಅಟ, ಅಟನ, ಪರ್ಯಟನೆ
ಅರ್ಚ್	ಪೂಜಿಸುವದು	ಅರ್ಚನ. ಅರ್ಚಕ.
ಆಪ್	ಸಂಪಾದಿಸುವದು	ಪ್ರಾಪ್ತಿ, ಪ್ರಾಪಕ.
ಈಕ್ಷ್	ನೋಡುವದು	ಈಕ್ಷಣ, ಪರೀಕ್ಷಾ.
ಕಥ್	ಹೇಳುವದು	ಕಥನ, ಕಥಾ.
ಕೃ	ಮಾಡುವದು	ಕೃತ, ಕಾರ್ಯ.
ಖನ್	ಅಗಿಯುವದು	ಖನನ, ಖಾತ.
ಗಣ್	ಎಣಿಸುವದು	ಗಣನ, ಗಣಕ; ಗಣಿತ.
ಘೋಷ್	ಶಬ್ದ ಮಾಡುವದು	ಘೋಷ.
ಚಲ್	ಕದಲುವದು	ಚಲನ, ಚಲ.
ಛಿದ್	ಸೀಳುವದು	ಛೇದ, ಛೇದನ.
ಜೀ	ಜಯಿಸುವದು	ಜಿತ, ಜಯ.
ಜೀವ್	ಬದುಕುವದು	ಜೀವ, ಜೀವನ.
ಜ್ಞಾ	ತಿಳುಕೊಳ್ಳುವದು	ಜ್ಞಾನ, ಅಜ್ಞಾನ.
ಜ್ವಲ್	ಉರಿಯುವದು	ಜ್ವಲ, ಪ್ರಜ್ವಲ.
ತೃಷ್	ಆಸಿಸುವದು	ತೃಷ್ಣಾ.
ದಂಡ್	ಶಿಕ್ಷಿಸುವದು	ದಂಡ, ದಂಡನ.
ದೂಷ್	ಕೆಡಿಸುವದು	ದೂಷಣ.
ದೃಶ್	ನೋಡುವದು	ದರ್ಶನ, ಸಂದರ್ಶನ.
ದ್ವಿಷ್	ಹಗೇ ಮಾಡುವದು	ದ್ವೇಷ, ದ್ವೇಷಿ.
ನಶ್	ನಾಶವಾಗುವದು	ನಾಶ, ನಾಶನ.
ಪಚ್	ಅಡಿಗೇ ಮಾಡುವದು.	ಪಚನ, ಪಾಕ.
ಭಕ್ಷ್	ತಿನ್ನುವದು	ಭಕ್ಷ್ಯ, ಭಕ್ಷಣ.
ಮೃ	ಸಾಯುವದು	ಮೃತಿ, ಮರಣ.

ಮೂಲಧಾತುಗಳು.	ಅರ್ಥ.	ಉದಾಹರಣೆಗಳು.
ಯಜ್	ಆರಾಧಿಸುವದು	ಯಜನ, ಯಜ್ಞ, ಯಾಗ.
ಯತ್	ಯತ್ನಿಸುವದು	ಯತ್ನ, ಪ್ರಯತ್ನ.
ರಭ್	ಆರಂಭಿಸುವದು	ಪ್ರಾರಂಭ, ಆರಂಭ.
ರಕ್ಷ್	ಕಾಯುವದು	ರಕ್ಷಣ, ಸಂರಕ್ಷಣ.
ರಚ್	ಗ್ರಂಥಮಾಡುವದು	ರಚನ, ರಚಕ.
ಲಭ್	ಹೊಂದುವದು	ಲಭ್ಯ, ದುರ್ಲಭ, ಸುಲಭ.
ವಸ್	ವಾಸ ಮಾಡುವದು	ವಾಸ, ನಿವಾಸ.
ವಿಶ್	ಹೊಕ್ಕು ಹೋಗುವದು	ಪ್ರವೇಶ.
ಶಕ್	ಸಾಮರ್ಥ್ಯವಾಗಿರುವದು	ಶಕ್ತಿ, ಶಕ್ತ, ನಿಶ್ಶಕ್ತಿ.
ಶ್ರು	ಕೇಳುವದು	ಶ್ರವಣ, ಶ್ರೋತ್ರ, ಶ್ರುತಿ.
ಸಾಧ್	ಪೂರೈಸುವದು	ಸಾಧನ, ಸಾಧ್ಯ ಅಸಾಧ್ಯ
ಸೂಚ್	ತಿಳಿಸುವದು	ಸೂಚನ, ಸೂಚಕ.
ಸಹ್	ಹೊರುವದು	ಸಹನ, ಅಸಹ್ಯ.
ಸ್ಮೃ	ಜ್ಞಾಪಕಮಾಡುವದು	ಸ್ಮೃತಿ. ವಿಸ್ಮೃತಿ.
ಹಸ್	ನಗುವದು	ಹಾಸ, ಹಾಸ್ಯ, ಅಪಹಾಸ್ಯ.
ಹೃಷ್	ಸಂತೋಷಿಸುವದು	ಹರ್ಷ, ಹರ್ಷಣ.

ಇಲ್ಲಿ ಬರೆದಿರುವ ಮೂಲ ಧಾತುಗಳಿಗೆ ಪೂರ್ವ ಪರ ಪ್ರತ್ಯಯಗಳನ್ನು ಹಚ್ಚಿಸಿದರೆ ಅನೇಕ ಪದಗಳಾಗುವ ಹಾಗೆಯೇ ನಿಂತ ಧಾತುಗಳಿಗೂ ಊಹಿಂಸಲಾಗುವದು. ಆದರೆ ಮೂಲ ಧಾತುಗಳಿಗೆ ಪೂರ್ವಪರ ಪ್ರತ್ಯಯಗಳು ಹೊಂದುವಾಗ ಸಂಧಿ ಪ್ರಕರಣದಲ್ಲಿ ಹೇಳಿರುವ ಸಂಸ್ಕೃತ ಸ್ವರ ಸಂಧಿ ವಿಧಿಗಳನ್ನು ಅನುಸರಿಸಿ ಧಾತುಗಳಿಗೆ ಪ್ರತ್ಯಯಗಳನ್ನು ಶೇರಿಸಿದರೆ ಪ್ರಕೃತಿಯೆನ್ನಿಸುವವು.

113. ತತ್ಸಮ ಪೂರ್ವ ಪ್ರತ್ಯಯಗಳು ಯಾವವು?

ಪೂರ್ವ ಪ್ರತ್ಯಯಗಳು,	ಅರ್ಥ	ಉದಾಹರಣೆ.
ಅ	ಅಲ್ಲ	ಅನ್ಯಾಯ
ಅಂತರ್	ಒಳಗೆ	ಅಂತಃಕರಣ
ಅತಿ	ದಾಟ	ಅತಿಕ್ರಮಿಸು
ಅಧಃ	ಕೆಳಗೆ	ಅಧೋಭಾಗ
ಅಧಿ	ಮೇಲೆ ಹೆಚ್ಚು.	ಅಧಿಪತಿ, ಅಧಿಕಾರ.
ಅನು	ಕೂಡ, ಅಪ್ಪಂದ, ಹಿಂದೆ	ಅನುಸಾರ, ಅನುಜ ಅನುಬಂಧ, ಅನುಮತಿ
ಅಪ	ಕೆಟ್ಟ	ಅಪಖ್ಯಾತಿ, ಅಪಕೀರ್ತಿ
ಅಭಿ	ಮುಂದೆ, ಹೆಚ್ಚು	ಅಭಿಮುಖ, ಅಭಿವೃದ್ಧಿ
ಅವ	ಕೆಳಗೆ, ಇಲ್ಲದ	ಅವತಾರ, ಅವಕೇ
ಆ	ಹತ್ತರ, ಸುತ್ತಲು	ಆಸ್ಥಾನ, ಆಧಾರ
ಉತ್,	ಮೇಲೆ	ಉತ್ಪತ್ತಿ, ಉದ್ಭಿಜ
ಉಪ	ಸಂಗಡ, ಹಿಂದೆ, ಕೆಳಗಿನ,	ಉಪಗ್ರಾಮ, ಉಪಕಥೆ
ಕು,	ದುರ್, ಕೆಟ್ಟ	ಕುಮತಿ, ಕುಭಾಷೆ, ದುರ್ಗುಣ
ನಿ	ಕೆಳಗೆ, ಒಳಗೆ	ನಿಗ್ರಹ, ನಿಮಜ್ಜನ
ನಿರ್	ಇಲ್ಲ ನಿಶ್ಚಯ	ನಿರಂತರ, ನಿರಪರಾಧ
ಪರಾ	ಅಧಿಕ, ಶ್ರೇಷ್ಠ	ಪರಾಕ್ರಮ, ಪರಾಕಾಷ್ಠ, ಪರಾಗತಿ, ಪರಾದೇವತೆ
ಪರಿ	ಸುತ್ತಲು, ಅಂತ್ಯ ಬೇರೆಬೇರೆ, ಧಿಕ್ಕಾರ	ಪರೀಕ್ಷೆ, ಪರಿವೇಷ, ಪರಿಧಿ ಪರ್ಯಂತರ
ಪ್ರ	ಮುಂದಕ್ಕೆ, ಶ್ರೇಷ್ಠ	ಪ್ರಕರಣ, ಪ್ರಕಾಶ
ಪ್ರತಿ	ಬದಲು ಪ್ರೊಂದೊಂದಾಗಿ	ಪ್ರತಿಕಾರ, ಪ್ರತ್ಯುತ್ತರ, ಪ್ರತಿದಿನ
ವಿ	ವಿಂಗಡ, ಬೇರೆಬೇರೆ ವಿರೋಧ	ವಿಕಾಸ, ವಿಪತ್ತು

ಪೂರ್ವ ಪ್ರತ್ಯಯಗಳು.	ಅರ್ಥ.	ಉದಾಹರಣೆ.
ಸಂ	ಕೂಡ	ಸಂತಾಪ, ಸಂಯೋಗ.
ಸತ್	ಸು, ಒಳ್ಳೆ	ಸತ್ಕಾರ್ಯ, ಸತ್ಪುರುಷ, ಸುಗುಣ, ಸುಕೃತ.

114. ತತ್ಸಮ ಪರಪ್ರತ್ಯಯಗಳು ಯಾವವು ?

ಅವುಗಳು ಅನೇಕ ವಿಧವಾಗಿವೆ. ಈ ಪರ ಪ್ರತ್ಯಯಗಳಿಗೆ ವರ್ಣಕಗಳೆಂತಲೂ ಹೆಸರುಂಟು. ಅವುಗಳಲ್ಲಿ ಕೆಲವು ಮೂಲ ಧಾತುಗಳಿಗೆ ಸೇರಿದರೆ ಪುಂ ಸ್ತ್ರೀ ನಪುಂಸಕ ಪ್ರಕೃತಿಗಳಾಗುವವು. ಕೆಲವು ವರ್ಣಕಗಳು ಮೂಲ ಧಾತುಗಳಿಗೆ ಸೇರುವದರಿಂದ ಗುಣವಾಚಕಗಳೂ ಆಗುವವು. ಅವುಗಳನ್ನೆಲ್ಲಾ ಕ್ರಮವಾಗಿ ಇಲ್ಲಿ ಬರೆದಿರುವ ವಿಶೇಷ ವಿಧಿಗಳಿಂದಲೂ ಉದಾಹರಣೆಗಳಿಂದಲೂ ತಿಳಿಯುವದು. ಅವುಗಳು ಯಾವವಂದರೆ.

೧ ಮೂಲ ಧಾತುವಿಗೆ "ಅನ" ವರ್ಣಕವು ಸೇರುವದರಿಂದ ಅನೇಕ ನಪುಂಸಕಲಿಂಗ ಪ್ರಕೃತಿಗಳಾಗುತ್ತವೆ.

ಉದಾಹರಣೆ.

ಮೂಲಧಾತು.	ಅದರರ್ಥ.	ಅದರಿಂದುಂಟಾದ ಪ್ರಕೃತಿ.
ನೀ	ನಡಿಸುವದು	ನಯನ
ದಾ	ಕೊಡುವದು	ದಾನ
ನೃತ್	ಕುಣಿಯುವದು	ನರ್ತನ
ಶುಭ್	ಹೊಳೆಯುವದು	ಶೋಭನ

೨ ಮೂಲ ಧಾತುವಿಗೆ "ನ" ವರ್ಣಕವನ್ನು ಸೇರಿಸುವದರಿಂದ ಹಲವು ನಪುಂಸಕಲಿಂಗ ಪ್ರಕೃತಿಗಳಾಗುತ್ತವೆ.

ಉದಾಹರಣೆ.

ಮೂಲಧಾತು.	ಅರ್ಥ.	ಪ್ರಕೃತಿ.
ಯಜ್	ಪೂಜಿಸುವದು	ಯಜ್ಞ
ಸ್ವಪ್	ನಿದ್ದೆಹೋಗುವದು	ಸ್ವಪ್ನ
ಯತ್	ಯತ್ನಿಸುವದು	ಯತ್ನ

೩ "ಅಸ್" ವರ್ಣಕವನ್ನು ಮೂಲ ಧಾತುಗಳಿಗೆ ಶೇರಿಸಿ ಧಾತ್ವಕ್ಷರಗಳನ್ನು ಗುಣ ಮಾಡಲಾಗಿ ಅನೇಕ ನಪುಂಸಕಲಿಂಗ ಪ್ರಕೃತಿಗಳಾಗುತ್ತವೆ.

ಉದಾಹರಣೆ.

ಮೂಲಧಾತು.	ಅರ್ಥ.	ಪ್ರಕೃತಿ	ಅರ್ಥ.
ಮನ್	ಯೋಚಿಸುವದು	ಮನಸ್	ಮನಸ್ಸು
ಸೃ	ಹೋಗುವದು	ಸರಸ್	ಸರೋವರ
ಉಷ್	ಪ್ರಕಾಸಿಸುವ	ಉಷಸ್	ಪ್ರಾತಃಕಾಲ
ವರ್ಚ್	ಪ್ರಕಾಸಿಸುವದು	ವರ್ಚಸ್	ವರ್ಚಸ್ಸು

೪ "ರ ಲ ಅಲ ಅರ ವರ ಮಲ ಇಲ ಇರ ಉರ ಉಲ ಮ ವ ತ್ರ ಅಕ ಏರ ಉಕ ಊಕ" ಯೆಂಬ ವರ್ಣಕಗಳು ಮೂಲ ಧಾತುಗಳಿಗೆ ಶೇರುವದರಿಂದ ಅನೇಕ ಪ್ರಕೃತಿಗಳಾಗುತ್ತವೆ.

ಉದಾಹರಣೆ.

ಪ್ರಕೃತಿ.	ಅರ್ಥ.	ಪ್ರಕೃತಿ.	ಅರ್ಥ.
ದೀಪ್ರ	ಪ್ರಕಾಸಿಸುವದು	ಅನಿಲ	ಗಾಳಿ
ಚಂದ್ರ	ಚಂದ್ರನು	ಪಥಿಲ	ದಾರಿ ನಡೆಯುವವನು
ಶುಕ್ಲ	ಬಿಳೀ	ಖದಿರ	ಕೊಡ್ಲಿ
ಚಪಲ	ಅಸ್ಥಿರವಾದ	ಭೀಮ	ಭಯಂಕರವಾದ

ಉದಾಹರಣೆ.

ಪ್ರಕೃತಿ.	ಅರ್ಥ.	ಪ್ರಕೃತಿ.	ಅರ್ಥ.
ತರಲ	ನಡಗುವಂಥ	ಧೂಮ	ಹೊಗೆ
ವಟರ	ಸ್ಥಿರವಿಲ್ಲದ	ಶ್ವ	ನಾಯಿ
ಜಿತ್ವರ	ಜಯಹೊಂದಿದ	ಜಲ್ಪಾಕ	ಬಹುಭಾಷಿಯಾದ
ಘರ್ಮ	ಉಷ್ಣ	ಪತರ	ಜರಗುವಂಥ
ಹರ್ಷುಲ	ಪ್ರೀತಿಮಾಡುವವನು	ವರ್ಷುಕ	ಮಳೆಯುಳ್ಳ
ಅಶ್ವ	ಕುದುರೆ	ಜಾಗರೂಕ	ಜಾಗ್ರತೆಯುಳ್ಳ
ಚಿತ್ರ	ಚಿತ್ರವಾದ	ವಾವದೂಕ	ಅತಿಭಾಷಿಯಾದ
ಭಿದುರ	ಹೊಡೆಯುವಂಥ	ಶುಷ್ಕ	ಒಣಗಿದ

ಇದಲ್ಲದೆ ಮೂಲಧಾತುಗಳಿಗೆ ಪರ ಪ್ರತ್ಯಯಗಳೆಂಬ ವರ್ಣಕಗಳನ್ನು ಹಚ್ಚುವದರಿಂದುಂಟಾದ ಪ್ರಕೃತಿಗಳಿಗೆ ಈ ಕೆಳಗೆ ಬರುವ ಪ್ರತ್ಯಯಗಳನ್ನು ಅನುಬಂಧಿಸುವದರಿಂದ ಅನೇಕ ನಾಮವಾಚಕ ಗುಣವಾಚಕಗಳಾಗುವವು. ಇವುಗಳೇ ತದ್ಧಿತಾಂತಗಳೆಂಬುವವು, ಅವು ಯಾವವೆಂದರೆ,

೧ "ತ್ವ, ತಾ" ಯೆಂಬ ಪ್ರತ್ಯಯಗಳನ್ನು ನಾಮವಾಚಕ ಗುಣವಾಚಕಗಳಿಗೆ ಶೇರಿಸುವದರಿಂದ ನಪುಂಸಕಲಿಂಗ ಸ್ತ್ರೀಲಿಂಗ ಭಾವನಾಮ ವಾಚಕಗಳಾಗುತ್ತವೆ.

ಉದಾಹರಣೆ.

ಪ್ರಕೃತಿ.	ನಪುಂ. ಭಾವನಾಮವಾಚಕ.	ಸ್ತ್ರೀ. ಭಾವನಾಮವಾಚಕ.
ಪುರುಷ	ಪುರುಷತ್ವ	ಪುರುಷತಾ
ಬಂಧು	ಬಂಧುತ್ವ	ಬಂಧುತಾ

೨ "ಯ" ಎಂಬ ಪ್ರತ್ಯಯವನ್ನು ಪ್ರಕೃತಿಗಳ ಮೇಲೆ ಸೇರಿಸುವದರಿಂದ ಕೆಲವು ನಪುಂಸಕಲಿಂಗ ಭಾವನಾಮ ವಾಚಕಗಳೂ ಸಮೂಹ ವಾಚಕಗಳೂ ಆಗುತ್ತವೆ. ಈ ಪ್ರತ್ಯಯವನ್ನು ಸೇರಿಸುವಾಗ ಪ್ರಕೃತಿಯ ಮೊದಲನೇ ಅಕ್ಷರವು ವೃದ್ಧಿಯಾಗುತ್ತದೆ.

ಉದಾಹರಣೆ.

ಪ್ರಕೃತಿ.	ಅರ್ಥ.	ಭಾವನಾಮವಾಚಕ.	ಅರ್ಥ.
ಸುಹೃತ್	ಸ್ನೇಹಿತ	ಸೌಹೃದ್ಯ	ಸ್ನೇಹ
ಸುಲಭ	ಸುಲಭವಾದ	ಸೌಲಭ್ಯ	ಸುಲಭವಾದದ್ದು

೩ "ಈ" ಯೆಂಬ ಪ್ರತ್ಯಯವನ್ನು ಪುಂಲಿಂಗ ಪ್ರಕೃತಿಗಳಿಗೆ ಸೇರಿಸಿದರೆ ಸ್ತ್ರೀಲಿಂಗ ಪ್ರಕೃತಿಗಳಾಗುವವು.

ಉದಾಹರಣೆ.

ಪುಂಲಿಂಗಪ್ರಕೃತಿ.	ಅರ್ಥ.	ಸ್ತ್ರೀಲಿಂಗಪ್ರಕೃತಿ.	ಅರ್ಥ.
ಪುತ್ರ	ಮಗನು	ಪುತ್ರಿ	ಮಗಳು
ನರ್ತಕ	ಕುಣಿಯುವವ	ನರ್ತಕೀ	ಕುಣಿಯುವವಳ

೪ "ಮತ್" ಯೆಂಬ ಪ್ರತ್ಯಯವನ್ನು ಇ ಈ ಉಕಾರಾಂತ ಪ್ರತ್ಯಯಗಳಿಗೆ ಅನುಬಂಧಿಸಿದರೆ ಅನೇಕ ಗುಣವಾಚಕಗಳಾಗುವವು.

ಉದಾಹರಣೆ.

ಪ್ರಕೃತಿ.	ಅರ್ಥ.	ಗುಣವಾಚಕ	ಅರ್ಥ.
ಧೀ	ಬುದ್ಧಿ	ಧೀಮತ್	ಬುದ್ಧಿಯುಳ್ಳ
ಅಂಶು	ಕಿರಣ	ಅಂಶುಮತ್	ಕಿರಣಗಳುಳ್ಳ
ಕೀರ್ತಿ	ಯಶಸ್ಸು	ಕೀರ್ತಿಮತ್	ಯಶಸ್ಸುಳ್ಳ

೫ ಪ್ರಕೃತಿಯ ಮೊದಲನೇ ಅಕ್ಷರವನ್ನು ವೃದ್ಧಿಮಾಡಿ "ಅ" ಯೆಂಬ ಪ್ರತ್ಯಯವನ್ನು ಅನುಬಂಧಿಸುವದರಿಂದ ಪ್ರಕೃತಿಗೆ ಸಂಬಂಧ ತೋರಿಸುವ ಅನೇಕ ಗುಣವಾಚಕಗಳಾಗುವವು. ಆದರೆ ಪ್ರಕೃತಿಯು ಅಕಾರಾಂತವಾಗಿದ್ದರೆ ಅದೇ "ಅ" ಪ್ರತ್ಯಯವೆಂದು ನೆನಸಬೇಕು.

ಉದಾಹರಣೆ.

ಪ್ರಕೃತಿ.	ಗುಣವಾಚಕ.	ಅರ್ಥ.
ಪುರುಷ	ಪೌರುಷ	ಪುರುಷ ಸಂಬಂಧವಾದ
ವಸಿಷ್ಠ	ವಾಸಿಷ್ಠ	ವಸಿಷ್ಠ ಸಂಬಂಧವಾದ
ಶಿವ	ಶೈವ	ಶಿವ ಸಂಬಂಧವಾದ
ಇಂದ್ರ	ಐಂದ್ರ	ಇಂದ್ರ ಸಂಬಂಧವಾದ
ಮರುತ್	ಮಾರುತ	ವಾಯು ಸಂಬಂಧವಾದ

ಆದರೆ ಕೆಲವು ಸಮಯಗಳಲ್ಲಿ ಈ ಗುಣವಾಚಕವೇ ಭಾವನಾಮವಾಚಕವಾಗಿ ಯೋಜಿಸಲ್ಪಡುತ್ತದೆ.

ಉದಾಹರಣೆ.

ಪ್ರಕೃತಿ.	ಭಾವನಾಮವಾಚಕ.	ಅರ್ಥ.
ಶಿಶು	ಶೈಶವ	ಬಾಲ್ಯ
ಶೂರ	ಶೌರ್ಯ	ಶೂರತ್ವ

೬ ಪ್ರಕೃತಿಯ ಮೊದಲನೇ ಅಕ್ಷರವನ್ನು ವೃದ್ಧಿಮಾಡಿ "ಇಕ" ಯೆಂಬ ಪ್ರತ್ಯಯವನ್ನು ಸೇರಿಸುವದರಿಂದ ಗುಣವಾಚಕಗಳಾಗುತ್ತವೆ.

ಉದಾಹರಣೆ.

ಪ್ರಕೃತಿ.	ಗುಣವಾಚಕ.	ಅರ್ಥ.
ಧರ್ಮ	ಧಾರ್ಮಿಕ	ಧರ್ಮವುಳ್ಳ
ವೇಣು	ವೈಣವಿಕ	ವೇಣು ಸಂಬಂಧವಾದ

೭ ಪ್ರಕೃತಿಯ ಪ್ರಥಮಾಕ್ಷರವನ್ನು ವೃದ್ಧಿಮಾಡಿ ಪ್ರಕೃತ್ಯಂತದಲ್ಲಿನ ಸ್ವರವನ್ನು ಲೋಪಿಸಿ "ಏಯ" ಯೆಂಬ ಪ್ರತ್ಯಯವನ್ನು ಸೇರಿಸುವದರಿಂದ ಅನೇಕ ಗುಣವಾಚಕಗಳಾಗುತ್ತವೆ.

ಉದಾಹರಣೆ.

ಪ್ರಕೃತಿ.	ಗುಣವಾಚಕ.	ಅರ್ಥ.
ಅಗ್ನಿ	ಆಗ್ನೇಯ	ಅಗ್ನಿ ಸಂಬಂಧವಾದ
ಪುರುಷ	ಪೌರುಷೇಯ	ಪುರುಷ ಸಂಬಂಧವಾದ
ಉತ್ತರ	ಔತ್ತರೇಯ	ಉತ್ತರ ದಿಕ್ಕಿನ
ದಕ್ಷಿಣ	ದಾಕ್ಷಿಣೇಯ	ದಕ್ಷಿಣ ದಿಕ್ಕಿನ

೮ ಪ್ರಕೃತಿಯನ್ನು ಸ್ವಲ್ಪವಾದರೂ ವ್ಯತ್ಯಸ್ತ ಮಾಡದೆ "ಈಯ" ಯೆಂಬ ಪ್ರತ್ಯಯವನ್ನು ಸೇರಿಸುವದರಿಂದ ಗುಣವಾಚಕಗಳಾಗುತ್ತವೆ.

ಉದಾಹರಣೆ.

ಪ್ರಕೃತಿ.	ಗುಣವಾಚಕ.	ಅರ್ಥ.
ಪರ್ವತ	ಪರ್ವತೀಯ	ಪರ್ವತದ
ದೇಶ	ದೇಶೀಯ	ದೇಶ ಸಂಬಂಧವಾದ

ಆದರೆ ಕೆಲವು ಸ್ಥಳಗಳಲ್ಲಿ ಪ್ರಕೃತಿ ಪ್ರತ್ಯಯಗಳ ನಡುವೆ ಕ ಕಾರಾಗಮವು ಬರುತ್ತದೆ.

ಉದಾಹರಣೆ.

ಪ್ರಕೃತಿ.	ಗುಣವಾಚಕ.	ಅರ್ಥ.
ಪರ	ಪರಕೀಯ	ಪರ ಸಂಬಂಧವಾದ
ಸ್ವ	ಸ್ವಕೀಯ	ಸ್ವಂತವಾದ

೯ ಪ್ರಕೃತಿಗಳನ್ನು ವ್ಯತ್ಯಾಸ ಮಾಡದೆ "ಈನ, ಇನ, ತನ, ವಲ" ಯೆಂಬ ಪ್ರತ್ಯಯಗಳನ್ನು ಶೇರಿಸುವದರಿಂದ ಅನೇಕ ಅಕಾರಾಂತ ಗುಣವಾಚಕಗಳಾಗುತ್ತವೆ.

ಉದಾಹರಣೆ.

ಪ್ರಕೃತಿ.	ಗುಣವಾಚಕ.	ಅರ್ಥ.
ಗ್ರಾಮ	ಗ್ರಾಮೀಣ	ಗ್ರಾಮ ಸಂಬಂಧವಾದ
ರಥ	ರಥೀನ	ರಥ ಸಂಬಂಧವಾದ
ಪ್ರಾಕ್	ಪ್ರಾಕ್ತನ	ಪುರಾತನವಾದ
ಉದೀಚಿ	ಉದೀಚೀನ	ಉತ್ತರದಿಕ್ಕಿನ
ಶಿಖಾ	ಶಿಖಾವಲ	ಶಿಖಾ ಸಂಬಂಧವಾದ

೧೦ ಪ್ರಕೃತಿಗಳಿಗೆ "ಕ" ಯೆಂಬ ಪ್ರತ್ಯಯವನ್ನು ಶೇರಿಸಿ ಅರ್ಥವನ್ನು ಕೊರತೆ ಮಾಡುವ ಮತ್ತು ಸಮೂಹಾರ್ಥವಾದ ಗುಣವಾಚಕಗಳನ್ನು ಮಾಡಬಹುದು.

ಉದಾಹರಣೆ.

ಪ್ರಕೃತಿ.	ಗುಣವಾಚಕ.	ಅರ್ಥ.
ಅಶ್ವ	ಅಶ್ವಕ	ಕುದುರೆಯುಳ್ಳ
ಗುಣ	ಗಣಕ	ಗುಣಿಸತಕ್ಕ

೧೧ ಪ್ರಕೃತಿಗಳಿಗೆ "ಮಯ" ಯೆಂಬ ಪ್ರತ್ಯಯವನ್ನು ಶೇರಿಸಿದರೆ ಮಾಡಲ್ಪಟ್ಟಿದೆ, ಅಥವಾ ತುಂಬಿದೆ ಯೆಂಬ ಅರ್ಥವುಳ್ಳ ಅನೇಕ ಗುಣವಾಚಕಗಳಾಗುತ್ತವೆ.

ಉದಾಹರಣೆ.

ಪ್ರಕೃತಿ.	ಗುಣವಾಚಕ.	ಅರ್ಥ.
ಲೋಹ	ಲೋಹಮಯ	ಲೋಹದಿಂದ ತುಂಬಿದ
ತೇಜಸ್	ತೇಜೋಮಯ	ಪ್ರಕಾಶದಿಂದ ತುಂಬಿದ
ರತ್ನ	ರತ್ನಮಯ	ರತ್ನಗಳಿಂದ ತುಂಬಿದ
ಸುವರ್ಣ	ಸುವರ್ಣಮಯ	ಚಿನ್ನದಿಂದ ಮಾಡಲ್ಪಟ

೧೦ ಪ್ರಕೃತಿಗಳಿಗೆ "ದಘ್ನ, ಮಾತ್ರ" ಯೆಂಬ ಪ್ರತ್ಯಯಗಳನ್ನು ಶೇರಿಸುವದರಿಂದ ಪ್ರಮಾಣವನ್ನು ಅಥವಾ ಯೆತ್ತರವನ್ನು ತೋರಿಸುವ ಗುಣವಾಚಕಗಳಾಗುತ್ತವೆ.

ಉದಾಹರಣೆ.

ಪ್ರಕೃತಿ.	ಗುಣವಾಚಕ.	ಅರ್ಥ.
ಜಾನು	ಜಾನುದಘ್ನ	ಮೋಣಕಾಲುದ್ದ
ಅಣು	ಅಣುಮಾತ್ರ	ರವೆಯಷ್ಟು

೧೩ ಪ್ರಕೃತಿಗಳಿಗೆ "ಕಲ್ಪ" ಯೆಂಬ ಪ್ರತ್ಯಯವನ್ನು ಅನುಬಂಧಿಸುವದರಿಂದ ಸ್ವಲ್ಪ ಹೆಚ್ಚುಕಡಮೆ ಇದಕ್ಕೆ ಸಮವಾಗಿದೆ ಯೆಂಬರ್ಥವನ್ನು ಕೊಡುವ ಗುಣವಾಚಕಗಳಾಗುತ್ತವೆ.

ಉದಾಹರಣೆ.

ಪ್ರಕೃತಿ.	ಗುಣವಾಚಕ.	ಅರ್ಥ.
ಕವಿ	ಕವಿಕಲ್ಪ	ಕವಿಗೆ ಸಮಾನವಾದ
ಪ್ರಭಾತ	ಪ್ರಭಾತಕಲ್ಪ	ಪ್ರಾತಃಕಾಲಕ್ಕೆ ಸಮಾನವಾದ
ಅಗ್ನಿ	ಅಗ್ನಿಕಲ್ಪ	ಅಗ್ನಿಗೆ ಸಮಾನವಾದ
ನಕ್ಷತ್ರ	ನಕ್ಷತ್ರಕಲ್ಪ	ನಕ್ಷತ್ರಕ್ಕೆ ಸಮಾನವಾದ

೧೪ ಧಾತುಗಳಿಗೆ "ತ, ಇತ" ಯೆಂಬ ಪ್ರತ್ಯಯಗಳನ್ನು ಶೇರಿಸುವದರಿಂದ ಭೂತ ಕೃದ್ವಾಚಿಗಳು ಆಗುತ್ತವೆ. ಹೀಗೆ ಧಾತುಗಳಿಗೆ ಪ್ರತ್ಯಯವನ್ನು ಹಚ್ಚಿಸುವದರಿಂದುಂಟಾಗುವ ಶಬ್ದಗಳಿಗೆ ಕೃದಂತಗಳೆಂದು ಹೆಸರು.

ಉದಾಹರಣೆ.

ಧಾತು.	ಭೂತ ಕೃದ್ವಾಚಿ.	ಅರ್ಥ.
ಜೀ	ಜಿತ	ಜಯಿಸಿದ
ಕೃ	ಕೃತ	ಮಾಡಿದ
ಗಂ	ಗತ	ಹೋದ
ಮೃ	ಮೃತ	ಸತ್ತುಹೋದ
ಜ್ಞಾ	ಜ್ಞಾತ	ತಿಳಿದ
ಅರ್ಚ್	ಅರ್ಚಿತ	ಪೂಜಿಸಿದ

೧೧೪ ಧಾತುಗಳಿಗೆ "ಮಾನ, ಅನ, ತವ್ಯ, ಅನಿಯ, ಈಯ" ಯೆಂಬ ಪ್ರತ್ಯಯಗಳನ್ನು ಕೂಡಿಸುವದರಿಂದ ವರ್ತಮಾನ ಭವಿಷ್ಯದರ್ಥಗಳೂ ಮಾಡಬೇಕಾದದ್ದುಯೆಂಬರ್ಥವುಳ್ಳ ಕೃದ್ವಾಚಿಗಳೂ ಆಗುವವು. ಆದರೆ ಧಾತುಗಳಿಗೆ ಈ ಪ್ರತ್ಯಯಗಳನ್ನು ಅನುಬಂಧಿಸುವಾಗ ಧಾತ್ವಂತ್ಯದಲ್ಲಿನ ಅರ್ಧಾಕ್ಷರವು ಪೂರ್ಣಾಕ್ಷರವಾಗುವದು. ಕೆಲವು ಸಮಯಗಳಲ್ಲಿ ಧಾತುವಿನ ಪ್ರಥಮಾಕ್ಷರವು ಗುಣವಾಗುವದು.

ಉದಾಹರಣೆ.

ಧಾತು.	ಕೃದ್ವಾಚಿ.	ಅರ್ಥ.
ಪಚ್	ಪಚಮಾನ	ಅಡಿಗೆ ಮಾಡುವ
ಬ್ರೃ	ಬ್ರೃವಾಣ	ಹೇಳುವ
ಕೃ	ಕರ್ತವ್ಯ	ಮಾಡತಕ್ಕ
ಮಾ	ಮೇಯ	ಅಳೆಯ ಬೇಕಾದ
ಜ್ಞಾ	ಜ್ಞೇಯ	ತಿಳಿಯತಕ್ಕ

115. ತತ್ಸಮ ಶಬ್ದಗಳಿಗೆ ಕನ್ನಡ ಪ್ರತ್ಯಯಗಳು ಹೊಂದುವಾಗ ಯೇನಾದರೂ ರೂಪ ಭೇದ ಉಂಟೋ ?

ಕೆಲವು ತತ್ಸಮ ಶಬ್ದಗಳು ಕನ್ನಡ ಪ್ರತ್ಯಯಗಳನ್ನು

ಹೊಂದುವಾಗ ಅವುಗಳಿಗೆ ಲೋಪಾಗಮಾದೇಶಗಳು ಬರುತ್ತವೆ. ಅವುಗಳು ಯಾವವೆಂದರೆ,

೧ ದೀರ್ಘ ಸ್ವರಾಂತ್ಯಗಳಾದ ತತ್ಸಮ ಶಬ್ದಗಳಿಗೆ ಕನ್ನಡ ಪ್ರತ್ಯಯಗಳು ಕೂಡಿಸುವಾಗ ದೀರ್ಘಕ್ಕೆ ಹ್ರಸ್ವಸ್ವರವು ಬರುವದು.

ಉದಾಹರಣೆ.

ಪ್ರತ್ಯಯವಿಲ್ಲದ ರೂಪ.	ಪ್ರತ್ಯಯಸಹಿತ ರೂಪ.	ಪ್ರತ್ಯಯವಿಲ್ಲದ ರೂಪ.	ಪ್ರತ್ಯಯಸಹಿತ ರೂಪ.
ಸಖಾ	ಸಖನು.	ವಧೂ	ವಧುವು
ಲಕ್ಷ್ಮೀ	ಲಕ್ಷ್ಮಿಯು	ಧರಿತ್ರೀ	ಧರಿತ್ರಿಯು
ಗೌರೀ	ಗೌರಿಯು	ವಿಶ್ವಪಾ	ವಿಶ್ವಪನು

ಆದರೆ ಆಕಾರಾಂತವಾದ ಕೆಲವು ತತ್ಸಮಗಳಿಗೆ ಪ್ರತ್ಯಯ ಕೂಡುವಾಗ ಹ್ರಸ್ವ ಎಕಾರಾದೇಶ ಬರುತ್ತದೆ.

ಉದಾಹರಣೆ.

ತತ್ಸಮ	ಪ್ರತ್ಯಯ ಸಹಿತ ರೂಪ.	ತತ್ಸಮ	ಪ್ರತ್ಯಯಸಹಿತ ರೂಪ.
ಲತಾ	ಲತೆಯು	ಊಹಾ	ಊಹೆಯು
ಅಂಗನ	ಅಂಗನೆಯು	ರಂಭಾ	ರಂಭೆಯು

೨ ಋಕಾರಾಂತ ತತ್ಸಮ ಶಬ್ದಗಳಿಗೆ ಕೆಲವು ಸ್ಥಳಗಳಲ್ಲಿ ಮಾತ್ರ ಋಕಾರಕ್ಕೆ ಅಕಾರವು ಆದೇಶವಾಗಿ ಬರುತ್ತದೆ. ಆದರೆ ಕೆಲವು ಸ್ಥಳಗಳಲ್ಲಿ ಇಲ್ಲ.

ಉದಾಹರಣೆ.

ತತ್ಸಮ	ಪ್ರತ್ಯಯಸಹಿತ ರೂಪ.	ತತ್ಸಮ	ಪ್ರತ್ಯಯಸಹಿತ ರೂಪ.
ಕರ್ತೃ	ಕರ್ತನು	ಪಿತೃ	ಪಿತೃವು
ಭರ್ತೃ	ಭರ್ತನು	ಭ್ರಾತೃ	ಭ್ರಾತೃವು

೩ ನಕಾರಾಂತ ತತ್ಸಮ ಶಬ್ದಗಳ ನಕಾರಕ್ಕೆ ಲೋಪ ಬರುತ್ತದೆ.

ಉದಾಹರಣೆ.

ತತ್ಸಮ.	ಪ್ರತ್ಯಯಸಹಿತ ರೂಪ.	ತತ್ಸಮ	ಪ್ರತ್ಯಯಸಹಿತ ರೂಪ.
ರಾಜನ್	ರಾಜನು	ಕರಿನ್	ಕರಿಯು
ಆತ್ಮನ್	ಆತ್ಮವು	ದಂಡಿನ್	ದಂಡಿಯು

ಇದಕ್ಕೆ ಪ್ರತಿಷೇಧಗಳು.

ತತ್ಸಮ.	ಪ್ರತ್ಯಯಸಹಿತ ರೂಪ.	ತತ್ಸಮ	ಪ್ರತ್ಯಯಸಹಿತ ರೂಪ.
ಶ್ವನ್	ಶ್ವಾನವು	ಯುವನ್	ಯುವಾನನು
ಪಥಿನ್	ಪಂಥಾನವು	ಮಘವನ್	ಮಘವಾನನು
ಮಥಿನ್	ಮಂಥಾನವು	ಅಧ್ವನ್	ಅಧ್ವಾನನು

೪. ಸಕಾರಾರ್ಧಾಕ್ಷರದಲ್ಲಿ ಅಂತವಾದ ಶಬ್ದಗಳಿಗೆ ಪ್ರತ್ಯಯವನ್ನು ಶೇರಿಸಿದರೆ ಅಂತ್ಯಾಕ್ಷರಕ್ಕೆ ಉಕಾರ ಸಹಿತ ದ್ವಿತ್ವವಾಗಲಿ ಅಥವಾ ಆ ಅಂತ್ಯಾಕ್ಷರಕ್ಕೆ ಲೋಪವಾಗಲಿ ಬರುವದು.

ಉದಾಹರಣೆ.

ತತ್ಸಮ.	ಪ್ರತ್ಯಯಸಹಿತ ರೂಪ	ಲುಪ್ತರೂಪ.
ಪುರೂರವಸ್	ಪುರೂರವಸ್ಸು	ಪುರೂರವನು
ಮನಸ್	ಮನಸ್ಸು	ಮನ
ಯಶಸ್	ಯಶಸ್ಸು	ಯಶವು
ರಜಸ್	ರಜಸ್ಸು	ರಜವು

೫ ಸಾಧಾರಣವಾಗಿ ಅರ್ಧಾಕ್ಷರಗಳಲ್ಲಿ ಅಂತವಾದತತ್ಸಮ ಶಬ್ದಗಳಿಗೆ ಪ್ರತ್ಯಯಗಳನ್ನು ಶೇರಿಸಿದರೆ ಆ ಅಂತ್ಯಾಕ್ಷರಕ್ಕೆ ಉಕಾರಸಹಿತ ದ್ವಿತ್ವ ಬರುವದು.

ಉದಾಹರಣೆ.

ತತ್ಸಮ.	ಪ್ರತ್ಯಯಸಹಿತ ರೂಪ.	ತತ್ಸಮ.	ಪ್ರತ್ಯಯಸಹಿತ ರೂಪ.
ಅಪ್	ಅಪ್ಪು	ವಾಕ್	ವಾಕ್ಕು
ಜಗತ್	ಜಗತ್ತು	ದಿಕ್	ದಿಕ್ಕು
ಮರುತ್	ಮರುತ್ತು	ತ್ವಕ್	ತ್ವಕ್ಕು
ಇಂದ್ರಜಿತ್	ಇಂದ್ರಜಿತ್ತು	ವಿಟ್	ವಿಟ್ಟು

116. ತದ್ಭವ ಶಬ್ದಗಳ ಉತ್ಪತ್ತಿ ವಿಧಿಗಳು ಯಾವವು ?

ತತ್ಸಮ ಶಬ್ದಗಳು ವಿಕೃತಿಯನ್ನು ಹೊಂದಿ ಕನ್ನಡ ದಲ್ಲಿ ಪ್ರಯೋಗಿಸುವಾಗ ಕೆಲವು ಅಕ್ಷರಗಳಿಗೆ ಲೋಪಾಗಮಾದೇಶಗಳು ಬರುತ್ತವೆ' ಅವುಗಳ ವಿಧಿಗಳು ಯಾವವಂದರೆ,

೧ ತತ್ಸಮ ಶಬ್ದದ ಶಕಾರ ಷಕಾರಗಳಿಗೆ ತದ್ಭವದಲ್ಲಿ ಸಕಾರಾದೇಶ ಬರುತ್ತದೆ.

ಉದಾಹರಣೆ.

ತತ್ಸಮ.	ತದ್ಭವ.	ತತ್ಸಮ.	ತದ್ಭವ.
ಶಶಿ	ಸಸಿ	ವೇಷ	ವೇಸ
ಶಿಶು	ಸಿಸು	ದೋಷ	ದೋಸ
ಶಂಬರ	ಸಂಬರ	ರೋಷ	ರೋಸ

೨ ಲಕಾರಕ್ಕೆ ಳಕಾರವೂ ಡಕಾರಕ್ಕೆ ಳಕಾರವೂ ಯಕಾರಕ್ಕೆ ಜಕಾರವೂ ಆದೇಶವಾಗುವದು.

೮ ಸಂಯುಕ್ತಾಕ್ಷರದಲ್ಲಿ ಮೇಲಿನ ಅಕ್ಷರವು ಧಕಾರವಾಗಿದ್ದು ವೊತ್ತಕ್ಷರವು ಯಕಾರವಾಗಿದ್ದರೆ ಧಕಾರವು ಲೋಪಿಸಿ ವೊತ್ತಕ್ಷರವಾದ ಯಕಾರಕ್ಕೆ ಜಕಾರಾದೇಶ ಬರುತ್ತದೆ.

ಉದಾಹರಣೆ.

ತತ್ಸಮ.	ತದ್ಭವ.	ತತ್ಸಮ.	ತದ್ಭವ.
ವಿಂಧ್ಯೆ	ಬಿಂಜೆ	ವಂಧ್ಯೆ	ಬಂಜೆ
ಸಂಧ್ಯೆ	ಸಂಜೆ	ಧ್ಯಾನ	ಜಾನ

೯ ಸಂಯುಕ್ತಾಕ್ಷರದಲ್ಲಿನ ರೇಫವು ಲೋಪಿಸಿ ಅದಕ್ಕೆ ಸೇರಿ ಯಿದ್ದ ವ್ಯಂಜನಕ್ಕೆ ದ್ವಿತ್ವ ಬರುತ್ತದೆ. ಆದರೆ ಆ ಸಂಯುಕ್ತಾಕ್ಷರವು ಪದದ ಆದ್ಯಕ್ಷರವಾಗಿದ್ದರೆ ದ್ವಿತ್ವ ಬಾರದೆ ರೇಫಮಾತ್ರ ಲೋಪಿಸುವದು.

ಉದಾಹರಣೆ.

ತತ್ಸಮ.	ತದ್ಭವ.	ತತ್ಸಮ.	ತದ್ಭವ.
ಸ್ವರ್ಗ	ಸಗ್ಗ	ನಿದ್ರೆ	ನಿದ್ದೆ
ವರ್ತಿ	ಬತ್ತಿ	ದುರ್ಗ	ದುಗ್ಗ
ಶ್ರೇಣಿ	ಸೇಣಿ	ಮುದ್ರಿಕೆ	ಮುದ್ದಿಗೆ

೧೦ ನಿತ್ಯ ಸಂಯುಕ್ತವಾದ ಕ್ಷಕಾರವು ಪದದ ಆದ್ಯಕ್ಷರವಲ್ಲದಿದ್ದರೆ ಕ್ಷಕಾರವು ಲೋಪಿಸಿ ದ್ವಿತ್ವಕಕಾರವಾಗುವದು, ಆದರೆ ಪದದ ಆದ್ಯಕ್ಷರವಾಗಿದ್ದರೆ ದ್ವಿತ್ವವಿಲ್ಲದೆ ಕಕಾರ ವಾಗುವದು.

ಉದಾಹರಣೆ.

ತತ್ಸಮ.	ತದ್ಭವ.	ತತ್ಸಮ.	ತದ್ಭವ.
ಅಕ್ಷರ	ಅಕ್ಕರ	ಕ್ಷಾರ	ಕಾರ
ಲಕ್ಷಣ	ಲಕ್ಕಣ	ಕ್ಷೀರ	ಕೀರ
ಪಕ್ಷಿ	ಪಕ್ಕಿ	ಕುಕ್ಷಿ	ಕುಕ್ಕಿ

೧೧ ದೀರ್ಘ ಸ್ವರಗಳಿಗೆ ತದ್ಭವದಲ್ಲಿ ಅದರದರ ಹ್ರಸ್ವಸ್ವರ ಬರುತ್ತದೆ.

ಉದಾಹರಣೆ.

ತತ್ಸಮ.	ತದ್ಭವ.	ತತ್ಸಮ.	ತದ್ಭವ.
ಕಾರ್ಪಾಸ	ಕಪ್ಪಸ	ವೈಶಾಖ	ಬೇಸಿಗೆ
ಸಾಕ್ಷಿ	ಸಕ್ಕಿ	ಜಟಾ	ಜಡೆ
ಕಸ್ತೂರಿ	ಕತ್ತುರಿ	ಕಾರ್ಯ	ಕಜ್ಜ

೧೨ ಕೆಲವು ಪದಗಳಲ್ಲಿ ಉಕಾರಕ್ಕೆ ಒಕಾರವೂ ಋಕಾರಕ್ಕೆ ರಿಕಾರವೂ ಅಥವಾ ಇಕಾರವೂ ಬರುತ್ತದೆ.

ಉದಾಹರಣೆ.

ತತ್ಸಮ.	ತದ್ಭವ.	ತತ್ಸಮ.	ತದ್ಭವ.
ಮೂಢ	ಮೋಡ	ಋಣ	ರಿಣ
ತುಳಸಿ	ತೊಳಸಿ	ಋಷಿ	ರಿಸಿ
ಮೃಗ	ಮಿಗ	ಶೃಂಗ	ಸಿಂಗ
ದೃಢ	ದಿಡ	ಮೃದು	ಮಿದು

೧೩ ಕೆಲವು ಪದಗಳಲ್ಲಿನ ಹಕಾರವು ತದ್ಭವದಲ್ಲಿ ಲೋಪಿಸುತ್ತದೆ.

ಉದಾಹರಣೆ.

ತತ್ಸಮ.	ತದ್ಭವ.	ತತ್ಸಮ.	ತದ್ಭವ.
ಪ್ರಗ್ರಹ.	ಹಗ್ಗ	ಸಹಜ	ಸಾಜ
ಸಾಹಸ	ಸಾಸ	ಮಹಿಮೆ	ಮೈಮೆ

೧೪ ಕೆಲವು ಪದಗಳಲ್ಲಿನ ಯಕಾರವು ತದ್ಭವದಲ್ಲಿ ಲೋಪಿಸುತ್ತದೆ.

ಉದಾಹರಣೆ.

ತತ್ಸಮ.	ತದ್ಭವ.	ತತ್ಸಮ.	ತದ್ಭವ.
ನಿಯಮ	ನೇಮ	ವಿನಾಯಕ	ಬೆನಕ.

೧೧೬ ಪ್ರಾಚೀನ ಕವಿಗಳು ಈ ವಿಧಿಗಳಿಗೆ ವ್ಯತಿರಿಕ್ತವಾಗಿ ಅನೇಕ ತದ್ಭವ ಪದಗಳನ್ನು ಪ್ರಯೋಗಿಸಿ ಇರುವದರಿಂದಲೂ ಅವುಗಳು ಪ್ರಯೋಗಗಮ್ಯಗಳೇ ಹೊರ್ತು ಪ್ರಾಯಶಃ ವಿಧಿಗಮ್ಯಗಳಲ್ಲದ್ದರಿಂದಲೂ ಅವುಗಳಿಗೆ ಪ್ರತ್ಯೇಕ ವಿಧಿಗಳು ಮಾಡಿ ಬರೆಯಲು ಗ್ರಂಥ ವಿಸ್ತರ ಭಯದಿಂದ ಅವುಗಳಲ್ಲಿ ಕೆಲವು ವಾಡಿಕೆಯಾದ ಪದಗಳನ್ನು ಇಲ್ಲಿ ಉದಹರಿಸಿ ಇವೆ.

ತತ್ಸಮ.	ತದ್ಭವ.	ತತ್ಸಮ.	ತದ್ಭವ.
ಶೃಂಖಲ	ಸಂಕೋಲೆ	ಕುಡ್ಯ	ಗೋಡೆ
ಕ್ರಕಚ	ಗರಗಸ	ಕುಮಾರ	ಕುವರ
ಕುರಂಟ	ಗೋರಂಟೆ	ವೈದ್ಯ	ಬೆಜ್ಜ
ವಿದ್ಯೆ	ಬಿಜ್ಜೆ	ಶಲಾಕ	ಸಲಾಕು
ಸ್ಮಶಾನ	ಮಸಣ	ಉದ್ಯೋಗ	ಉಜ್ಜುಗ
ಉದ್ಯಾಪನ	ಉಜ್ಜಪಣೆ	ಜ್ಯೋತಿಷ್ಕ	ಜೋಯಿಸ
ಉತ್ಕಟ	ಉಗ್ಗಡ	ಶುನಕ	ಸೊಣಗ
ಕಂಬಲ	ಕಂಬಳಿ	ಗೃಹಣಿ	ಗರಣಿ
ಕುಠಾರ	ಕೊಡ್ಲಿ	ಕಾಷ್ಠ	ಕಡ್ಡಿ
ಇಷ್ಟಿಕಾ	ಇಟ್ಟಿಗೆ	ದಾಡಿಮ	ದಾಳಿಂಬ
ಗ್ರಂಥಿ	ಗಂಟು	ವಾಪಿ	ಬಾವಿ
ಮರೀಚ	ಮೆಣಸು	ಶಿಲ್ಪಕ	ಚಿಪ್ಪಿಗ
ಗೋಪಾಲ	ಗೋವಳ	ಸಸ್ಯ	ಸಸಿ
ಆಲಸ್ಯ	ಅಲಸಿಕೆ	ವೃದ್ಧಿ	ಬಡ್ಡಿ

117. ದೇಶ್ಯ ಪ್ರತ್ಯಯಗಳೆಷ್ಟು ವಿಧವು?

ದೇಶ್ಯ ಧಾತುಗಳ ಮೇಲೆ ಸೇರಿ ವಿವಿಧಾರ್ಥಗಳುಳ್ಳ ನಾಮಪದಗಳನ್ನು ಮಾಡುವ ಕೃದಂತಗಳೆಂತಲೂ—

ಧಾತುಗಳನ್ನುಳಿದು ಇತರ ಪದಗಳ ಮೇಲೆ ಶೇರಿ ಬೇರೆ ಬೇರೆ ಅರ್ಥಗಳುಳ್ಳ ಶಬ್ದಗಳನ್ನು ಮಾಡುವ ತದ್ಧಿತಾಂತಗಳೆಂತಲೂ—೨ ವಿಧವು.

118. ಕೃದಂತಗಳು ಯಾವವು?

ಕರ್ತೃಸೂಚಕಗಳಾದ "ಕುಳಿ, ಇ, ಇಗ, ಉಗ, ಅ, ಪುರುಕಿ" ಯೆಂಬ ಪ್ರತ್ಯಯಗಳು ಧಾತುಗಳ ಮೇಲೆ ಶೇರಿ ಕರ್ತೃ ಸೂಚಕ ನಾಮಪದಗಳನ್ನು ಮಾಡುತ್ತವೆ. ಈ ಪ್ರತ್ಯಯಗಳನ್ನು ಕೆಳಗೆ ಬರುವ ಉದಾಹರಣೆಗಳಲ್ಲಿ ಕಾಣಬಹುದು.

ಉದಾಹರಣೆ.

ನಾಮಪದ.	ಅರ್ಥ.
ಅಂಜುಕುಳಿ	ಅಂಜುವವನು
ಆಡುಕುಳಿ	ಆಡುವವನು
ಓಡುಕುಳಿ	ಓಡುವವನು
ಓದುಕುಳಿ	ಓದುವವನು
ಮೀನುಗುಳಿ	ಮೀನು ಹಿಡಿಯುವವನು
ಸೋತುಗುಳಿ	ಸೋತವನು
ಸಾತುಗುಳಿ	ಸಾಲಮಾಡುವವನು
ಎಲರುಣಿ	ಎಲರುಣ್ಣುವನು
ಕಲ್ಲು ಕುಟಿಗ	ಕಲ್ಲನ್ನು ಕುಟ್ಟುವವನು
ಮರಕುಟಿಗ	ಮರವನ್ನು ಕುಟ್ಟುವವನು
ಬಾಯ್ಬಡುಕ	ಬಾಯನ್ನು ಬಡಿಯುವವನು
ಮನೆಮುರುಕ	ಮನೆ ಮುರಿಯುವವನು
ತಲೆಹಿಡುಕ	ತಲೆಹಿಡಿಯುವವನು
ತಿರುಕ	ತಿರಿಯುವವನು

ನಾಮಪದ.	ಅರ್ಥ.
ಮುರುಕ	ಮುರುಕುವವನು
ಕೆಣುಕ	ಕೆಣುಕುವವನು
ತುರುಕ	ತುರುಕುವವನು
ಒಡ್ಡ	ಒಡ್ಡುವವನು
ಕುಂಟ	ಕುಂಟುವವನು
ಅಂಜುಪುರಿಕಿ	ಅಂಜುವವನು

೨ "ತ, ತೆ, ಇ, ಕೆ, ಟ, ಇಗೆ, ಗೆ, ಮೆ, ಎ, ವಿಕೆ, ಅವು, ವು, ಪು, ಸು, ಪಡಿ, ವಣಿಗೆ, ಋ, ಹ, ಕು, ಹು, ವಿ, ವೆ, ಗುಳು, ವಳಿತ, ಇತ," ಎಂಬ ಪ್ರತ್ಯಯಗಳು ಧಾತುಗಳ ಮೇಲೆ ಶೇರಿಧಾತುವಿನ ಅರ್ಥಾನುಸಾರವಾಗಿ ಕ್ರಿಯಾನಾಮಗಳನ್ನು ಮಾಡುತ್ತವೆ. ಈ ಪ್ರತ್ಯಯಗಳನ್ನೆಲ್ಲಾ ಕೆಳಗೆ ಬರೆದಿರುವ ಉದಾಹರಣೆಗಳಲ್ಲಿ ಕಾಣಬಹುದು.

ಉದಾಹರಣೆ.

ಧಾತು.	ಕ್ರಿಯಾನಾಮ.	ಧಾತು.	ಕ್ರಿಯಾನಾಮ
ಮಣಿ	ಮಣಿತ	ಇರಿ	ಇರಿತ
ಕುಣಿ	ಕುಣಿತ	ಮುರಿ	ಮುರಿತ
ಬಿಗಿ	ಬಿಗಿತ	ತಿರಿ	ತಿರಿತ
ಸುಗಿ	ಸುಗಿತ	ಉರಿ	ಉರಿತ
ನುಡಿ	ನುಡಿತ	ಹೊಡೆ	ಹೊಡೆತ
ಅಗಿ	ಅಗಿತ	ಮಾಣು	ಮಾಣಿಕೆ
ಮುಗಿ	ಮುಗಿತ	ತೋರು	ತೋರಿಕೆ
ಅರಿ	ಅರಿತ	ಆಳು	ಆಳಿಕೆ

ಧಾತು.	ಕ್ರಿಯಾನಾಮ.	ಧಾತು	ಕ್ರಿಯಾನಾಮ.
ಬಾಳು	ಬಾಳಿಕೆ	ಹರಟು	ಹರಟೆ
ಸೀಳು	ಸೀಳಿಕೆ	ಇರು	ಇರುವಿಕೆ
ಗೇಯು	ಗೇಯಿಕೆ	ತರು	ತರುವಿಕೆ
ಅಂಜು	ಅಂಜಿಕೆ	ಬರು	ಬರುವಿಕೆ
ಓಡು	ಓಟ	ಕಳು	ಕಳವು
ಆಡು	ಆಟ	ತೆರು	ತೆರವು
ನೋಡು	ನೋಟ	ಸೆಳೆ	ಸೆಳವು
ಕಾಡು	ಕಾಟ	ಅಗಳು	ಅಗಳ್ತ
ಕೂಡು	ಕೂಟ	ಮಿಗು	ಮಿಗುತೆ
ಉಣ್ಣು	ಊಟ	ನಡೆ	ನಡತೆ
ನೆಡು	ನೆಡಿಗೆ	ಹೊಳೆ	ಹೊಳೆಪು
ಉಡು	ಉಡಿಗೆ	ನೆನೆ	ನೆನಪು
ತೊಡು	ತೊಡಿಗೆ	ಮುನಿ	ಮುನಿಸು
ಅಡು	ಅಡಿಗೆ	ಮುಳಿ	ಮುಳಿಸು
ಮೂಡು	ಮೂಡಿಗೆ	ಬೆಳೆ	ಬೆಳಸು
ಹೊಲಿ	ಹೊಲಿಗೆ	ತಿದ್ದು	ತಿದ್ದುಪಡಿ
ನಲು	ನಲ್ಮೆ	ಬರೆ	ಬರವಣಿಗೆ
ಗೇಯು	ಗೇಮೆ	ಮೆರೆ	ಮೆರವಣಿಗೆ
ತಾಳು	ತಾಳ್ಮೆ	ಕೇಳು	ಕೇಳ್ವಿ
ಕೊಡು	ಕೊಡೆ	ವಿಾ	ವಿಾಹ
ಕೊಲು	ಕೊಲೆ	ಗೆಲ್ಲು	ಗೆಲುವಿ
ನಗು	ನಗೆ	ನಡೆ	ನಡೆವಳಿತ
ಹೊರು	ಹೊರೆ	ಒಪ್ಪು	ಒಪ್ಪಿತ

ಕೆಲವು ಶಬ್ದಗಳು ಧಾತುಗಳಲ್ಲಿಯೂ ಕ್ರಿಯಾ ನಾಮ ಗಳಲ್ಲಿಯೂ ಏಕ ರೂಪವಾಗಿವೆ.

ಉದಾಹರಣೆ.

ಧಾತು	ಕ್ರಿಯಾನಾಮ.	ಧಾತು.	ಕ್ರಿಯಾನಾಮ.
ಅರಲು	ಅರಲು	ತಡೆ	ತಡೆ
ಬೆಳೆ	ಬೆಳೆ	ಉರಿ	ಉರಿ
ಬದುಕು	ಬದುಕು	ದಾಟು	ದಾಟು
ಕಟ್ಟು	ಕಟ್ಟು	ಓದು	ಓದು
ಹೆಚ್ಚು	ಹೆಚ್ಚು	ತಗ್ಗು	ತಗ್ಗು

119. ತದ್ಧಿತಾಂತಗಳು ಯಾವವು?

ಧಾತುಗಳನ್ನುಳಿದ ಇತರ ಪದಗಳ ಮೇಲೆ ಶೇರಿ ವಿವಿಧಾರ್ಥಗಳುಳ್ಳ ಶಬ್ದಗಳನ್ನು ಮಾಡುವ ತದ್ಧಿತಾಂತಗಳಲ್ಲಿ ಕೆಲವು ನಾಮಪದಗಳನ್ನು ಮಾಡುವವುಗಳಾಗಿಯೂ ಕೆಲವು ಗುಣವಾಚಕಗಳನ್ನು ಮಾಡುವವುಗಳಾಗಿಯೂ ಕೆಲವು ಇತರ ಪದಗಳನ್ನು ಮಾಡುವವುಗಳಾಗಿಯೂ ಇವೆ. ಅವುಗಳ ವಿಧಿಗಳು ಯಾವವೆಂದರೆ,

೧ "ಗಾರ, ಇರ, ಆಳಿ, ಇಗ, ವಣಿಗ, ವಂತ, ಅಡಿಗ, ಕಾರ" ಎಂಬ ಪ್ರತ್ಯಯಗಳು ಶಬ್ದಗಳ ಮೇಲೆ ಶೇರುವದರಿಂದ ಪುಂಲಿಂಗ ನಾಮವಾಚಕಗಳಾಗುತ್ತವೆ. ಈ ಪ್ರತ್ಯಯಗಳನ್ನು ಮುಂದಿನ ಉದಾಹರಣೆಗಳಲ್ಲಿ ಕಾಣಲಾಗುವದು.

ಉದಾಹರಣೆ.

ನಾಮವಾಚಕ	ಅರ್ಥ
ಕುಂಬಾರ	ಕುಂಭವನ್ನು ಮಾಡುವವನು
ಬಣ್ಣಗಾರ	ಬಣ್ಣ ಹಾಕುವವನು

ನಾಮವಾಚಕ.	ಅರ್ಥ.
ಹಣಗಾರ	ಹಣವುಳ್ಳವನು
ಮೋಸಗಾರ	ಮೋಸಮಾಡುವವನು
ಮಾತಾಳಿ	ಬಹಳ ಮಾತಾಡುವವನು.
ಹೆಂಡತಿವಂತ	ಹೆಂಡತಿವುಳ್ಳವನು
ಓಲೆಕಾರ	ಓಲೆಯನ್ನು ತರುವವನು
ಜೂದಾಳಿ	ಜೂಜವಾಡುವವನು
ಮದ್ದಳಿಗ	ಮದ್ದಳೆಬಾರಿಸುವವನು.
ಗಾಣಿಗ	ಗಾಣವಾಡುವವನು
ಕಬ್ಬಿಗ	ಕಬ್ಬಮಾಡುವವನು
ಲಂಚವಣಿಗ	ಲಂಚದಿಂದ ಬದುಕುವವನು
ಕೋಲುಕಾರ	ಕೋಲು ಹಿಡಿಯುವವನು
ದೇವಡಿಗ	ದೇವರನ್ನು ಪೂಜಿಸುವವನು

೧ "ಇತಿ, ತಿ, ಇ, ಎ" ಯೆಂಬ ಪ್ರತ್ಯಯಗಳು ಪದಗಳ ಅಂತ್ಯದಲ್ಲಿದ್ದರೆ ಸ್ತ್ರೀಲಿಂಗ ನಾಮವಾಚಕಗಳೆಂದು ತಿಳಿಯಬೇಕು.

ಉದಾಹರಣೆ

ಬ್ರಾಹ್ಮಣಿತಿ	ದೇವಳಿಗಿತಿ	ಮಾತುಗಿತಿ	ತಿಮ್ಮಿ
ಅರಸಿತಿ	ನಿಡುಗಂಣಿ	ರಂಗಿ	ಲಂಚವಣಿ
ಹೂವಡಿಗಿತಿ	ಗಾಣಗಿತಿ	ವೆಂಕಟಿ	ಗುಣವಂತೆ
ಕುಂಬಾರತಿ	ಒಕ್ಕಲಗಿತಿ	ಮಡಿವಾಳಿ	ಆಟಗಾತಿ

೨ "ತನ" ಎಂಬುವದು ನಾಮವಾಚಕ ಗುಣವಾಚಕಗಳ ಮೇಲೆಯೂ 'ಪು' ಯೆಂಬುವದು ಗುಣವಾಚಕಗಳ ಮೇಲೆಯೂ ಶೇರಿ ನಪುಂಸಕಲಿಂಗವಾದ ಭಾವನಾಮವಾಚಕಗಳನ್ನು ಮಾಡುತ್ತವೆ.

ಉದಾಹರಣೆ.

ಅರಸುತನ	ಧೊರೆತನ	ಕಪ್ಪು	ಕೆಂಪು
ಒಳ್ಳೇತನ	ವರ್ತಕತನ	ಬಿಳುಪು	ನುಣ್ಪು

೪ "ತು, ತೆ, ಥ"ಎಂಬ ಪ್ರತ್ಯಯುಗಳುಳ್ಳ ಪದಗಳನ್ನು ಅವ್ಯಯುಗಳೆಂದು ತಿಳಿಯಬೇಕು.

ಉದಾಹರಣೆ.

ಅಂತು	ಇಂತು	ಅಂಥ	ಎಂಥ
ಅಂತೆ	ಇಂತೆ	ಇಂಥ	ಎಂತೆ

೫ "ಆಗ, ದು" ಯೆಂಬ ಪ್ರತ್ಯಯುಗಳು ಕಾಲಕ್ರಿಯಾ ವಿಶೇಷಣಾರ್ಥ ಕಾವ್ಯಯುಗಳನ್ನೂ "ಷ್ಟು" ಯೆಂಬ ಪ್ರತ್ಯಯುವು ಪರಿಮಾಣಾರ್ಥಕ ಗುಣವಾಚಕಗಳನ್ನೂ ಮಾಡುತ್ತವೆ.

ಉದಾಹರಣೆ.

ಆಗ	ಯಾವಾಗ	ಇಷ್ಟು	ಅಂದು
ಈಗ	ಅಷ್ಟು	ಎಷ್ಟು	ಎಂದು

120. ಅನ್ಯ ದೇಶ್ಯಶಬ್ದಗಳು ಕನ್ನಡಕ್ಕೆ ಬರುವಾಗ ಆಗುವ ವ್ಯತ್ಯಾಸಗಳ್ಯಾವವು ?

೧ "ಅ, ಈ, ಊ" ಇವುಗಳನ್ನುಳಿದ ಕಡಿಮೇ ಸ್ವರಾಂತಗಳಾದ ಶಬ್ದಗಳಿಗೆ ವ್ಯತ್ಯಾಸವಾಗುವದಿಲ್ಲ. ಹ್ಯಾಗಂದರೆ, ಆಕಾರಾಂತವಾದ ಶಬ್ದಕ್ಕೆ ಎಕಾರಾದೇಶವೂ ಈ ಊಕಾರಾಂತಗಳಾದ ಶಬ್ದಗಳ ಈ ಊಸ್ವರಗಳಿಗೆ ಹ್ರಸ್ವಾದೇಶವೂ ಬರುತ್ತವೆ.

ಉದಾಹರಣೆ.

ಪರವಾನಾ	ಪರವಾನೆ
ಷಾಲೂ	ಷಾಲು
ಕಸಬಾ	ಕಸಬೆ

೨ ಅನುಸ್ವಾರಾಂತವಾದ ಶಬ್ದಗಳಿಗೆ ಉಕಾರ ಸಹಿತವಾದ ಅನುನಾಸಿಕವೂ ಅರ್ಧಾಕ್ಷರದಲ್ಲಿ ಅಂತವಾದ ಕೆಲವು ಶಬ್ದಗಳಿಗೆ ಪೂರ್ಣಾಕ್ಷರವೂ ಕೆಲವು ಶಬ್ದಗಳಿಗೆ ದ್ವಿತ್ವವೂ ಬರುತ್ತದೆ.

ಉದಾಹರಣೆ.

ಸಲಾಂ	ಸಲಾಮು	ಕೋರಟ್	ಕೋರಟು
ತಮಾಂ	ತಮಾಮು	ದವಲತ್	ದವಲತ್ತು
ಖುಲ್	ಖುಲ್ಲು	ಷಹರ್	ಷಹರು

ಹಿಂದುಸ್ತಾನಿ ಇಂಗ್ಲಿಷ್ ಭಾಷೆಗಳು ಮಾತ್ರವಲ್ಲದೆ ಯಾವ ದ್ವೀಪಾಂತರ ಭಾಷೆಯ ಶಬ್ದಗಳನ್ನಾದರೂ ಮೇಲಿನ ವಿಧಿಗಳಿಗೆ ಅನುಸಾರವಾಗಿ ಕನ್ನಡದಲ್ಲಿ ಶೇರಿಸುವ ಪದ್ಧತಿವುಂಟು. ಅಂದರೆ ಅರಾಬೀ—ಫ್ರೆಂಚ್—ರಷ್ಯಾ ಇಂಥಾ ಭಾಷೆಯ ಪದಗಳನ್ನಾದರೂ ಶೇರಿಸ ಬಹುದು. ಇದಲ್ಲದೆ ಇಲ್ಲಿ ತಿಳಿಯಬೇಕಾದ ವಿಶೇಷವೇನಂದರೆ, ಈ ಪ್ರಕರಣದಲ್ಲಿ ಹೇಳಿರುವ ವಿಧಿಗಳಿಗೆ ವ್ಯತಿರಿಕ್ತವಾಗಿ ಗ್ರಾಮ್ಯ ಜನರು ಪ್ರಯೋಗಿಸುವ ಶಬ್ದಗಳನ್ನೆಲ್ಲಾ ಗ್ರಾಮ್ಯ ಶಬ್ದಗಳೆಂದು ತಿಳಿಯುವದು.

(SYNTAX.)

III. ವಾಕ್ಯಲಕ್ಷಣ.

1. ವಾಕ್ಯನಿರ್ಣಯ ಪ್ರಕರಣ. (*Kinds of Sentences.*)

121. ವಾಕ್ಯನಿರ್ಣಯ ಪ್ರಕರಣದಲ್ಲಿ ಏನು ಹೇಳಲ್ಪಡುತ್ತದೆ?

ವಾಕ್ಯಸ್ವರೂಪವೂ ಅವುಗಳ ಭೇದಗಳೂ ಹೇಳಲ್ಪಡುತ್ತವೆ.

122. ವಾಕ್ಯವೆಂದರೆ ಯೇನು?

ಮನುಷ್ಯರ ಮನಸ್ಸಿನ ಅಭಿಪ್ರಾಯವನ್ನು ಪದಗಳಿಂದ ಸಂಪೂರ್ಣವಾಗಿ ಇತರರಿಗೆ ತಿಳಿಸುವ ಪದಸಮೂಹವು ವಾಕ್ಯವೆನ್ನಿಸುವದು. ವಾಕ್ಯದಲ್ಲಿ ನಮ್ಮ ಅಭಿಪ್ರಾಯಕ್ಕೆ ಉದ್ದೇಶ್ಯವಾದ ಪದವು ಕರ್ತೃಪದವೆಂತಲೂ ಅಥವಾ ಆಖ್ಯೆಯೆಂತಲೂ, ಆಖ್ಯೆಯ ಕೆಲಸವನ್ನಾಗಲಿ ಸ್ಥಿತಿಯನ್ನಾಗಲಿ ತಿಳಿಸುವ ಪದವು ಕ್ರಿಯಾಪದವೆಂತಲೂ ಅಥವಾ ಆಖ್ಯಾತ ಪದವೆಂತಲೂ ವರ್ತಿಸುವವು.

ಉದಾಹರಣೆ.

ಆಖ್ಯೆ	ಆಖ್ಯಾತ.
ಮೃಗಗಳು	ಓಡುತ್ತವೆ.
ಘಾಳಿಯು	ಬೀಸುತ್ತದೆ.

ಎಲ್ಲಾ ವಾಕ್ಯಗಳಲ್ಲಿಯೂ ಆಖ್ಯೆ ಆಖ್ಯಾತಗಳು ಅಗತ್ಯವಾಗಿರುವವು. ಆದರೆ ಕ್ರಿಯಾಪದವು ಸಕರ್ಮಕ ಧಾತುವಾಗಿದ್ದರೆ ಕರ್ಮಪದ ಅಥವಾ ಆಖ್ಯಾತಸಮಾಪಕವು ಬೇಕಾಗಿರುವದು.

ಉದಾಹರಣೆ.

ಆಖ್ಯೆ.	ಆಖ್ಯಾತಸಮಾಪಕ.	ಆಖ್ಯಾತ.
ಶಬರನು	ಪಕ್ಷಿಗಳನ್ನು	ಕೊಲ್ಲುತ್ತಾನೆ.

123 ಆಖ್ಯೆಗೆ ಬರುವ ಪದಗಳು ಯಾವವು?

ನಾಮವಾಚಕದ ಕರ್ತೃ ವಿಭಕ್ತಿಯಾಗಲಿ ಅಥವಾ ಕರ್ತ್ರರ್ಥ ಬೋಧಕವಾದ ಇತರ ಪದಗಳಾಗಲಿ ಬರುತ್ತವೆ. ಅಂದರೆ ಸರ್ವನಾಮ ಮತ್ತು ನಾಮವಾಚಕ ಗುಣಸಂಖ್ಯಾ ಪರಿಮಾಣಗಳನ್ನು ಸ್ವತಂತ್ರ

ವಾಗಿ ಬೋಧಿಸುವ ನಿಷ್ಪನ್ನ ಗುಣವಾಚಕ ಸಂಖ್ಯಾವಾಚಕ ಸಂಖ್ಯಾನಿರ್ದಿಷ್ಟವಾಚಕ ಪರಿಮಾಣವಾಚಕ ನಿರ್ದರ್ಶಕ ಗುಣವಾಚಕ ಕೃನ್ನಾಮ ಕ್ರಿಯಾನಾಮಗಳು ಸಹ ಕರ್ತೃವಿಭಕ್ತಿಯಲ್ಲಿ ಆಖ್ಯೆಯಾಗಿ ಬರುವವು. ಮತ್ತು ವಾಕ್ಯದಲ್ಲಿ ಆಖ್ಯೆ ಯಾವದೆಂದು ತಿಳುಕೊಳ್ಳುವದಕ್ಕೆ ಯಾರು ಯೇನು ಯೆಂಬ ಪ್ರಶ್ನೆಗಳನ್ನು ಮಾಡಲಾಗಿ ಇದರ ಉತ್ತರವೇ ಆಖ್ಯೆಯಾಗಿರುವದು.

ಉ ದಾ ಹ ರ ಣೆ .

	ಆಖ್ಯೆ.	ಆಖ್ಯಾತಸಮಾಪಕ.	ಆಖ್ಯಾತ.
ನಾಮವಾಚಕಕ್ಕೆ	ಅರಸನು	ರಾಜ್ಯವನ್ನು	ಆಳುತ್ತಾನೆ
ಸರ್ವನಾಮಕ್ಕೆ	ನೀನು	ಪುಸ್ತಕವನ್ನು	ಬರಿಯುತ್ತಿ
ನಿಷ್ಪನ್ನ ಗುಣವಾಚಕಕ್ಕೆ	ಒಳ್ಳೇವರು	ಘನವನ್ನು	ಸಂಪಾದಿಸುತ್ತಾರೆ
ಸಂಖ್ಯಾವಾಚಕಕ್ಕೆ	ಇಬ್ಬರು	ಕೆಲಸವನ್ನು	ತೀರಿಸಿದರು
ಸಂಖ್ಯಾನಿರ್ದಿಷ್ಟವಾಚಕಕ್ಕೆ	ಎರಡನೆಯವನು	ಈಮಾತನ್ನು	ಹೇಳಿದನು
ಪರಿಮಾಣವಾಚಕಕ್ಕೆ	ಕೆಲವರು	ಮತವನ್ನು	ನಂಬುವದಿಲ್ಲ
ನಿರ್ದರ್ಶಕ ಗುಣವಾಚಕಕ್ಕೆ	ಇಂಥವನು	ವಿದ್ಯೆಯನ್ನು	ಕಲಿಯುವನು
ಕೃನ್ನಾಮಕ್ಕೆ	ಓದಿದವನು	ಜ್ಞಾನವನ್ನು	ಪಡೆಯುತ್ತಾನೆ
ಕ್ರಿಯಾನಾಮಕ್ಕೆ	ಭುಜಿಸುವದು	ಬಲವನ್ನು	ವೃದ್ಧಿ ಮಾಡುತ್ತದೆ

ಇಲ್ಲಿ ಉದಹರಿಸಿದ ವಾಕ್ಯಗಳಲ್ಲಿ ಆಖ್ಯೆಯನ್ನು ತಿಳುಕೊಳ್ಳುವದಕ್ಕೆ ಯಾರು ರಾಜ್ಯವನ್ನು ಆಳುತ್ತಾರೆಂದು ಪ್ರಶ್ನೆ ಮಾಡಲಾಗಿ ಅರಸನು ಯೆಂದು ಉತ್ತರವು ಬರುವವರಿಂದ ಅರಸನು ಯೆಂಬದು ಆಖ್ಯೆಯಾಯಿತು. ಹೀಗೆಯೇ ಉಳದದ್ದನ್ನು ಊಹಿಸುವದು.

124. ಆಖ್ಯಾತಕ್ಕೆ ಬರುವ ಪದಗಳು ಯಾವವು?

ಆಖ್ಯಾತಕ್ಕೆ ಮುಖ್ಯವಾಗಿ ಧಾತುಗಳ ಪುರುಷಾತ್ಮಕ ಕ್ರಿಯಾರೂಪಗಳಲ್ಲಿ ಯಾವದಾದರೂ ಒಂದು ಬರುತ್ತದೆ. ಅಥವಾ ಲುಪ್ತವಾದ ಇರು ಧಾತುವಿನ ಆಖ್ಯಾತ ರೂಪಗಳನ್ನು * ಅಧ್ಯಾಹಾರ ಮಾಡಬಹುದಾದ ನಾಮವಾಚಕದ ಕರ್ತೃ ವಿಭಕ್ತಿ ಸ್ವತಂತ್ರ ಬೋಧಕಗಳಾದ ಗುಣವಾಚಕ ಸಂಖ್ಯಾವಾಚಕ ಪರಿಮಾಣವಾಚಕ ಸಂಖ್ಯಾನಿರ್ದಿಷ್ಟವಾಚಕ ಕೃನ್ನಾಮ ಕ್ರಿಯಾನಾಮ ಇವುಗಳಲ್ಲಿ ಯಾವದಾದರೂ ವೊಂದು ಕರ್ತೃ ವಿಭಕ್ತಿಯಲ್ಲಿ ಬರುವದು. ಆಗ ಇವುಗಳ ಮೇಲೆ ಇರು ಧಾತುವಿನ ಆಖ್ಯಾತ ರೂಪಗಳನ್ನು ಅಧ್ಯಾಹಾರ ಮಾಡುವಲ್ಲಿ ಇದನ್ನು ಧಾತುವಿಗೆ ಪೂರ್ವದಲ್ಲಿ „ಆಗಿ" ಪ್ರತ್ಯಯ ಸಹಿತವಾಗಿ ಸೇರಿಸಬೇಕು.

ಉದಾಹರಣೆ.

		ಆಖ್ಯೆ.	ಆಖ್ಯಾತ.
ಧಾತುವಿಗೆ		ಹುಡುಗರು	ಆಡುತ್ತಾರೆ
ನಾಮವಾಚಕಕ್ಕೆ	ಅವನು	ಇವನ	ತಂದೆಯು (ಆಗಿದ್ದಾನೆ).

*ಅಧ್ಯಾ ಹಾರವೆಂದರೆ ಲೋಪಿಸಿ ಯಿರುವದನ್ನು ಹೇಳಿಕೊಳ್ಳುವಿಕೆ.

	ಆಖ್ಯೆ.	ಆಖ್ಯಾತ.
ಗುಣವಾಚಕಕ್ಕೆ	ಅರಸನು	ಒಳ್ಳೇವನು (ಆಗಿದ್ದಾನೆ)
ಸಂಖ್ಯಾವಾಚಕಕ್ಕೆ	ಮಂತ್ರಿಗಳು	ಮೂವರು (ಆಗಿದ್ದಾರೆ)
ಸಂಖ್ಯಾನಿರ್ದಿಷ್ಟವಾಚಕಕ್ಕೆ	ರಾಮನು	ಆರನೇವನು (ಆಗಿದ್ದಾನೆ)

ಉಳಿದವುಗಳನ್ನೆಲ್ಲಾ ಹೀಗೆಯೇ ಊಹಿಸುವದು. ಆದರೆ ಬರವಣಿಗೆಯನ್ನು ಸಂಕ್ಷೇಪ ಮಾಡುವದಕ್ಕಾಗಿ ಇರು ಧಾತುವಿನ ರೂಪಗಳನ್ನು ಬಿಟ್ಟು ಬರೆಯುವ ಪದ್ಧತಿ ಬಹಳವಾಗಿದೆ.

125 ಆಖ್ಯಾತ ಸಮಾಪಕಕ್ಕೆ ಬರುವ ಪದಗಳು ಯಾವವು?

ಆಖ್ಯೆಗೆ ಬರುವ ಯೆಲ್ಲಾ ವಿಧವಾದ ಪದಗಳೂ ಕರ್ಮವಿಭಕ್ತಿಯಲ್ಲಿ ಆಖ್ಯಾತ ಸಮಾಪಕಕ್ಕೆ ಬರುವವು. ಆದರೆ ಇದನ್ನು ತಿಳುಕೊಳ್ಳುವದಕ್ಕೆ ಯಾರನ್ನು, ಯೆನನ್ನು ಎಂಬ ಪ್ರಶ್ನೆಮಾಡಲಾಗಿ ಇದರ ಉತ್ತರವೇ ಆಖ್ಯಾತ ಸಮಾಪಕವಾಗಿ ಇರುವದು.

ಉದಾಹರಣೆ.

ಆಖ್ಯೆ.	ಆಖ್ಯಾತ ಸಮಾಪಕ	ಆಖ್ಯಾತ.
ಸೇವಕನು	ಪೆಟ್ಟಿಗೆಯನ್ನು	ತೆರೆದನು
ತೋಳವು	ಕುರಿಯನ್ನು	ಕೊಲ್ಲುತ್ತದೆ

126. ಆಖ್ಯೆ ಆಖ್ಯಾತ ಆಖ್ಯಾತಸಮಾಪಕಗಳ ಸಂಗಡ ಸೇರುವ ವಿಶೇಷಣ ಪದಗಳು ಯಾವವು?

ಆಖ್ಯೆ ಆಖ್ಯಾತಸಮಾಪಕಗಳು ನಾಮವಾಚಕವಾಗಿಯಾಗಲಿ ಅಥವಾ ನಾಮವಾಚಕಕ್ಕೆ ಸಮಾನವಾದ

ಇತರ ಪದಗಳಾಗಿ ಯಾಗಲಿ ಇರುವದರಿಂದ ಇವುಗಳ ಸಂಗಡ ಶೇರುವ ಪದಗಳು ಗುಣವಾಚಕ ಅಥವಾ ಗುಣವಾಚಕಕ್ಕೆ ಸಮಾನವಾದ ಇತರಪದಗಳಾಗಿರುವವು. ಆಖ್ಯಾತವು ಕ್ರಿಯೆಯಾದ್ದರಿಂದ ಅದನ್ನು ವಿಶೇಷಿಸುವ ಪದವು ಅವ್ಯಯ ಭೇದಗಳಲ್ಲಿ ಒಂದಾಗಿರುವದು.

ಉ ದಾ ಹ ರ ಣೆ

ಆಖ್ಯೆಯ ವಿಶೇಷಣಕ್ಕೆ	ಧನವಂತನಾದ ಮನುಷ್ಯನು ಕಾರ್ಯವನ್ನು ಸಾಧಿಸುತ್ತಾನೆ.
ಆಖ್ಯಾತ ಸಮಾಪಕ ವಿಶೇಷಣಕ್ಕೆ	ಸಿಂಹವು ದೊಡ್ಡ ಆನೆಯನ್ನು ಸಂಹರಿಸುತ್ತದೆ.
ಆಖ್ಯಾತ ವಿಶೇಷಣಕ್ಕೆ	ದಳಪತಿಯು ಭಟರನ್ನು ಕ್ರೂರವಾಗಿ ದಂಡಿಸಿದನು.

ಇಲ್ಲಿ ತಿಳಿಯಬೇಕಾದ ವಿಶೇಷವೇನಂದರೆ, ಆಖ್ಯೆ ಆಖ್ಯಾತಸಮಾಪಕಗಳ ವಿಶೇಷಣಗಳನ್ನು ತಿಳಿಯುವದಕ್ಕೆ ಪ್ರಶ್ನಾರ್ಥಕ ಗುಣವಾಚಕಗಳಿಂದ ಪ್ರಶ್ನೆ ಮಾಡಲಾಗಿ ಅದರ ಉತ್ತರವೇ ವಿಶೇಷಣ ಪದವಾಗಿರುವದು. ಆಖ್ಯಾತ ವಿಶೇಷಣವನ್ನು ತಿಳುಕೊಳ್ಳುವದಕ್ಕೆ ಹ್ಯಾಗೆ ಎಲ್ಲಿ ಮೊದಲಾದ ಪದಗಳಿಂದ ಪ್ರಶ್ನೆ ಮಾಡಲಾಗಿ ಇದರ ಉತ್ತರವೇ ಆಖ್ಯಾತ ವಿಶೇಷಣ ಪದವಾಗಿರುವದು.

ಇದಲ್ಲದೆ ಆಖ್ಯೆ ಆಖ್ಯಾತ ಆಖ್ಯಾತ ಸಮಾಪಕಗಳಲ್ಲಿ ಯಾವದಾದರೂ ವಿಶೇಷಣ ಪದ ರಹಿತವಾಗಿದ್ದರೆ ಸಾಮಾನ್ಯ ಆಖ್ಯೆ ಸಾಮಾನ್ಯಆಖ್ಯಾತ ಸಾಮಾನ್ಯಆಖ್ಯಾತ ಸಮಾಪಕವೆಂತಲೂ ವಿಶೇಷಣ ಪದಸಹಿತವಾಗಿದ್ದರೆ ವಿಶೇಷಿತ ಆಖ್ಯೆ ವಿಶೇಷಿತ ಆಖ್ಯಾತ ವಿಶೇಷಿತ ಆಖ್ಯಾತ ಸಮಾಪಕವೆಂತಲೂ ತಿಳಿಯಬೇಕು.

127. ವಾಕ್ಯವೆಷ್ಟು ವಿಧವು?

ಸಾಮಾನ್ಯ, ಸಂಮಿಶ್ರಿತ, ಸಂಯೋಜಿತ, ವೆಂದು ಮೂರು ವಿಧವಾಗಿಧೆ. ಹ್ಯಾಗೆಂದರೆ,

ಪುರುಷಾತ್ಮಕ ಕ್ರಿಯಾರೂಪವಾದ ಒಂದೇ ಆಖ್ಯಾತವಿದ್ದು ಸಂಪೂರ್ಣಾಭಿಪ್ರಾಯವನ್ನು ಕೊಡುವದು ಸಾಮಾನ್ಯವಾಕ್ಯ.

ಮುಖ್ಯವಾದ ಆಖ್ಯೆ ಆಖ್ಯಾತಗಳುಳ್ಳ ಪ್ರಧಾನವಾಕ್ಯವೂ ಯಿದ್ದು ಈ ಪ್ರಧಾನ ವಾಕ್ಯವನ್ನೇ ವಿಶೇಷಿಸುವ ಸಂಪೂರ್ಣಾರ್ಥವಿಲ್ಲದ ಅಧೀನ ವಾಕ್ಯಗಳೂ ಉಳ್ಳದ್ದು ಸಂಮಿಶ್ರಿತ ವಾಕ್ಯ.

ಎರಡು ಅಥವಾ ಅನೇಕ ಪ್ರಧಾನ ವಾಕ್ಯಗಳು ಸಂಬಂಧ ಕಾವ್ಯಯಗಳಿಂದ ಒಂದಕ್ಕೊಂದು ಶೇರಿಸಲ್ಪಟ್ಟಿರುವದು ಸಂಯೋಜಿತ ವಾಕ್ಯ. ಆದರೆ ಸಂಯೋಜಿತ ವಾಕ್ಯದಲ್ಲಿ ಬರುವ ಪ್ರಧಾನ ವಾಕ್ಯಗಳು

ಸಂಬಂಧ ಕಾವ್ಯಯಗಳಿಂದ ಶೇರಿಸಲ್ಪಡುವ ಕಾರಣ ಇವುಗಳಿಗೆ ಸಂಬಂಧ ವಾಕ್ಯಗಳೆಂದು ಹೆಸರು.

ಉದಾಹರಣೆ.

ಸಾಮಾನ್ಯ ವಾಕ್ಯಕ್ಕೆ ದೇವರು ಜಗತ್ತನ್ನು ನಿರ್ಮಿಸಿದನು.
ಸಂಮಿಶ್ರಿತ ವಾಕ್ಯಕ್ಕೆ ಅವರು ವಿದ್ಯಾಶಾಲೆಯನ್ನು ಸ್ಥಾಪಿಸಿದಾಗ ಅರಸನು ಸಹಾಯ ಮಾಡಿದನು.
ಸಂಯೋಜಿತ ವಾಕ್ಯಕ್ಕೆ ಅನೇಕರು ಶಾಸ್ತ್ರವನ್ನು ಕಲಿಯುತ್ತಾರೆ ಆದರೆ ಕಲಿತಮೇಲೆ ಅದನ್ನುತಿರಸ್ಕರಿಸುತ್ತಾರೆ

ಇಲ್ಲಿ ಸಂಮಿಶ್ರಿತ ವಾಕ್ಯದೊಳಗೆ ಅವರು ವಿದ್ಯಾಶಾಲೆಯನ್ನು ಸ್ಥಾಪಿಸಿದಾಗ ಎಂಬ ವಾಕ್ಯದಲ್ಲಿ ಆಖ್ಯೆ, ಆಖ್ಯಾತ, ಆಖ್ಯಾತಸಮಾಪಕಗಳಿದ್ದಾಗ್ಯೂ ಅರ್ಥ ಪೂರಣೆಯಾಗದೆ ಅರಸನು ಸಹಾಯ ಮಾಡಿದನು ಎಂಬ ಪ್ರಧಾನವಾಕ್ಯಕ್ಕೆ ಅಧೀನವಾಗಿರುವದ್ದರಿಂದ ಇವುಗಳಲ್ಲಿ ಮೊದಲನೇದು ಅಧೀನ ವಾಕ್ಯವೆಂತಲೂ ಎರಡನೇದು ಪ್ರಧಾನ ವಾಕ್ಯವೆಂತಲೂ ತಿಳಿಯಬೇಕು. ಸಂಯೋಜಿತ ವಾಕ್ಯದಲ್ಲಿ ಎರಡು ವಾಕ್ಯಗಳು ಆದರೆ ಎಂಬ ಸಂಬಂಧ ಕಾವ್ಯಯದಿಂದ ಶೇರಿಸಲ್ಪಟ್ಟಿರುವದರಿಂದ ಇವೆರಡೂ ಸಂಬಂಧ ವಾಕ್ಯಗಳು.

128. ಸಂಬಂಧವಾಕ್ಯಗಳಲ್ಲಿ ಎಷ್ಟು ಭೇದಗಳು?

ಪೂರ್ವವಾಕ್ಯವೂ ಉತ್ತರವಾಕ್ಯವೂ "ಮತ್ತು" ಎಂಬರ್ಥವುಳ್ಳ ಅವ್ಯಯಗಳಿಂದ ಶೇರಿಸಲ್ಪಟ್ಟಿದ್ದರೆ ಅನು

ಕೂಲ್ಯಸಂಬಂಧ ವಾಕ್ಯವೆಂತಲೂ—"ಅಥವಾ" ಎಂಬರ್ಥವುಳ್ಳ ಅವ್ಯಯಗಳಿಂದ ಶೇರಿಸಲ್ಪಟ್ಟಿದ್ದರೆ ಉಭಯಾತ್ಮಕ ಸಂಬಂಧವಾಕ್ಯವೆಂತಲೂ—"ಆದರೆ" ಎಂಬರ್ಥವುಳ್ಳ ಅವ್ಯಯಗಳಿಂದ ಶೇರಿಸಲ್ಪಟ್ಟಿದ್ದರೆ ವ್ಯತಿರೇಕಾರ್ಥಕಸಂಬಂಧವಾಕ್ಯವೆಂತಲೂ "ಆದಕಾರಣ" ಎಂಬರ್ಥವುಳ್ಳ ಅವ್ಯಯಗಳಿಂದ ಶೇರಿಸಲ್ಪಟ್ಟಿದ್ದರೆ ಹೇತ್ವರ್ಥಕ ಸಂಬಂಧವಾಕ್ಯವೆಂತಲೂ ೪ ಭೇದಗಳು.

ಉದಾಹರಣೆ.

ಆನುಕೂಲ್ಯ ಸಂಬಂಧ ವಾಕ್ಯ	ಎತ್ತುಗಳು ಭಂಡಿಗಳನ್ನು ಎಳೆಯುತ್ತವೆ ಮತ್ತು ಭಾರಗಳನ್ನು ಹೊರುತ್ತವೆ.
ಉಭಯಾತ್ಮಕಸಂಬಂಧವಾಕ್ಯ	ಜನರು ನಾಗರೀಕವನ್ನು ಕಲಿಯಬೇಕು ಇಲ್ಲದಿದ್ದರೆ ಬಹಳ ಮೂಢರಾಗಿರುವರು.
ವ್ಯತಿರೇಕಾರ್ಥಕ ಸಂಬಂಧವಾಕ್ಯ.	ಕವಿಗಳು ಮರಣವನ್ನು ಹೊಂದುತ್ತಾರೆ, ಆದರೆ ಅವರ ಕಾವ್ಯಗಳು ಶಾಶ್ವತವಾಗಿರುತ್ತವೆ.
ಹೇತ್ವರ್ಥಕ ಸಂಬಂಧ ವಾಕ್ಯ.	ದುರ್ಯೋಧನನು ದುಷ್ಟನಾಗಿದ್ದನು, ಆದ್ದರಿಂದ ಶಕುನಿಯು ಅವನನ್ನುಮೋಸಗೊಳಿಸಿದನು.

129. ಅಧೀನವಾಕ್ಯವೆಷ್ಟುವಿಧವು

ಆಖ್ಯೆ ಆಖ್ಯಾತ ಸಮಾಪಕಗಳ ಸ್ಥಳದಲ್ಲಿ ಬರುವ ನಾಮಾತ್ಮಕ ವಾಕ್ಯವೆಂತಲೂ—ಆಖ್ಯೆ ಆಖ್ಯಾತ ಸಮಾಪಕಗಳನ್ನು ವಿಶೇಷಿಸುವ ಗುಣಾತ್ಮಕ ವಾಕ್ಯವೆಂತಲೂ—ಆಖ್ಯಾತವನ್ನು ವಿಶೇಷಿಸುವ ಕ್ರಿಯಾವಿಶೇಷಣಾತ್ಮಕ ವಾಕ್ಯವೆಂತಲೂ—೩ ವಿಧವಾಗಿದೆ.

ಉದಾಹರಣೆ.

ನಾಮಾತ್ಮಕ ವಾಕ್ಯ	ಪರಸ್ವಾಪಹಾರವು ಪಾಪವಾಗಿದೆ ಎಂಬುವದು ನಿಜವಾಗಿದೆ.
ಗುಣಾತ್ಮಕವಾಕ್ಯ	ದುಷ್ಟರನ್ನು ಶಿಕ್ಷಿಸಿದಂಥ ಅರಸನು ಸಜ್ಜನರನ್ನು ಪೋಷಿಸಿದನು.
ಕ್ರಿಯಾವಿಶೇಷಣಾತ್ಮಕವಾಕ್ಯ	ಶತ್ರುಸೈನ್ಯವು ಪಟ್ಟಣವನ್ನು ಕೊಳ್ಳೆಮಾಡುತ್ತಿರಲು ಪಟ್ಟಣವಾಸಿಗಳು ಅರಣ್ಯಕ್ಕೆ ಹೋರಟರು.

ಈ ಮೂರು ವಾಕ್ಯಗಳೊಳಗೆ ಮೊದಲನೇ ವಾಕ್ಯದ ಆದಿಯಲ್ಲಿರುವದು ಕರ್ತ್ರರ್ಥ ಬೋಧಕವಾದ ಆಖ್ಯೆಯ ಸ್ಥಾನಾಪನ್ನವಾಗಿರುವದರಿಂದ ನಾಮಾತ್ಮಕ ವಾಕ್ಯವಾಗಿದೆ. ಎರಡನೇ ವಾಕ್ಯದ ಆದಿಯಲ್ಲಿರುವ ವಾಕ್ಯವು ಅರಸನು ಎಂಬ ಆಖ್ಯೆಯನ್ನು ವಿಶೇಷಿಸುವದರಿಂದ ಗುಣಾತ್ಮಕ ವಾಕ್ಯವೆಂದರಿಯುವದು. ಮೂರನೇ ವಾಕ್ಯದ ಆದಿಯಲ್ಲಿರುವದು ಹೋರಟರು ಎಂಬ ಆಖ್ಯಾತವನ್ನು ವಿಶೇಷಿಸುವದರಿಂದ ಕ್ರಿಯಾ ವಿಶೇಷಣಾತ್ಮಕ ವಾಕ್ಯವೆಂದು ತಿಳಿಯುವದು. ಹೀಗೆಯೇ ಉಳಿದವುಗಳನ್ನೆಲ್ಲಾ ಊಹಿಸಿಕೊಳ್ಳತಕ್ಕದ್ದು. ಈ ಪ್ರಕರಣದಲ್ಲಿ ಹೇಳಿದ ರೀತಿಯಾಗಿ ವಾಕ್ಯಗಳನ್ನೂ ಅವುಗಳಲ್ಲಿ ಶೇರಿರುವ ಇತರ ಭಾಗಗಳನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ವಿವರಿಸುವದು ವಾಕ್ಯ ವಿಭಜನೆಯೆಂದೆನ್ನಿಸಿಕೊಳ್ಳುವದು.

ವಾಕ್ಯ ವಿಭಜನೆಯ ಸಂಸ್ಥಾನ್ಯಯ.

ಸಾ ಮಾ ನ್ಯ ವಾ ಕ್ಯ .

ಬುದ್ಧಿವಂತನಾದ ಮಂತ್ರಿಯು ಜನರ ಗುಣವನ್ನು ಜಾಗ್ರತೆಯಾಗಿ ಗ್ರಹಿಸುತ್ತಾನೆ.

ಆಖ್ಯೆ.	ಮಂತ್ರಿಯು	ಬುದ್ಧಿವಂತನಾದ	ಆಖ್ಯೆಯ ವಿಶೇಷಣ
ಆಖ್ಯಾತ ಸಮಾಪಕ.	ಗುಣವನ್ನು	ಜನರ	ಆಖ್ಯಾತ ಸಮಾಪಕದ ವಿಶೇಷಣ
ಆಖ್ಯಾತ.	ಗ್ರಹಿಸುತ್ತಾನೆ.	ಜಾಗ್ರತೆಯಾಗಿ	ಆಖ್ಯಾತ ವಿಶೇಷಣ

ಸಂಮಿಶ್ರಿತವಾಕ್ಯ.

ಸಮಸ್ತ ಸೇನಾನಾಯಕರೂ ತಮ್ಮತಮ್ಮ ಶಕ್ತಿ ಸಾಹಸಗಳನ್ನು ಹೇಳಿಕೊಳ್ಳುತ್ತಿರಲು ಪರರ ಇಂಗಿತವನ್ನು ಚೆನ್ನಾಗಿ ಗ್ರಹಿಸುವಂಥ ರಾಮನು ಶತಯೋಜನ ಪರಿಮಿತವಾದ ಸಮುದ್ರವನ್ನು ದಾಟಿದಂಥ ಹನುಮಂತನನ್ನು ಕಟಾಕ್ಷದಿಂದ ನೋಡಿದನು.

ಇದರಲ್ಲಿ ಪ್ರಧಾನ ವಾಕ್ಯವು. ರಾಮನು ಹನುಮಂತನನ್ನು ನೋಡಿದನು.

ಅಧೀನ ವಾಕ್ಯಗಳು
- ೧ ಗುಣಾತ್ಮಕವಾಕ್ಯ. ಪರರ ಇಂಗಿತವನ್ನು ಚೆನ್ನಾಗಿ ಗ್ರಹಿಸುವಂಥ,
- ೨ ,, ಶತಯೋಜನ ಪರಿಮಿತವಾದ ಸಮುದ್ರವನ್ನು ದಾಟಿದಂಥ,
- ೩ (ಕ್ರಿ)ಯಾವಿಶೇಷಣಾತ್ಮಕವಾಕ್ಯ ಸಮಸ್ತ ಸೇನಾನಾಯಕರೂ ತಮ್ಮತಮ್ಮ ಶಕ್ತಿ ಸಾಹಸಗಳನ್ನು ಹೇಳಿಕೊಳ್ಳುತ್ತಿರಲು,

ಸಂಮಿಶ್ರತವಾಕ್ಯ ವಿಭಜನೆಯ ಸಂಸ್ತ್ರ್ಯಯು.

ಆಖ್ಯೆ ಆಖ್ಯಾತ ಸವಾೂಪಕ ಆಖ್ಯಾತ	ರಾಮನು ಹನುಮಂತನನ್ನು ನೋಡಿದನು	ಪರರ ಇಂಗಿತವನ್ನು ಚನ್ನಾಗಿ ಗ್ರಹಿಸುವಂಥ, ಶತಯೋಜನ ಪರಿಮಿತವಾದ ಸಮುದ್ರವನ್ನು ದಾಟಿದಂಥ, ಸಮಸ್ತ ಸೇನಾನಾಯಕರು ತಮ್ಮತಮ್ಮ ಶಕ್ತಿ ಸಾಹಸಗಳನ್ನು ಹೇಳಿಕೊಳ್ಳುತ್ತಿರಲು, ಕಟೂಕ್ಷದಿಂದ,	ಆಖ್ಯೆಯ ವಿಶೇಷಣ. ಆಖ್ಯಾತ ಸವಾೂಪಕದ ವಿಶೇಷಣ. ಆಖ್ಯಾತ ವಿಶೇಷಣ. (ಕಾಲ) (ರೀತಿ)
ಆಖ್ಯೆ ಆಖ್ಯಾತ ಸವಾೂಪಕ ಆಖ್ಯಾತ	(ರಾಮನು) ಇಂಗಿತವನ್ನ ಗ್ರಹಿಸುವಂಥಾವನು (ಆಗಿದ್ಧಾನೆ)	ಪರರ ಚನ್ನಾಗಿ	ಆಖ್ಯಾತ ಸವಾೂಪಕದ ವಿಶೇಷಣ ಅಖ್ಯಾತ ವಿಶೇಷಣ (ರೀತಿ)
ಆಖ್ಯೆ ಆಖ್ಯಾತ ಸವಾೂಪಕ ಆಖ್ಯಾತ	(ಹನುಮಂತನು) ಸಮುದ್ರವನ್ನು ದಾಟಿದಂಥವನು (ಆಗಿದ್ಧಾನೆ)	ಶತಯೋಜನ ಪರಿಮಿತವಾದ	ಆಖ್ಯಾತ ಸವಾೂಪಕದ ವಿಶೇಷಣ
ಆಖ್ಯೆ ಆಖ್ಯಾತ ಸವಾೂಪಕ ಆಖ್ಯಾತ	ಸೇನಾ ನಾಯಕರು ಶಕ್ತಿಸಾಹಸಗಳನ್ನು ಹೇಳಿಕೊಳ್ಳುತ್ತಿದ್ದರು (ಆಗ)	ಸಮಸ್ತ ತಮ್ಮತಮ್ಮ	ಆಖ್ಯೆಯ ವಿಶೇಷಣ ಆಖ್ಯಾತ ಸವಾೂಪಕದ ವಿಶೇಷಣ

ಸಂಯೋಜಿತ ವಾಕ್ಯ.

ಆತ್ಮಜ್ಞಾನ ಧುರೀಣನಾದ ಗುರುವು ತನ್ನ ಶಿಷ್ಯರಿಗೆ ಜ್ಞಾನೋಪದೇಶವನ್ನು ಮಾಡುತ್ತಾನೆ. ತನ್ನ ಚರಮಕಾಲದ ಮಟ್ಟಿಗೂ ಪ್ರತ್ಯುಪಕಾರವಾದ ಅವರ ಸೇವೆಯನ್ನು ಹೊಂದುತ್ತಾನೆ. ಆದರೆ ಆ ಗುರುವು ಪರಲೋಕಸ್ಥನಾದ ವೇಲೆ ಶಿಷ್ಯರು ಆತನ ಉಪದೇಶವನ್ನು ಜ್ಞಾಪಕದಲ್ಲಿ ಇಡುತ್ತಾರೆ, ಅಥವಾ ತಮ್ಮ ಸ್ವಂತ ಶಿಷ್ಯರಿಗೆ ಅದನ್ನು ಬೋಧಿಸುತ್ತಾರೆ. ಆದ ಕಾರಣ ಸದ್ಗುರುವಿನ ಉಪದೇಶವು ಕ್ಷೀಣಿಸದು.

ಈ ಸಂಯೋಜಿತ ವಾಕ್ಯದಲ್ಲಿರುವ ಸಂಬಂಧ ವಾಕ್ಯಗಳು ಯಾವವೆಂದರೆ.

೧ ಆತ್ಮಜ್ಞಾನ ಧುರೀಣನಾದ ಗುರುವು ತನ್ನ ಶಿಷ್ಯರಿಗೆ ಜ್ಞಾನೋಪದೇಶವನ್ನು ಮಾಡುತ್ತಾನೆ.

೨ ಅನುಕೂಲ	ಮತ್ತು ತನ್ನ ಚರಮಕಾಲದ ಮಟ್ಟಿಗೂ ಪ್ರತ್ಯುಪಕಾರವಾದ ಅವರ ಸೇವೆಯನ್ನು ಹೊಂದುತ್ತಾನೆ.
೩ ವ್ಯತಿರೇಕಾರ್ಥಕ	ಆದರೆ ಆ ಗುರುವು ಪರಲೋಕಸ್ಥನಾದವೇಲೆ ಶಿಷ್ಯರು ಆತನ ಉಪದೇಶವನ್ನು ಜ್ಞಾಪಕದಲ್ಲಿ ಇಡುತ್ತಾರೆ.
೪ ಉಭಯಾತ್ಮಕ	ಅಥವಾ ತಮ್ಮ ಸ್ವಂತ ಶಿಷ್ಯರಿಗೆ ಅದನ್ನು ಬೋಧಿಸುತ್ತಾರೆ.
೫ ಹೇತ್ವರ್ಥಕ	ಆದಕಾರಣ ಸದ್ಗುರುವಿನ ಉಪದೇಶವು ಎಂದಿಗೂ ಕ್ಷೀಣಿಸದು.

ಸಂಯೋಜಿತ ವಾಕ್ಯ ವಿಭಜನೆಯ ಸಂಸ್ತ್ರ್ಯಯ.

ಆಖ್ಯೆ ಆಖ್ಯಾತ ಸಮಾಪಕ ಆಖ್ಯಾತ	ಗುರುವು ಜ್ಞಾನೋಪದೇಶವನ್ನು ಮಾಡುತ್ತಾನೆ	ಆತ್ಮಜ್ಞಾನ ಧುರೀಣನಾದ ತನ್ನ ಶಿಷ್ಯರಿಗೆ	ಆಖ್ಯೆಯ ವಿಶೇಷಣ ಆಖ್ಯಾತ ವಿಶೇಷಣ
ಆಖ್ಯೆ ಆಖ್ಯಾತ ಸಮಾಪಕ ಆಖ್ಯಾತ	(ಗುರುವು) ಸೇವೆಯನ್ನು ಹೊಂದುತ್ತಾನೆ	ಪ್ರತ್ಯುಪಕಾರವಾದ ಅವರ ತನ್ನ ಚರಮಕಾಲದ ವರೆಗೂ	ಆಖ್ಯಾತ ಸಮಾಪಕದ ವಿಶೇಷಣ ಆಖ್ಯಾತ ವಿಶೇಷಣ (ಕಾಲ)
ಆಖ್ಯೆ ಆಖ್ಯಾತ ಸಮಾಪಕ ಆಖ್ಯಾತ	(ಶಿಷ್ಯರು) ಉಪದೇಶವನ್ನು ಇಡುತ್ತಾರೆ	ಆತನ ಆಗುರುವು ಪರಲೋಕಸ್ಥನಾದ ಜ್ಞಾಪಕದಲ್ಲಿ [ಮೇಲೆ	ಆಖ್ಯಾತ ಸಮಾಪಕದ ವಿಶೇಷಣ ಆಖ್ಯಾತ ವಿಶೇಷಣ (ಕಾಲ) ,, (ಸ್ಥಾನ)
ಆಖ್ಯೆ ಆಖ್ಯಾತ ಸಮಾಪಕ ಆಖ್ಯಾತ	(ಶಿಷ್ಯರು) ಅದನ್ನು ಬೋಧಿಸುತ್ತಾರೆ	ತಮ್ಮ ಸ್ವಂತ ಶಿಷ್ಯರಿಗೆ	ಆಖ್ಯಾತ ವಿಶೇಷಣ
ಆಖ್ಯೆ ಆಖ್ಯಾತ	ಉಪದೇಶವು ಕ್ಷೀಣಿಸದು	ಸದ್ಗುರುವಿನ ಎಂದಿಗೂ	ಆಖ್ಯೆಯ ವಿಶೇಷಣ ಆಖ್ಯಾತ ವಿಶೇಷಣ (ಕಾಲ)

2. ಪದ ಪ್ರಯೋಗ ಪ್ರಕರಣ. (*Uses of words*).

130. ಪದ ಪ್ರಯೋಗ ಪ್ರಕರಣದಲ್ಲಿ ಏನು ಹೇಳಲ್ಪಡುತ್ತದೆ?
ಪ್ರತಿವಾಕ್ಯದಲ್ಲಿಯೂ ಬರುವ ಪದಗಳ ಪರಸ್ಪರ ಸಂಬಂಧ ವಿಧಿಗಳೂ ಅವುಗಳ ಕ್ರಮವೂ ಮತ್ತು ಅರ್ಥವಿಚಾರವೂ ಹೇಳಲ್ಪಡುತ್ತವೆ.

131. ಪದಗಳ ಪರಸ್ಪರ ಸಂಬಂಧವಿಧಿಗಳು ಯಾವವು?
ಅವುಗಳು ಯಾವವೆಂದರೆ,—

೧ ಪ್ರತಿ ವಾಕ್ಯದಲ್ಲಿಯೂ ಆಖ್ಯೆಗೆ ಬರುವ ಪುರುಷ, ಲಿಂಗ, ವಚನಗಳೇ ಆಖ್ಯಾತಕ್ಕೂ ಬರುವವು.

ಉದಾಹರಣೆ.

ನಾನು ಹೇಳಿದೆನು	ಹಿರಿಯಳು ಕರೆದಳು
ನಾವು ಹೇಳಿದೆವು	ಹಿರಿಯರು ಕರೆದರು
ಹುಡುಗನು ಓದಿದನು	ಮೃಗವು ಓಡಿತು
ಹುಡುಗರು ಓದಿದರು	ಮೃಗಗಳು ಓಡಿದವು

ಇದಕ್ಕೆ ಪ್ರತಿಷೇಧಗಳು.

ನಾಲ್ಕು ಎತ್ತು ಸತ್ತವು	ದೇವರು ಜಗತ್ತನ್ನು ಸೃಷ್ಟಿಸಿದನು
ಎಂಟು ವರುಷ ಆಯಿತು	ಸಾವಿರ ಕುದುರೆ ಇದೆ
ನೂರು ರೂಪಾಯಿ ಇದೆ	ಹತ್ತು ದಿನ ಆಗುತ್ತದೆ

೨ ಏಕವಚನವಾದ ಅನೇಕ ಆಖ್ಯೆಗಳಿಗೆ ಬಹುವಚನದ ಆಖ್ಯಾತವು ಬರುವದು.

ಉದಾಹರಣೆ.

ಗುರುವೂ ಶಿಷ್ಯನೂ ಬಂದರು
ಕುದುರೆಯೂ ಆನೆಯೂ ಇದ್ದವು

೩ ಭಿನ್ನಲಿಂಗವಾದ ಆಖ್ಯೆಗಳಿಗೆ ಕಡೇಯಲ್ಲಿರುವ ಆಖ್ಯೆಯಲಿಂಗವೇ ಆಖ್ಯಾತಕ್ಕೆ ಬರುವದು.

ಉದಾಹರಣೆ.

ಆನೆಗಳೂ ಭಟರೂ ಕುದುರೆಗಳೂ ರಥಗಳೂ ಸಂದಣಿಸಿದವು.

೪ ಭಿನ್ನಪುರುಷಗಳಾದ ಆಖ್ಯೆಗಳಿಗೆ ಪ್ರಥಮ ಮಧ್ಯಮ ಪುರುಷಗಳು ಶೇರಿಬಂದಾಗ ಮಧ್ಯಮ ಪುರುಷದ ಆಖ್ಯಾತವೂ ಪುರುಷತ್ರಯಗಳೂ ಶೇರಿಯಿದ್ದರೆ ಉತ್ತಮ ಪುರುಷದ ಆಖ್ಯಾತವೂ ಬರುವದು.

ಉದಾಹರಣೆ.

ನೀನೂ ಅವನೂ ಹೇಳಿದಿರಿ. ನಾವೂ ನೀವೂ ಅವನೂ ಬಂದೆವು.

೫ ವಾಕ್ಯದಲ್ಲಿ ಆಖ್ಯಾತ ಸಮಾಪಕವು ಅಥವಾ ಕರ್ಮಪದವು ದ್ವಿತೀಯಾ ವಿಭಕ್ತಿಯಲ್ಲಿ ಬರುವದು.

ಉದಾಹರಣೆ.

ಬಡಿಗೆಯವನು ಮರವನ್ನು ಛೇದಿಸುತ್ತಾನೆ.

ಆದರೆ ಕೆಲವು ಸಮಯಗಳಲ್ಲಿ ವಿಭಕ್ತಿಪ್ರತ್ಯಯವು ಲೋಪಿಸಿ ಪ್ರಕೃತಿ ಬರುವದುಂಟು.

ಉದಾಹರಣೆ.

ಉಪಾಧ್ಯಾಯನು ಶಿಷ್ಯನಿಗೆ ಪುಸ್ತಕ ಕೊಟ್ಟನು.

೬ ವಿಶೇಷಣ ಪದಗಳು ಶುದ್ಧ ಗುಣವಾಚಕಗಳಾಗಿರದೆ ಸ್ವತಂತ್ರ ಬೋಧಕಗಳಾದ ಗುಣವಾಚಕಗಳಾಗಿಯೂ "ಆದ" ಎಂಬ ಪ್ರತ್ಯಯ ಯುಕ್ತಗುಣವಾಚಕಗಳಾಗಿಯೂ ಇದ್ದರೆ ಆಖ್ಯೆ ಆಖ್ಯಾತಸಮಾಪಕಗಳ ಲಿಂಗವಚನಗಳನ್ನು ಅನುಸರಿಸಿ ಬರುವದು.

ಉದಾಹರಣೆ.

ವಿವೇಕಿಗಳಾದ ಮಂತ್ರಿಗಳು ರಾಜ ಕಾರ್ಯವನ್ನು ನಿರಾತಂಕವಾಗಿ ನೆರವೇರಿಸುವರು.

ಯೋಗ್ಯಳಾದ ಸ್ತ್ರೀಯು ಸನ್ಮಾನಿಸಲ್ಪಡುವಳು.

೩ ಆಖ್ಯಾತ ವಿಶೇಷಣವು ನಾಮಪದಗಳಿಗೆ "ಆಗಿ" ಯೆಂಬ ಪ್ರತ್ಯಯವನ್ನು ಕೇರಿಸಿದ ಕ್ರಿಯಾವಿಶೇಷಣವಾಗಿದ್ದರೆ ಆಖ್ಯಾತದ ಲಿಂಗವಚನಗಳನ್ನು ಅನುಸರಿಸಿ ಬರುವದು.

ಉದಾಹರಣೆ.

ಹುಡುಗನು ಸ್ವತಂತ್ರನಾಗಿದ್ದಾನೆ

ಹುಡಿಗಿಯು ಅಯೋಗ್ಯಳಾಗಿ ಇದ್ದಾಳೆ.

——:o:——

ನಾಮ ಪದಗಳ ಪ್ರಯೋಗ. (*Uses of Substantives.*)

132. ನಾಮಪದಗಳ ಪ್ರಯೋಗವು ಹ್ಯಾಗೆ?

ನಾಮಪದಗಳಾದ ನಾಮವಾಚಕ ಸರ್ವನಾಮ ನಿಷ್ಪನ್ನ ಗುಣವಾಚಕ ಸ್ವತಂತ್ರ ಬೋಧಕಗಳಾದ ಗುಣವಾಚಕಗಳ ಕರ್ತೃ ವಿಭಕ್ತಿಯು ಆಖ್ಯೆಯಾಗಿಯೂ, ಕರ್ಮವಿಭಕ್ತಿಯು ಆಖ್ಯಾತ ಸಮಾಪಕವಾಗಿಯೂ, ಕರಣ ಸಂಪ್ರದಾನ ಅಪಾದಾನ ವಿಭಕ್ತಿಗಳು ಆಖ್ಯಾತ ವಿಶೇಷಣಗಳಾಗಿಯೂ, ಸಂಬಂಧ ವಿಭಕ್ತಿಯು ಆಖ್ಯೆ ಆಖ್ಯಾತ ಸಮಾಪಕಗಳ ವಿಶೇಷಣವಾಗಿಯೂ ಅವ್ಯಯಗಳ ಆದಿಯಲ್ಲಿ ಕೇರಿದಾಗ ಕ್ರಿಯಾ ವಿಶೇಷಣಗಳಾಗಿಯೂ, ಅಧಿಕರಣ ವಿಭಕ್ತಿಯು ಆಖ್ಯಾತ

ವಿಶೇಷಣವಾಗಿಯೂ, ಸಂಬೋಧನಾ ವಿಭಕ್ತಿಯು ಎರಡನೇವನನ್ನು ಕರೆಯುವದರಲ್ಲಿಯೂ, ಪ್ರಯೋಗಿಸಲ್ಪಡುವವು.

133. ಪ್ರಥಮಾವಿಭಕ್ತಿ ಪ್ರಯೋಗವು ಹ್ಯಾಗೆ?

ಇದು ಆಖ್ಯೆಯಾಗಿಯೂ, "ಆದ" ಎಂಬ ಪ್ರತ್ಯಯದ ಸಂಗಡ ಶೇರಿ ವಿಶೇಷಣವಾಗಿಯೂ, "ಆಗಿ" ಎಂಬ ಪ್ರತ್ಯಯದಸಂಗಡ ಶೇರಿ ಕ್ರಿಯಾವಿಶೇಷಣವಾಗಿಯೂ, ಇರು ಧಾತುವಿನ ರೂಪಗಳನ್ನು ಅಧ್ಯಾಹಾರ ಮಾಡ ಬಹುದಾದ ಆಖ್ಯಾತವಾಗಿಯೂ, ಪ್ರಯೋಗಿಸಲ್ಪಡುವದು.

ಉದಾಹರಣೆ.

ಆಖ್ಯೆಗೆ	ರಾಕ್ಷಸರು ಅಪಜಯವನ್ನು ಹೊಂದಿದರು.
ವಿಶೇಷಣಕ್ಕೆ	ರಾಕ್ಷಸನಾದ ರಾವಣನು ಸೀತಾಪಹಾರವನ್ನು ಮಾಡಿದನು.
ಕ್ರಿಯಾ ವಿಶೇಷಣಕ್ಕೆ	ಜಯವಿಜಯರು ರಾಕ್ಷಸರಾಗಿ ಹುಟ್ಟಿದರು.
ಆಖ್ಯಾತಕ್ಕೆ	ಶಿಶುಪಾಲ ದಂತವಕ್ತ್ರರು ದುಷ್ಟರು (ಆಗಿದ್ದರು).

134. ದ್ವಿತೀಯಾ ವಿಭಕ್ತಿ ಪ್ರಯೋಗವು ಹ್ಯಾಗೆ?

ಇದು ಆಖ್ಯಾತ ಸಮಾಪಕವಾಗಿ ಪ್ರಯೋಗಿಸಲ್ಪಡುವದು. ಆದರೆ ೧೩೧ನೇ ಉತ್ತರದಲ್ಲಿ ಹೇಳಿದ ಹಾಗೆ ಕೆಲವು ಸಮಯಗಳಲ್ಲಿ ಪ್ರತ್ಯಯವಿಲ್ಲದೆ ಪ್ರಕೃತಿಯನ್ನು ಪ್ರಯೋಗಿಸುವದುಂಟು.

ಉದಾಹರಣೆ.

ಆಖ್ಯಾತ ಸಮಾಪಕಕ್ಕೆ	ಭೀಮನು ಬಕಾಸುರನನ್ನು ವಧಿಸಿದನು.
ಪ್ರತ್ಯಯಲೋಪಕ್ಕೆ	ಅರಸನು ಹಣ್ಣು ತಿಂದನು.

135. ತೃತೀಯಾ ವಿಭಕ್ತೀ ಪ್ರಯೋಗವು ಹ್ಯಾಗೆ?

ಇದು ಕರ್ಮಣ್ಯರ್ಥಕ ಕ್ರಿಯಾಪದಗಳಲ್ಲಿ ಆಖ್ಯೆಯ ಅರ್ಥವಾಗಿಯೂ, ಆಖ್ಯಾತವನ್ನು ವಿಶೇಷಿಸುವ ಕಾಲ ರೀತಿ ಕಾರಣ ಸ್ಥಾನ ಕರಣ ವಾಚಕಗಳಾದ ಆಖ್ಯಾತ ಸಮಾಪಕ ವಿಶೇಷಣಗಳಾಗಿಯೂ, ಪ್ರಯೋಗಿಸಲ್ಪಡುವದು.

ಉದಾಹರಣೆ.

ಆಖ್ಯೆಯ ಅರ್ಥಕ್ಕೆ ಇಂದ್ರಜಿತ್ತು ಲಕ್ಷ್ಮಣನಿಂದ ಸಂಹರಿಸಲ್ಪಟ್ಟನು.
ಕಾಲವಾಚಕಕ್ಕೆ ಹುಡುಗರು ಹತ್ತು ವರುಷದಿಂದ ಓದುತ್ತಾರೆ.
ಕಾರಣವಾಚಕಕ್ಕೆ ಸುಳ್ಳಾಡಿದ್ದರಿಂದ ಅವಮಾನ ಪಟ್ಟನು.
ಸ್ಥಾನವಾಚಕಕ್ಕೆ ಉತ್ತರದೇಶದಿಂದ ವಿದ್ವಾಂಸರು ಬಂದಿದ್ದಾರೆ.
ಕರಣವಾಚಕಕ್ಕೆ ಅರ್ಜುನನು ಗಾಂಡೀವದಿಂದ ಶತ್ರುಗಳನ್ನು ಜೈಸಿದನು.

136. ಚತುರ್ಥೀವಿಭಕ್ತಿ ಪ್ರಯೋಗವು ಹ್ಯಾಗೆ?

ಇದು ಆಖ್ಯಾತದ ಕೃತ್ಯವು ಹೊಂದುವಂಥ ಸ್ಥಳವನ್ನು ಹೇಳುವ ಸಂಪ್ರದಾನಾರ್ಥಕವಾಗಿಯೂ, ಚಲನಾರ್ಥಕ ನಿಮಿತ್ತಾರ್ಥಕ ಅಧಿಷ್ಠಾನಾರ್ಥಕ ಕ್ರಿಯಾವಿಶೇಷಣಗಳಾಗಿಯೂ ದೂರಾರ್ಥಕವಾಗಿಯೂ ಬಂಧುವಾಚಕವಾಗಿಯೂ ಉಪಮಾನಾರ್ಥಕವಾಗಿಯೂ ಪ್ರತಿನಿಧಿಯವಾಗಿಯೂ, ಪ್ರಯೋಗಿಸಲ್ಪಡುವದು.

ಉದಾಹರಣೆ.

ಸಂಪ್ರದಾನಾರ್ಥಕಕ್ಕೆ ಅರಸನು ತನ್ನ ಮಿತ್ರನಿಗೆ ಅಭಯವನ್ನು ಕೊಟ್ಟನು.

ಚಲನಾರ್ಥಕಕ್ಕೆ	ಸಂಸ್ಕೃತ ವಿದ್ಯಾರ್ಥಿಗಳು ಕಾಶೀಪಟ್ಟಣಕ್ಕೆ ಹೋಗುವರು.
ನಿಮಿತ್ತಾರ್ಥಕಕ್ಕೆ	ಹತ್ತು ವರುಷದಿಂದ ನಿನಗೆ ಶ್ರಮೆಪಡುತ್ತಾನೆ.
ಬಂಧುವಾಚಕಕ್ಕೆ	ವಸುದೇವನು ಕೃಷ್ಣನಿಗೆ ತಂದೆ ಆಗಿದ್ದನು.
ಉಪಮಾನಾರ್ಥಕಕ್ಕೆ	ಈ ತೋಟವು ಆ ತೋಟಕ್ಕೆ ದೊಡ್ಡದು.
ಪ್ರತಿನಿಧಿಗೆ	ಮಂತ್ರಿಯು ಅರಸನಿಗೆ ಬದಲಾಗಿದ್ದಾನೆ.

137. ಪಂಚಮೀ ಷಷ್ಠೀವಿಭಕ್ತಿಗಳ ಪ್ರಯೋಗವು ಹ್ಯಾಗೆ?

ಪಂಚಮೀವಿಭಕ್ತಿಯು ತೃತೀಯಾ ವಿಭಕ್ತಿಯು ಹಾಗೆಯೇ ಮತ್ತು ಇದನ್ನು ಬಹಳವಾಗಿ ಪ್ರಯೋಗಿಸುವ ರೂಢಿಯಿಲ್ಲ. ಆದರೆ ಷಷ್ಠೀವಿಭಕ್ತಿ ಪ್ರಯೋಗ ಹ್ಯಾಗಂದರೆ, ಇದು ಆಖ್ಯೆ ಆಖ್ಯಾತಸವಾಪಕಗಳ ವಿಶೇಷಣವಾಗಿಯೂ ಅವ್ಯಯಗಳ ಆದಿಯಲ್ಲಿ ಶೇರಿ ತದನುಸಾರವಾದ ಆಖ್ಯಾತ ವಿಶೇಷಣವಾಗಿಯೂ, ಪ್ರಯೋಗಿಸಲ್ಪಡುವದು.

ಉದಾಹರಣೆ.

ಆಖ್ಯೆಯ ವಿಶೇಷಣಕ್ಕೆ	ಮನೆಯ ಬಾಗಲು ಬಹಳ ಯೆತ್ತರವಾಗಿದೆ.
ಆಖ್ಯಾತಸವಾಪಕವಿಶೇಷಣಕ್ಕೆ	ವೈದ್ಯನು ಪ್ರಜೆಗಳ ರೋಗವನ್ನು ನಿವಾರಿಸುತ್ತಾನೆ.
ಆಖ್ಯಾತ ವಿಶೇಷಣಕ್ಕೆ	ಶೂರನು ಸಿಂಹದ ಹಾಗೆ ಘರ್ಜಿಸುತ್ತಾನೆ.

138. ಸಪ್ತಮೀ ವಿಭಕ್ತೀ ಪ್ರಯೋಗವು ಹ್ಯಾಗೆ?

ಇದು ಸ್ಥಾನ ಕಾಲ ಕರಣ ವಾಚಕಗಳಾದ ಆಖ್ಯಾತ ವಿಶೇಷಣಗಳಾಗಿ ಪ್ರಯೋಗಿಸಲ್ಪಡುವದು, ಮತ್ತು ತೃತೀಯಾವಿಭಕ್ತಿಗೆ ಬದಲಾಗಿ ಇದನ್ನು ಪ್ರಯೋಗಿಸುವದುಂಟು.

ಉದಾಹರಣೆ.

ಸ್ಥಾನವಾಚಕಕ್ಕೆ   ಗಂಡಕೀ ನದಿಯಲ್ಲಿ ಕಲ್ಲಿಕಲ್ಲುಗಳು ದೊರೆಯುತ್ತವೆ.
ಕಾಲವಾಚಕಕ್ಕೆ   ಜೀವ ಜಂತುಗಳು ರಾತ್ರಿಯಲ್ಲಿ ಸಂಚರಿಸುತ್ತವೆ.
ಕಾರಣವಾಚಕಕ್ಕೆ   ಕತ್ತಿಯಲ್ಲಿ ಹೊಡೆದನು.

——:0:——

ಕ್ರಿಯಾಪದಗಳ ಪ್ರಯೋಗ. (*Uses of Verbs.*)

139. ಕ್ರಿಯಾಪದಗಳ ಪ್ರಯೋಗವು ಹ್ಯಾಗೆ?

ಕ್ರಿಯಾಪದಗಳಲ್ಲಿ ಪುರುಷಾತ್ಮಕ ಕ್ರಿಯಾರೂಪಗಳು ಆಖ್ಯಾತಗಳಾಗಿಯೂ, ನಾಮಾತ್ಮಕ ಕ್ರಿಯಾರೂಪಗಳು ಆಖ್ಯೆಗಳಾಗಿಯೂ, ಅಥವಾ ವಿಶೇಷಣಗಳಾಗಿಯೂ, ಅವ್ಯಯಾತ್ಮಕ ಕ್ರಿಯಾರೂಪಗಳು ವಿಶೇಷಣಗಳಾಗಿಯೂ, ಕೆಲವು ಸಮಯಗಳಲ್ಲಿ ಪ್ರಧಾನವಾಕ್ಯ ಅಧೀನವಾಕ್ಯಗಳನ್ನು ಕೂಡಿಸುವ ಸಂಬಂಧ ಕಾವ್ಯಯಗಳಾಗಿಯೂ, ಪ್ರಯೋಗಿಸಲ್ಪಡುವವು.

140. ವರ್ತಮಾನ ರೂಪಗಳ ಪ್ರಯೋಗವು ಹ್ಯಾಗೆ?

ಇವುಗಳು ಈಗ ನಡಿಯುತ್ತಿರುವ ಕ್ರಿಯೆಯನ್ನು ಹೇಳುವದಕ್ಕೂ, ಕೆಲವು ವೇಳೆಗಳಲ್ಲಿ ಮುಂದೆ ನಡಿಯುವ ನಿಶ್ಚಯವಾದ ಕ್ರಿಯೆಯನ್ನು ಹೇಳುವದಕ್ಕೂ ಪ್ರಯೋಗಿಸಲ್ಪಡುವವು.

ಉದಾಹರಣೆ.

ನಾವು ಬರುತ್ತೇವೆ.   ನಾಳೇ ಹೋಗುತ್ತೇವೆ.

141. ಭೂತರೂಪಗಳ ಪ್ರಯೋಗವು ಹ್ಯಾಗೆ?

ಮುಂಚೆ ನಡೆದಿರುವ ಕ್ರಿಯೆಯನ್ನು ಹೇಳುವದಕ್ಕೂ ಅತಿಜಾಗ್ರತೆಯನ್ನಾಗಲಿ ಅಥವಾ ಬಹು ನಿಶ್ಚಯವನ್ನಾಗಲಿ ಹೇಳುವದಕ್ಕೂ ಪ್ರಯೋಗಿಸಲ್ಪಡುವವು.

ಉದಾಹರಣೆ.

ಮುಂಚೆ ನಡೆದ ಕ್ರಿಯೆಗೆ	ನಾವು ನಿನ್ನೆ ಬಂದೆವು.
ಅತಿತ್ವರೆಗೆ	ಇಗೋ ಅವನು ಬಂದನು.
ಅತಿ ನಿಶ್ಚಯಕ್ಕೆ	ನೀನು ಓದಿದರೆ ಜಯಿಸಿದಿ.

142. ಭವಿಷ್ಯದ್ರೂಪ ಸಂಶಯರೂಪಗಳ ಪ್ರಯೋಗವು ಹ್ಯಾಗೆ?

ಮುಂದೆ ನಡೆಯುವ ಕ್ರಿಯೆಯನ್ನೂ ಕಥೆಯನ್ನೂ ಹೇಳುವದಕ್ಕೆ ಭವಿಷ್ಯದ್ರೂಪಗಳೂ ಮುಂದೆ ನಡೆಯುವ ಕ್ರಿಯೆಯು ಸಂದೇಹವಾಗಿದ್ದರೆ ಸಂಶಯರೂಪಗಳೂ ಪ್ರಯೋಗಿಸಲ್ಪಡುವವು.

ಉದಾಹರಣೆ.

ಭವಿಷ್ಯದ್ರೂಪಕ್ಕೆ	ನಾವು ಹೋಗುವೆವು.	ಅಮರಾವತಿ ಪಟ್ಟಣದಲ್ಲಿ ಒಬ್ಬ ಅರಸನಿರುವನು.
ಸಂಶಯರೂಪಕ್ಕೆ	ನೀನು ಮಾಡೀಯೆ.	ಅವನು ಮಾಡ್ಯಾನು.

143. ವಿಧಿರೂಪಗಳ ಪ್ರಯೋಗವು ಹ್ಯಾಗೆ?

ಇವುಗಳಲ್ಲಿ ಉತ್ತಮ ಪುರುಷ ವಿಧಿರೂಪಗಳು ತನ್ನ ಮನಸ್ಸಿನ ಸಂಕಲ್ಪವನ್ನು ಹೇಳುವದಕ್ಕೂ ಅಥವಾ ಪ್ರಯತ್ನಿಸುವದಕ್ಕೂ ಮಧ್ಯಮ ಪುರುಷದ ವಿಧಿ ರೂಪಗಳು ಮತ್ತೊಬ್ಬನನ್ನು ಅಜ್ಞಾಪಿಸುವದಕ್ಕೂ ಪ್ರಥಮ ಪುರುಷ ವಿಧಿ ರೂಪಗಳು ಅಜ್ಞಾರ್ಥಕದಲ್ಲಿಯೂ ಆಶೀರರ್ಥಕದಲ್ಲಿಯೂ ಕೆಲವು ವೇಳೆ ಪ್ರಶ್ನಾರ್ಥಕ ಉತ್ತಮ ಪುರುಷಕ್ಕೂ ಪ್ರಯೋಗಿಸಲ್ಪಡುವವು.

ಉದಾಹರಣೆ.

ಉತ್ತಮ ಪುರುಷಕ್ಕೆ	ನಾವು ಕಾರ್ಯವನ್ನು	ಸಾಧಿಸೋಣ
ಮಧ್ಯಮ ಪುರುಷಕ್ಕೆ	ನೀನು ಹೋಗು	ನೀವು ಹೇಳಿರಿ.
ಪ್ರಥಮ ಪುರುಷಕ್ಕೆ	ಅವನು ಬದುಕಲಿ	ಹುಡುಗರು ಬರಲಿ
ಪ್ರಶ್ನಾರ್ಥಕಕ್ಕೆ	ನಾನೇನು ಮಾಡಲಿ?	

144. ನಿಷೇಧ ರೂಪಗಳ ಪ್ರಯೋಗವು ಹ್ಯಾಗೆ?

ಇವು ಕ್ರಿಯೆಯನ್ನು ಮಾಡುವದಿಲ್ಲವೆಂಬದರಲ್ಲಿ ಮೂರು ಕಾಲಗಳಲ್ಲಿಯೂ ಏಕರೀತಿಯಾಗಿ ಪ್ರಯೋಗಿಸಲ್ಪಡುವವು.

ಉದಾಹರಣೆ.

ಅವರು ಎಂದಿಗೂ ಇದನ್ನು ನಂಬರು
ಹುಡುಗರು ಬಾಲ್ಯದಲ್ಲಿ ವಿದ್ಯೆಯನ್ನು ಅಪೇಕ್ಷಿಸರು.
ಸಜ್ಜನರು ಅನೃತವನ್ನು ಹೇಳರು.

145. ನಾಮಾತ್ಮಕ ಕ್ರಿಯಾ ರೂಪಗಳಾದ ಕೃದ್ವಾಚಿಗಳ ಪ್ರಯೋಗವು ಹ್ಯಾಗೆ?

ಇವು ಮುಖ್ಯವಾಗಿ ಆಖ್ಯೆ ಆಖ್ಯಾತ ಸಮಾಪಕಗಳ ವಿಶೇಷಣಗಳಾಗಿ ಪ್ರಯೋಗಿಸಲ್ಪಡುವವು. ಆದರೆ ವರ್ತಮಾನ ಭವಿಷ್ಯತ್ಕೃದ್ವಾಚಿಗಳು ಏಕರೂಪವಾಗಿಯೇ ಇರುವದರಿಂದ ಸಂದರ್ಭಾನುಸಾರವಾಗಿ ಯೋಚಿಸಿಕೊಳ್ಳುವದು.

ಉದಾಹರಣೆ.

ವರ್ತಮಾನಕೃದ್ವಾಚಿಗೆ	ಹೇಳುವ ಮಾತು	ಓಡುವ ಹುಲಿ
ಭೂತಕೃದ್ವಾಚಿಗೆ	ಹೇಳಿದ ಕೆಲಸ	ಸತ್ತ ಹಾವು
ನಿಷೇಧಕೃದ್ವಾಚಿಗೆ	ಹೇಳದ ಮಾತು	ಕಲಿಯದ ಶಾಸ್ತ್ರ

ಇದಲ್ಲದೆ ಈ ಕೃದ್ವಾಚಿಗಳಿಗೆ "ಅಂಥ" ಎಂಬ ಪ್ರತ್ಯಯವು ಶೇರಿದಾಗ ಪ್ರಧಾನ ವಾಕ್ಯವನ್ನು ವಿಶೇಷಿಸುವ ಗುಣಾತ್ಮಕ ಅಧೀನ ವಾಕ್ಯವಾಗಿಯೂ "ಆಗ, ಆಗ್ಯ್ಯ, ರೆ, ರೂ, ಅಲ್ಲಿ, ಅಂತೆ, ಹಾಗೆ, ಮೇಲೆ, ತರುವಾಯ, ಬಳಿಕ, ಕೂಡ್ಲೆ, ಒಡನೆ" ಯೆಂಬ ಪ್ರತ್ಯಯಗಳು ಶೇರಿದಾಗ ಆಖ್ಯಾತವನ್ನು ವಿಶೇಷಿಸುವ ಕ್ರಿಯಾ ವಿಶೇಷಣಾತ್ಮಕ ಅಧೀನವಾಕ್ಯಗಳಾಗಿಯೂ ಪ್ರಯೋಗಿಸಲ್ಪಡುವವು.

ಉ ದಾ ಹ ರ ಣೆ.

ಗುಣಾತ್ಮಕ ವಾಕ್ಯಕ್ಕೆ ನ್ಯಾಯಶಾಸ್ತ್ರವನ್ನು ಅನುಸರಿಸುವಂಥ ಮನುಷ್ಯನು ಅಕೃತ್ಯಗಳನ್ನು ಮಾಡನು.

ಕ್ರಿಯಾ ವಿಶೇಷಣಾತ್ಮಕವಾಕ್ಯಗಳಿಗೆ ಮನುಷ್ಯರು ಸುಖಸ್ಥಿತಿಯನ್ನು ಅನುಭವಿಸುವಾಗ ದೇವರನ್ನು ನೆನೆಯರು.

146. ನಾಮಾತ್ಮಕ ಕ್ರಿಯಾ ರೂಪಗಳಾದ ಕೃನ್ನಾಮಗಳ ಪ್ರಯೋಗವು ಹ್ಯಾಗೆ?

ಇವು ಯೆಲ್ಲಾ ವಿಷಯಗಳಲ್ಲಿಯೂ ನಾಮಪದಗಳಿಗೆ ಸಮಾನಪದಗಳಾದ್ದರಿಂದ ನಾಮವಾಚಕಗಳ ಹಾಗೆಯೇ ಪ್ರಯೋಗಿಸಲ್ಪಡುವವು. ಇವುಗಳ ಉದಾಹರಣೆಗಳೂ ವಿಭಕ್ತಿ ಪ್ರಯೋಗಗಳೂ ಯೆಲ್ಲಾ ನಾಮವಾಚಕಗಳ ಹಾಗೆಯೇ.

147. ಕ್ರಿಯಾನಾಮಗಳ ಪ್ರಯೋಗವು ಹ್ಯಾಗೆ?

ಇವು ನಾಮವಾಚಕಗಳ ಹಾಗೆ ಆಖ್ಯೆಯಾಗಿಯೂ ಆಖ್ಯಾತ ಸಮಾಪಕಗಳಾಗಿಯೂ "ಅಲ್ಲ, ಇಲ್ಲ"

ಎಂಬ ರೂಪ ವಿಹೀನ ಕ್ರಿಯೆಗಳೊಡನೆ ಆಖ್ಯಾತಗಳಾಗಿಯೂ ಪ್ರಯೋಗಿಸಲ್ಪಡುವವು. ಇವುಗಳ ಉದಾಹರಣೆಗಳು ನಾಮವಾಚಕಗಳ ಉದಾಹರಣೆಗಳ ಹಾಗೆಯೇ ಊಹಿಸಿ ಕೊಳ್ಳುವದು.

148. ಅವ್ಯಯಾತ್ಮಕ ಕ್ರಿಯಾರೂಪಗಳಾದ ಭಾವರೂಪಗಳ ಪ್ರಯೋಗವು ಹ್ಯಾಗೆ?

ಈ ವಿಷಯದಲ್ಲಿ ತಿಳಿಯಬೇಕಾದ ವಿಧಿಗಳು ಯಾವವೆಂದರೆ,—

೧. ಇವುಗಳ ಮೊದಲನೇ ಎರಡು ರೂಪಗಳ ಮೇಲೆ ರೂಪ ವಿಹೀನ ಕ್ರಿಯಾಪದಗಳನ್ನು ಕೇರಿಸಿದರೆ ಆಖ್ಯಾತಗಳಾಗಿ ಪ್ರಯೋಗಿಸಲ್ಪಡುವವು.

ಉದಾಹರಣೆ.

ಮಾಡ ಬಹುದು.	ಮಾಡಬಾರದು.
ಹೇಳಲಾರೆನು.	ಹೋಗಬೇಕು.

೨. ಇವುಗಳ ಎರಡನೇ ರೂಪವು ಕ್ರಿಯಾ ವಿಶೇಷಣಾತ್ಮಕ ಅಧೀನ ವಾಕ್ಯದಲ್ಲಿ ಪ್ರಯೋಗಿಸಲ್ಪಡುವದು. ಆದರೆ ಕೆಲವು ಸಮಯಗಳಲ್ಲಿ ಎರಡನೇ ರೂಪಕ್ಕೆ "ಆಗಿ" ಯೆಂಬ ಪ್ರತ್ಯಯವನ್ನು ಕೇರಿಸುವದುಂಟು.

ಉದಾಹರಣೆ.

ವಸಂತ ಕಾಲವು ಬರಲು ಕೋಗಿಲೆಗಳು ಕೂಗಿದವು.

ಅರಸನು ಯುಕ್ತಿಯನ್ನು ಹೇಳಲಾಗಿ ಮಂತ್ರಿಯು ಅಂಗೀಕರಿಸಿದನು.

೩. ಇವುಗಳ ಮೂರನೇ ರೂಪವು ನಿಮಿತ್ತಾರ್ಥಕ ಕ್ರಿಯಾ ವಿಶೇಷಣವಾಗಿಯೂ ಅಥವಾ ನಿಮಿತ್ತಾರ್ಥಕ

ಕ್ರಿಯಾ ವಿಶೇಷಣಾತ್ಮಕ ಅಧೀನವಾಕ್ಯವಾಗಿಯೂ ಪ್ರಯೋಗಿಸಲ್ಪಡುವವು.

ಉದಾಹರಣೆ.

ದನಗಳು ನೀರು ಕುಡಿಯಲಿಕ್ಕೆ ಹೋದವು.
ಪ್ರಭುಗಳು ಶತ್ರುದೇಶವನ್ನು ಜಯಿಸಲಿಕ್ಕೆ ಸೈನ್ಯವನ್ನು ಕೂಡಿಸುವರು.

149. ಅವ್ಯಯಾತ್ಮಕ ಕ್ರಿಯಾ ರೂಪಗಳಾದ ನ್ಯೂನ ರೂಪಗಳ ಪ್ರಯೋಗವು ಹ್ಯಾಗೆ?

ಇವುಗಳ ಪ್ರಯೋಗ ವಿಧಿಗಳು ಯಾವವೆಂದರೆ,

೧. ಶಬ್ದ ಲಕ್ಷಣದಲ್ಲಿ ಹೇಳಿದ ನಾಲ್ಕು ವಿಧವಾದ ನ್ಯೂನ ರೂಪಗಳು ಆಖ್ಯೆಯನ್ನು ವಿಶೇಷಿಸುವ ನ್ಯೂನ ವಿಶೇಷಣಗಳಾಗಿ ಪ್ರಯೋಗಿಸಲ್ಪಡುವವು. ಆದರೆ ಇವುಗಳು ಏಕ ಪದವಾಗಿಯೂ ಅಥವಾ ಅನೇಕ ಆಖ್ಯಾತ ಸಮೂಪಕಗಳು ಸೇರಿ ವಾಕ್ಯಗಳಾಗಿಯೂ ಇದ್ದಾಗ್ಯೂ ಸಂಪೂರ್ಣಾಭಿಪ್ರಾಯವನ್ನು ಕೊಡುವದಿಲ್ಲವಾದ್ದರಿಂದ ಆಖ್ಯೆಯ ವಿಶೇಷಣಗಳಂತಲೇ ತಿಳಿಯಬೇಕು. ಇದಲ್ಲದೆ ಕನ್ನಡದಲ್ಲಿ ಇವುಗಳ ಪ್ರಯೋಗವು ಬಹು ವಿಸ್ತಾರವಾಗಿದೆ.

ವರ್ತಮಾನ ನ್ಯೂನಕ್ಕೆ ಉದಾಹರಣೆ.

ಮಹಾ ಬಲಶಾಲಿಯಾದ ಹಿಡಿಂಬನು ಹಲ್ಲುಗಳನ್ನು ಕಡಿಯುತ್ತಾ ಬೆಡುಗಳನ್ನು ಕಚ್ಚುತ್ತಾ ಕಣ್ಣುಗಳಲ್ಲಿ ಕೆಂಡವನ್ನು ಸುರಿಯುತ್ತಾ ಭುಜಯುಗ್ಮವನ್ನು ಅಪ್ಪಳಿಸುತ್ತಾ ಕಾಲುಗಳಿಂದ ನೆಲವನ್ನು ಬಡಿಯುತ್ತಾ ಮೇಘದಂತೆ ಘರ್ಜಿಸುತ್ತಾ ಕೋರೆ ದಾಡೆಗಳನ್ನು ಮಸೆದುಕೊಳ್ಳುತ್ತಾ ಅತಿ ಕೋಪಿಷ್ಠನಾಗಿ ಬಂ

ದ ಭೀಮನನ್ನು ನೋಡಿ ಘರ್ಜಿಸಿ ಆತನ ಹತ್ತರ ನಲುವಿನಿಂದ ನಿಂತಿರುವ ತನ್ನ ತಂಗಿಯನ್ನ ದೃಷ್ಟಿಸಿ ನೋಡುತ್ತಾ ಆಕೆಯ ಮೇಲೆ ಕೋಪ ಗೊಂಡನು

ಈ ವಾಕ್ಯದಲ್ಲಿ ಆಖ್ಯೇಯವು ಹಿಡಿಂಬನು, ಆಖ್ಯಾತವು ಕೋಪ ಗೊಂಡನು. ಉಳಿದ ಎಲ್ಲಾ ನ್ಯೂನಗಳೂ ಆಖ್ಯೇಯ ವಿಶೇಷಣಗಳೆಂದರಿಯುವದು.

ಭೂತ ನ್ಯೂನಕ್ಕೆ ಉದಾಹರಣೆ.

ಬಳಿಕ ಪಾಂಡವರು ಶಾಲಿಹೋತ್ರನಿಂದ ಪೂಜಿಸಲ್ಪಟ್ಟು ಜಟೆಗಳನ್ನು ಧರಿಸಿ ನಾರಶೀರೆಗಳನ್ನುಟ್ಟು ಕೃಷ್ಣಾಜಿನವನ್ನು ಹೊದ್ದುಕೊಂಡು ವೇದ ವೇದಾಂಗಗಳನ್ನು ಓದುತ್ತಾ ಉಪನಿಷತ್ಪಾರಾಯಣವನ್ನು ಮಾಡುತ್ತಾ ನೀತಿಶಾಸ್ತ್ರ ಧರ್ಮಶಾಸ್ತ್ರಗಳನ್ನು ಪಠಿಸುತ್ತಾ ಶಾಲಿಹೋತ್ರನ ಅಪ್ಪಣೆಯನ್ನ ತೆಗದುಕೊಂಡು ವನದಿಂದ ಹೊರಟು ಮಾರ್ಗದಲ್ಲಿ ದುಷ್ಟ ಮೃಗಗಳನ್ನು ಕೊಲ್ಲುತ್ತಾ ಅನೇಕ ಅರಣ್ಯ ನದಿ ಸರೋವರಗಳನ್ನು ದಾಟುತ್ತಾ ಮಧ್ಯದಲ್ಲ ವೇದವ್ಯಾಸನನ್ನು ಕಂಡು ನಮಸ್ಕರಿಸಿದರು.

ಈ ವಾಕ್ಯದಲ್ಲಿ ವರ್ತಮಾನ ಭೂತ ನ್ಯೂನಗಳೆಲ್ಲಾ ಪಾಂಡವರು ಎಂಬ ಆಖ್ಯೇಯ ವಿಶೇಷಣಗಳಾಗಿವೆ.

೨. ಈ ನ್ಯೂನ ರೂಪಗಳಿಗೆ ಇರು ಧಾತುವಿನ ಭಾವ ರೂಪಗಳನ್ನು ಶೇರಿಸಿ ಕಾಲ ಸೂಚಕ ನಿಮಿತ್ತ ಸೂಚಕಗಳಾದ ಕ್ರಿಯಾ ವಿಶೇಷಣಾತ್ಮಕ ಅಧೀನ ವಾಕ್ಯಗಳಾಗಿ ಪ್ರಯೋಗಿಸುವದುಂಟು.

ಉದಾಹರಣೆ.

ಭೀಮನು ಬಕಾಸುರನನ್ನು ಸಡ್ಡೆ ಮಾಡದೆ ಅನ್ನವನ್ನೆಲ್ಲಾ ಭಕ್ಷಿಸುತ್ತಿರಲು ಅವನು ಭೀಮನನ್ನು ಸಂಹರಿಸಲಿಕ್ಕೆ ಯತ್ನಿಸಿದನು.

150. ವಿಕೃತಿ ಕ್ರಿಯಾ ಪದಗಳ ಪ್ರಯೋಗವು ಹ್ಯಾಗೆ?

ಇವುಗಳ ಆಖ್ಯಾತ ರೂಪಗಳು ಆಖ್ಯಾತಗಳ ಹಾಗೆಯೂ ಕೃದ್ವಾಚಿ ಕೃನ್ನಾಮ ಕ್ರಿಯಾನಾಮ ನ್ಯೂನ ಭಾವ ರೂಪಗಳೆಲ್ಲಾ ಮೇಲೆ ಹೇಳಿದ ಆಯಾ ವಿಧಿಗಳ ಹಾಗೆಯೂ ಪ್ರಯೋಗಿಸಲ್ಪಡುವವು. ಆದರೆ ಇವುಗಳಲ್ಲಿ "ಎಂದು, ಎಂಬುವದು, ಎಂತ, ಇತ್ಯಾದಿ" ರೂಪಗಳು ವಾಕ್ಯದ ಮೇಲೆ ಶೇರಿ ನಾಮಾತ್ಮಕ ಅಧೀನ ವಾಕ್ಯಗಳಾದಾಗ ಆಖ್ಯೆಯಾಗಿಯಾಗಲಿ ಅಥವಾ ಆಖ್ಯಾತ ಸಮಾಪಕವಾಗಿಯಾಗಲಿ ಪ್ರಯೋಗಿಸುವದುಂಟು.

ಉದಾಹರಣೆ.

ಈ ಅದ್ಭುತವನ್ನು ನೋಡುವದಕ್ಕೆ ಹೋಗಬೇಕೆಂದು ಜನರು ಹೇಳಿದರು.

ಸಾಮ ದಾನ ಭೇದ ದಂಡ ಚತುರೋಪಾಯಗಳಿಂದ ಶತೃಗಳನ್ನು ಜಯಿಸಬೇಕೆಂಬುವದು ಕ್ಷತ್ರಿಯ ಧರ್ಮವಾಗಿದೆ.

ಶತೃವಿನೊಡನೆ ಸಂಧಿ ಮಾಡುವಾಗ ಆಣೆ ಭಾಷೆಗಳನ್ನು ಇಟ್ಟುಕೊಂಡಾದರೂ ಆತನನ್ನು ಜಯಿಸಬಹುದೆಂತ ಭಾರ್ಗವ ಋಷಿ ಹೇಳಿ ಇದ್ದಾನೆ.

ಇದಲ್ಲದೆ ಇಲ್ಲಿ ತಿಳಿಯಬೇಕಾದ ವಿಶೇಷವೇನಂದರೆ, ಅನೇಕ ನಾಮವಾಚಕಗಳನ್ನಾಗಲಿ ಗುಣವಾಚಕಗಳನ್ನಾಗಲಿ ಕ್ರಿಯಾ ವಿಶೇಷಣಗಳನ್ನಾಗಲಿ ಅಥವಾ ನಾಮಾತ್ಮಕ ಅಧೀನ ವಾಕ್ಯಗಳನ್ನಾಗಲಿ ಶೇರಿಸಿ ಹೇಳ

ಬೇಕಾದಾಗ ಮತ್ತು ಯೆಂಬ ಸಂಬಂಧ ಕಾವ್ಯಯದ ಸಂಜ್ಞೆಯಾದ "ಉ" ಎಂಬದನ್ನು ಪ್ರತಿಪದದ ಅಂತ್ಯಾಕ್ಷರದಲ್ಲಿಯೂ ಅಥವಾ ಪ್ರತಿವಾಕ್ಯದ ಅಂತ್ಯಾಕ್ಷರದಲ್ಲಿಯೂ ಶೇರಿಸಬೇಕು. ಆದರೆ ಕೆಲವು ಸ್ಥಳಗಳಲ್ಲಿ ಈ ಸಂಜ್ಞೆಯಾದ ಸ್ವರಕ್ಕೆ ಲಕಾರಾದೇಶಬರುವದು.

ಉದಾಹರಣೆ.

ಹೀಗಿರುವಲ್ಲಿ ರೋಷಾರುಣ ನೇತ್ರಗಳುಳ್ಳವನಾಗಿಯೂ ಮಹಾ ರೌದ್ರಾಕಾರಧರನಾಗಿಯೂ ಊರ್ಧ್ವಕೇಶವುಳ್ಳವನಾಗಿಯೂ, ದಂಷ್ಟ್ರಾಕರಾಳ ಮುಖವುಳ್ಳವನಾಗಿಯೂ ಇರುವ ಹಿಡಿಂಬನು ಈ ವೃತ್ತಾಂತವನ್ನು ಕೇಳಿದನು.

ಧರ್ಮಾರ್ಥಕಾಮಗಳಲ್ಲಿ ವೊಂದೊಂದನ್ನೇ ಆಚರಿಸುವದರಿಂದ ಪರಸ್ಪರ ವಿರೋಧ ಬರುವ ಕಾರಣ ಮೂರನ್ನೂ ಸಮವಾಗಿ ಆಚರಿಸಬೇಕೆಂತಲೂ, ಸತ್ಕರ್ಮವನ್ನಾಗಲಿ, ದುಷ್ಕರ್ಮವನ್ನಾಗಲಿ, ಮಾಡಿ ಐಶ್ವರ್ಯವನ್ನು ಹೊಂದಿ ಆ ಮೇಲೆ ಪಾಪನಿವಾರಣಾರ್ಥವಾಗಿ ಧರ್ಮವನ್ನೇ ಮಾಡಬೇಕೆಂತಲೂ ಕಣಿಂಗನು ಹೇಳಿದನು.

151. ಸಂಯುಕ್ತ ಕ್ರಿಯಾ ಪದಗಳ ಪ್ರಯೋಗವು ಹ್ಯಾಗೆ?

ಸಂಯುಕ್ತ ಕ್ರಿಯಾಪದಗಳಾದ ಕರ್ತ್ರರ್ಥಕ ಕರ್ಮಣ್ಯರ್ಥಕ ಕ್ರಿಯೆಗಳೂ ಇವುಗಳ ಕೃದ್ವಾಚಿ ಕೃನ್ನಾಮ ಕ್ರಿಯಾನಾಮ ಭಾವರೂಪ ನ್ಯೂನರೂಪ ವೆಂಬಿವುಗಳೆಲ್ಲಾ ಮೇಲೆ ಹೇಳಿರುವ ಆಯಾ ವಿಧಿಗಳ ಪ್ರಕಾರವೇ ಪ್ರಯೋಗಿಸಲ್ಪಡುವವು. ಇವುಗಳ ಉದಾಹರಣೆಗಳನ್ನೆಲ್ಲಾ ಆಯಾ ವಿಧಿಗಳಲ್ಲಿ ಕೊಟ್ಟಿರುವ ಹಾಗೆಯೇ ಊಹಿಸಿಕೊಳ್ಳುವದು.

152. ಕ್ರಿಯಾಪದಗಳ ಪ್ರಯೋಗದಲ್ಲಿನ್ನೇನಾದರೂ ವಿಶೇಷವುಂಟೋ?

ಕ್ರಿಯಾಪದಗಳಲ್ಲಿ, "ಕೊಳ್ಳು, ಕೊಡು, ಅಡು, ಇಡು, ಬಿಡು, ಹಾಕು, ಹೋಗು, ಬರು" ಎಂಬ ಧಾತುಗಳು ಬೇರೇ ಧಾತುಗಳ ನ್ಯೂನ ರೂಪಗಳ ಮೇಲೆ ಶೇರಿ ಸಮಾಸ ಕ್ರಿಯೆಯು ಹಾಗೆ ಎಲ್ಲಾ ಲಿಂಗವಚನ ರೂಪ ಭೇದಗಳನ್ನುಳ್ಳವುಗಳಾಗಿ ಬೇರೆ ಬೇರೆ ಅರ್ಥದಲ್ಲಿ ಪ್ರಯೋಗಿಸಲ್ಪಡುವವು.

ಇವುಗಳ ವಿಧಿಗಳು ಯಾವವಂದರೆ,—

೧. "ಕೊಳ್ಳ" ಎಂಬ ಧಾತುವು ಬೇರೆ ಧಾತುವಿನ ಭೂತನ್ಯೂನರೂಪದ ಮೇಲೆ ಶೇರಿ ಬಂದಾಗ ಕ್ರಿಯೆಯು ತನ್ನ ಸ್ವಂತ ಪ್ರಯೋಜನಕ್ಕೆ ಆಗಿದೆ ಎಂಬರ್ಥ ಕೊಡುವದು. ಈ ಕೊಳ್ಳು ಎಂಬ ಧಾತು ಶೇರಿದ ಕ್ರಿಯಾಪದಕ್ಕೆ ಆತ್ಮನೇಪದಿಯೆಂದು ಪ್ರಾಚೀನ ವೈಯಾಕರಣ ಸಂಕೇತವು.

ಉದಾಹರಣೆ.

ಹೇಳಿಕೊಳ್ಳು. ನಡೆದು ಕೊಳ್ಳು. ಕಲಿತ.ಕೊಳ್ಳು.

೨. "ಕೊಡು" ಎಂಬ ಧಾತುವು ಬೇರೆ ಧಾತುವಿನ ನ್ಯೂನರೂಪದ ಮೇಲೆ ಶೇರಿ ಬಂದಾಗ ನ್ಯೂನರೂಪದ ಕ್ರಿಯೆಯು ಇತರರ ಪ್ರಯೋಜನಕ್ಕಾಗಿ ನಡಿಯಿತು ಯೆಂಬರ್ಥ ಕೊಡುವದು.

ಉದಾಹರಣೆ.

ಕವಿಯು ಅರಸನಿಗೆ ಚಿತ್ರ ಕವಿತ್ವ ಮಾಡಿ ಕೊಟ್ಟನು.

೩. ಆಡು ಎಂಬ ಧಾತುವು ಇತರ ಧಾತು ನ್ಯೂನರೂಪದ ಮೇಲೆ ಸೇರಿ ನ್ಯೂನರೂಪದ ಕ್ರಿಯೆಯು ಉಭಯಪಾರ್ಶ್ವಗಳಲ್ಲಿ ಡೋಲಾಯಮಾನವಾಗಿ ನಡಿಯಿತೆಂದು ಅರ್ಥ ಕೊಡುತ್ತದೆ.

ಉದಾಹರಣೆ.

ಹುಡುಗನು ಪ್ರೋಡಾಡುತ್ತಾನೆ ಅಥವಾ ತಿರುಗಾಡುತ್ತಾನೆ.
ಜಟ್ಟಿಗಳು ಬಡಿದಾಡುತ್ತಾರೆ ಅಥವಾ ಬೈದಾಡುತ್ತಾರೆ.

೪. "ಇಡು, ಬಿಡು, ಹಾಕು" ಎಂಬ ಧಾತುಗಳು ಸಕರ್ಮಕ ಧಾತುಗಳ ನ್ಯೂನ ರೂಪದ ಅರ್ಥವು ಸಂಪೂರ್ಣವಾಗಿ ನಡಿಯಿತೆಂಬರ್ಥ ಕೊಡುವವು.

ಉದಾಹರಣೆ.

ವರ್ತಕನು ಸರಕನ್ನೆಲ್ಲಾ ಮಾರಿ ಬಿಟ್ಟನು.
ಅರಸನು ಪ್ರಧಾನಿಯನ್ನು ತೆಗದು ಹಾಕಿದನು.
ಕಳ್ಳನು ಚೋರ ದ್ರವ್ಯವನ್ನು ಬಚ್ಚಿಟ್ಟನು.

೫. "ಹೋಗು" ಎಂಬ ಧಾತುವು ಅಕರ್ಮಕ ಧಾತುಗಳ ನ್ಯೂನರೂಪದ ಮೇಲೆ ಸೇರಿ ನ್ಯೂನರೂಪದ ಅರ್ಥ ಸಂಪೂರ್ಣವಾಯಿತೆಂಬರ್ಥ ಕೊಡುವದು.

ಉದಾಹರಣೆ.

ಅವನು ಸುಳ್ಳು ಹೇಳುವದರಿಂದ ಕೆಟ್ಟು ಹೋದನು.

೬. "ಬರು, ಹೋಗು" ಎಂಬ ಧಾತುಗಳು ಬೇರೆ ಧಾತುಗಳ ನ್ಯೂನರೂಪದ ಮೇಲೆ ಸೇರಿ ಬಂದಾಗ ನ್ಯೂನ

ಕ್ರಿಯಾರ್ಥವು ಬಹು ಕಾಲದಿಂದ ನಡಿಯುತ್ತದೆಂಬ ರ್ಥವನ್ನೂ ಅಥವಾ ಬಹು ಕಾಲದ ವರೆಗೂ ನಡಿಯುವದೆಂಬರ್ಥವನ್ನೂ ಕೊಡುವವು.

ಉದಾಹರಣೆ.

ನಾನು ಸಾಲವನ್ನೆಲ್ಲಾ ತೀರಿಸುತ್ತಾ ಬರುತ್ತೇನೆ.

ಮಂತ್ರಿಯು ಅರಸನೊಡನೆ ತನ್ನ ಸುಖ ದುಃಖವನ್ನು ಹೇಳಿಕೊಂಡು ಬಂದನು.

ಈ ಕೆಲಸವು ಹೀಗೆಯೇ ನಡೆದು ಹೋಗುತ್ತದೆ.

ಅವ್ಯಯಗಳ ಪ್ರಯೋಗ. (*Uses of Particles*).

153. ಅವ್ಯಯಗಳ ಪ್ರಯೋಗವು ಹ್ಯಾಗೆ?

ಈ ವಿಷಯದಲ್ಲಿ ತಿಳಿಯಬೇಕಾದ ವಿಧಿಗಳು ಯಾವವಂದರೆ;

೧. ಕ್ರಿಯಾವಿಶೇಷಣಾವ್ಯಯಗಳಾದ ಸ್ಥಾನ ಕಾಲ ರೀತಿ ವಾಚಕಗಳು ಆಖ್ಯಾತವನ್ನು ವಿಶೇಷಿಸುವ ಏಕ ಪದವಾದ ಕ್ರಿಯಾವಿಶೇಷಣಗಳಾಗಿ ಯಾಗಲಿ ಅಧೀನ ವಾಕ್ಯಗಳ ತುದಿಯಲ್ಲಿ ಸೇರಿ ಪ್ರಧಾನವಾಕ್ಯದ ಆಖ್ಯಾತವನ್ನು ವಿಶೇಷಿಸುವ ಕ್ರಿಯಾ ವಿಶೇಷಣಾತ್ಮಕ ವಾಕ್ಯಗಳಾಗಿಯಾಗಲಿ ಪ್ರಯೋಗಿಸಲ್ಪಡುವವು.

ಉದಾಹರಣೆ.

ಉಪಾಧ್ಯಾಯನು ಹೆದರಿಸಿದರೆ ಹುಡುಗರು ಸುಮ್ಮನೆ ಇರುವರು.

ಈಗ ಗಾಳಿಯು ತಣ್ಣಗೆ ಬೀಸುವದು.

೨. ವಿಭಕ್ತ್ಯರ್ಥಕಾವ್ಯಯಗಳು ನಾಮಪದಗಳ ಷಷ್ಠೀ ವಿಭಕ್ತಿಯ ಸಂಗಡಲೂ, ಕೃದ್ವಾಚಿಗಳ ಸಂಗಡಲೂ ಸೇರಿ ಕ್ರಿಯಾ ವಿಶೇಷಣಗಳಾಗಿ ಯಾಗಲಿ ಅಥವಾ ಕ್ರಿ

ಯಾವಿಶೇಷಣಾತ್ಮಕ ಅಧೀನ ವಾಕ್ಯಗಳಾಗಿ ಯಾಗಲಿ ಪ್ರಯೋಗಿಸಲ್ಪಡುವವು.

ಉದಾಹರಣೆ.

ಗುರುವಿನ ಸಂಗಡ ಶಿಷ್ಯನು ಬಂದನು.

ಜನರೆಲ್ಲರೂ ಧೊರೆಯ ಹತ್ತರ ಹೋದರು.

ಅವನು ಪ್ರಯತ್ನ ಮಾಡಿದ ಕಾರಣ ಅದು ಸಫಲವಾಯಿತು.

೩. ಸಂಬಂಧ ಕಾವ್ಯಯಗಳು ವಾಕ್ಯಗಳನ್ನು ಪ್ರಾರಂಭಿಸುವದಕ್ಕೂ, ವಾಕ್ಯನಿರ್ಣಯ ಪ್ರಕರಣದಲ್ಲಿ ಹೇಳಿದ ಸಂಯೋಜಿತವಾಕ್ಯದಲ್ಲಿ ಬರುವ ಸಂಬಂಧ ವಾಕ್ಯಗಳನ್ನು ಕೂಡಿಸುವದಕ್ಕೂ ಪ್ರಯೋಗಿಸಲ್ಪಡುವವು.

ಉದಾಹರಣೆ.

ಇದಲ್ಲದೆ ಕವಿಗಳು ಉತ್ಪ್ರೇಕ್ಷೆ ಮಾಡುವದರಲ್ಲಿ ಸಮರ್ಥರು.

ದುಷ್ಟರು ತಾವು ಕೆಡುವದಲ್ಲದೆ ಜನರನ್ನು ಸಹ ಕೆಡಿಸುತ್ತಾರೆ.

ನೀವು ಹೇಳುವದೆಲ್ಲಾ ಸರಿಯೇ ಆದರೆ ಒಂದು ಉಪಾಯ ಮಾಡಬೇಕು.

೪. ಅರ್ಥ ಹೀನಧ್ವನಿತಾವ್ಯಯಗಳು ಮೃಗಗಳ ಕೂಗುಗಳನ್ನು ಹೇಳುವದಕ್ಕೂ ಭೇರ್ಯಾದಿ ಧ್ವನಿಗಳನ್ನು ತಿಳಿಸುವದಕ್ಕೂ ಕ್ರಿಯೆಯ ವೇಗವನ್ನು ತಿಳಿಸುವ ಕ್ರಿಯಾ ವಿಶೇಷಣಗಳಾಗಿ ವಾಕ್ಯದಲ್ಲಿ ಸೇರಿಸುವದಕ್ಕೂ ಪ್ರಯೋಗಿಸಲ್ಪಡುವವು.

ಉದಾಹರಣೆ.

ಕೋತಿಗಳು ಕಿಚ ಕಿಚ ಅನ್ನುತ್ತವೆ.

ಅಷ್ಟರಲ್ಲಿ ಧೊಂ ಯೆಂದು ತುಬಾಕಿ ಹಾಕಿದರು.

ಬಾಲಕನು ಚರ ಚರನೆ ಬರೆಯುತ್ತಾನೆ.

೫. ಭಾವನಿದರ್ಶಕಾವ್ಯಯಗಳು ಮನುಷ್ಯರ ದುಃಖ, ಸಂತೋಷ, ಮೆಚ್ಚಿಕೆ, ಜಿಹಾಸೆ ಮೊದಲಾದ ಭಾವಗಳನ್ನು ತಿಳಿಸುವದಕ್ಕೆ ಪ್ರಯೋಗಿಸಲ್ಪಡುವವು.

ಉದಾಹರಣೆ.

ಅಯ್ಯಯ್ಯೋ? ಎಂದು ಪ್ರಲಾಪಿಸಿದರು.

ಛೀ ಯೆಂದು ಅಸಹ್ಯ ಪಟ್ಟರು.

154. ಶಬ್ದ ಸಮಾಸಗಳ ಪ್ರಯೋಗವು ಹ್ಯಾಗೆ?

ಶಬ್ದ ಸಮಾಸಗಳು ಎರಡು ಮೂರು ಶಬ್ದಗಳು ಕೂಡಿ ಸಮಾಸವಾಗುವದರಿಂದ ನಾಮಪದಗಳ ಹಾಗೆಯೇ ವಿಭಕ್ತಿಗಳನ್ನು ಹೊಂದಿ ಆಖ್ಯೆಗಳಾಗಿಯೂ ಅಖ್ಯಾತ ಸಮಾಪಕಗಳಾಗಿಯೂ ಪದದಲ್ಲಿ "ಆದ ಉಳ್ಳ, ಇಲ್ಲದ" ಎಂಬ ಪ್ರತ್ಯಯಗಳುಳ್ಳದ್ದಾಗಿ ಗುಣವಾಚಕಗಳಾಗಿಯೂ "ಆಗಿ" ಎಂಬ ಪ್ರತ್ಯಯದೊಡನೆ ಸೇರಿ ಕ್ರಿಯಾ ವಿಶೇಷಣಗಳಾಗಿಯೂ ಸಂದರ್ಭಾನುಸಾರವಾಗಿ ಪ್ರಯೋಗಿಸಲ್ಪಡುವವು.

ಉದಾಹರಣೆ.

ಶ್ರೀಮತ್ಪೀತಾಂಬರಾಲಂಕೃತನಾದ ರಾಮನು ಕೋಟಿಸೂರ್ಯಸದೃಶ ತೇಜೋವಿರಾಜಿತನಾಗಿ ಪ್ರಕಾಶಿಸಿದನು.

155. ಈ ಪದಪ್ರಯೋಗದಲ್ಲಿನ್ನೇನಾದರೂ ವಿಶೇಷವುಂಟೋ?

ಮೇಲೆ ಹೇಳಿದ ನಾಮಪದ ಕ್ರಿಯಾಪದ ನ್ಯೂನರೂಪ ಕೃದ್ವಾಚಿ ಅವ್ಯಯ ಮೊದಲಾದ ಪದಗಳನ್ನು ಪ್ರಯೋಗಿಸುವದರಲ್ಲಿ ದೃಢಾರ್ಥವುಳ್ಳದ್ದಾಗಿಯೂ ಮುಖ್ಯವಾಗಿಯೂ ಹೇಳಬೇಕಾದಾಗ ಎಲ್ಲಾ ಪದಗಳ ತುದಿಯಲ್ಲಿಯೂ ಅವಧಾರಣಾರ್ಥಕ ಸಂಜ್ಞೆಯಾದ "ಏ" ಎಂಬ ಪ್ರತ್ಯಯವು ಸೇರಿಸಲಾಗುವದು, ಇದು

ಶೇರುವದರಲ್ಲಿ ಸಂಧಿ ಸೂತ್ರಾನುಸಾರವಾಗಿ ಶೇರಬೇಕಲ್ಲಗೆ ಕೆಲವು ಕಡೆ ಇದಕ್ಕೆ ಲ ಕಾರಾಗಮ ಬರುವದು.

ಉದಾಹರಣೆ.

ಸಾಧಾರಣ ರೂಪ.	ಅವಧಾರಣ ರೂಪ.
ಅವನಿಂದ	ಅವನಿಂದಲೇ
ಈಗ	ಈಗಲೇ
ಅವನು	ಅವನೇ
ನಿನ್ನದು	ನಿನ್ನದೇ
ರಾಮನನ್ನು	ರಾಮನನ್ನೇ

——:o:——

ಪದಪರ್ಯಾಯ. (*Order of words.*)

156. ವಾಕ್ಯದಲ್ಲಿ ಆಖ್ಯೆ ಮೊದಲಾದ ಪದಗಳನ್ನು ಬರೆಯುವ ಕ್ರಮವು ಹ್ಯಾಗೆ?

ಪದಗಳನ್ನು ವಿಧಿಗೆ ಅನುಸಾರವಾಗಿಯೂ ಕ್ರಮವಾಗಿಯೂ ಬರೆಯುವದು ಪದಪರ್ಯಾಯವೆನ್ನಿಸುವದು. ಈ ವಿಷಯದಲ್ಲಿ ತಿಳಿಯ ಬೇಕಾದ ವಿಧಿಗಳು ಯಾವವೆಂದರೆ—

೧ ಎಲ್ಲಾ ವಾಕ್ಯಗಳಲ್ಲಿಯೂ ಆಖ್ಯೆಯು ಆದಿಯಲ್ಲಿಯೂ ಆಖ್ಯಾತವು ಅಂತ್ಯದಲ್ಲಿಯೂ ಬರಬೇಕು.

ಉದಾಹರಣೆ.

ಹುಡುಗರು ಆಡುತ್ತಾರೆ. ವೃಕ್ಷಗಳು ಬೆಳೆಯುತ್ತವೆ.

೨ ಆಖ್ಯಾತವು ಸಕರ್ಮಕ ಧಾತುವಾಗಿದ್ದರೆ ಆಖ್ಯಾತ ಸಮಾಪಕವು ಆಖ್ಯೆಗೂ ಆಖ್ಯಾತಕ್ಕೂ ಮಧ್ಯದಲ್ಲಿ ಬರಬೇಕು.

ಉದಾಹರಣೆ.

ಚಿತ್ರಗಾರನು ಚಿತ್ರವನ್ನು ಬರೆಯುತ್ತಾನೆ.

೩ ಆಖ್ಯಾತವನ್ನು ವಿಶೇಷಿಸುವ ಕ್ರಿಯಾವಿಶೇಷಣಗಳೆಲ್ಲಾ ಆಖ್ಯಾತಕ್ಕೆ ಪೂರ್ವದಲ್ಲಿ ಬರಬೇಕು.

ಉದಾಹರಣೆ.

ನ್ಯಾಯಾಧಿಪತಿಯು ವಿವಾದವನ್ನು ಕ್ರಮವಾಗಿ ವಿಚಾರಿಸುತ್ತಾನೆ.

೪ ಆಖ್ಯೆಯ ವಿಶೇಷಣವು ಆಖ್ಯೆಗೆ ಪೂರ್ವದಲ್ಲಿಯೂ ಆಖ್ಯಾತಸಮಾಪಕವಾದ ವಿಶೇಷಣವು ಅದಕ್ಕೆ ಪೂರ್ವದಲ್ಲಿಯೂ ಇರಬೇಕು.

ಉದಾಹರಣೆ.

ನೀತಿಪರನಾದ ಮನುಷ್ಯನು ಶಾಸ್ತ್ರವಿರುದ್ಧವಾದ ಕೆಲಸಗಳನ್ನು ಮಾಡಲಾರನು.

೫ ಆಖ್ಯಾತವನ್ನು ವಿಶೇಷಿಸುವ ಕ್ರಿಯಾ ವಿಶೇಷಣಗಳು ಎರಡು ಮೂರು ಶೇರಿ ಬಂದಾಗ ಪೂರ್ವದಲ್ಲಿ ಕಾಲ ಕ್ರಿಯಾ ವಿಶೇಷಣವೂ ಇದಕ್ಕೆ ಉತ್ತರದಲ್ಲಿ ಸ್ಥಾನ ಕ್ರಿಯಾವಿಶೇಷಣವೂ ಬರುವವು.

ಉದಾಹರಣೆ.

ನಾನು ಈ ಸಾಯಂಕಾಲ ತೋಟಕ್ಕೆ ಜಾಗ್ರತೆಯಾಗಿ ಹೋಗುವೆನು.

೬ ಪ್ರಶ್ನಾರ್ಥಕ ವಾಚಕಗಳೆಲ್ಲಾ ಆಖ್ಯೆ; ಆಖ್ಯಾತಗಳ ಮಧ್ಯದಲ್ಲಿಯೇ ಬರುವವು. ಆದರೆ ಕ್ರಿಯಾಪದಗಳನ್ನು ಪ್ರಶ್ನಾರ್ಥಕ ವಾಚಕಗಳಾಗಿ ಪ್ರಯೋಗಿಸು

ವಾಗ ಪ್ರಶ್ನಾರ್ಥಕ ಸಂಜ್ಞೆಯಾದ "ಓ" ಎಂಬ ಸ್ವರವನ್ನು ಕ್ರಿಯಾಪದದ ಅಂತ್ಯಾಕ್ಷರಕ್ಕೆ ಶೇರಿಸುವ ಪದ್ಧತಿ ಉಂಟು.

ಉದಾಹರಣೆ.

ಅವನು ಯಾಕೆ ಬರಲಿಲ್ಲ. ಅವನು ಬಂದನೋ?

೭ ಆಖ್ಯೆಯು ಪ್ರಶ್ನಾರ್ಥಕವಾಗಿದ್ದರೆ ಕೆಲವು ಸ್ಥಳಗಳಲ್ಲಿ ಆ ವಾಕ್ಯದ ಆಖ್ಯಾತವಾದ ಧಾತುವನ್ನು ಕೃನ್ನಾಮವಾಗಿ ಪ್ರಯೋಗಿಸಿ ಪ್ರಶ್ನಾರ್ಥಕ ಸರ್ವನಾಮಗಳನ್ನು ವಾಕ್ಯದ ತುದಿಯಲ್ಲಿ ಶೇರಿಸುವದುಂಟು. ಇಂಥಾ ವಾಕ್ಯಗಳಲ್ಲಿ ಇರುಧಾತುವಿನ ರೂಪಗಳನ್ನು ಅಧ್ಯಾಹಾರವಾಗಿ ಊಹಿಸತಕ್ಕದ್ದು.

ಉದಾಹರಣೆ.

ಹೇಳಿದವನು ಯಾರು? ಬರುವದು ಯಾವದು?
ಹೇಳಿದವಳು ಯಾವಳು? ಯಾರು ಮಾಡಿದರು?
ಮಾಡಿದವರು ಯಾರು? ಯಾವಳು ಮಾಡಿದಳು?

ಇಲ್ಲಿ ತಿಳಿಯಬೇಕಾದ ಸಂಗತಿ ಯೇನಂದರೆ, ಕೃದ್ವಾಚಿಗಳನ್ನು ಪ್ರಯೋಗಿಸುವದರಲ್ಲಿ ಮಾಡಿದ ಮನುಷ್ಯನು ಎಂಬುವದಕ್ಕೆ ಬದಲಾಗಿ ಯಾವನು ಮಾಡಿದನೋ ಅವನು ಎಂಬದಾಗಿ ಕೃದ್ವಾಚಿಗಳಿಗೆ ಸಂಬಂಧ ಪಟ್ಟ ಪದಗಳನ್ನೆಲ್ಲಾ ಈ ರೀತಿಯಲ್ಲಿ ಬರೆಯುವ ಪದ್ಧತಿ ಉಂಟು. ಹೀಗೆ ಬರುವಾಗ ಕೃದ್ವಾಚಿ ವಿಶೇಷಣವೇ ಅಧೀನ ವಾಕ್ಯವಾಗಿ ಬರುವ ಕಾರಣ ಇವುಗಳನ್ನು ಇವುಗಳ ಅಧೀನ ವಾಕ್ಯಗಳೆಂದು

ತಿಳಿಯ ಬೇಕು. ಇವುಗಳೆಲ್ಲಾ ಪ್ರಯೋಗಗವ್ಯಗಳಾದಾಗ್ಯೂ ಸಂಶಯ ಪರಿಚ್ಛೇದವಾಗುವದಕ್ಕಾಗಿ ಇಲ್ಲಿ ಕೆಲವು ಉದಾಹರಣೆಗಳು ಬರೆಯಲ್ಪಟ್ಟವೆ.

ಉದಾಹರಣೆ.

ಯಾವನು ಹೇಳಿದನೋ ಅವನು=ಹೇಳಿದವನು
ಯಾರನ್ನು ತೊಂದರೆ ಪಡಿಸಿದರೋ ಅವರು=ತೊಂದರೆಪಟ್ಟವರು
ಎಲ್ಲಿಗೆ ಹೋಗುತ್ತಾರೋ ಅಲ್ಲಿ=ಹೋಗುವ ಸ್ಥಳದಲ್ಲಿ
ಯಾವಾಗ ಇದನ್ನು ತಿರಸ್ಕರಿಸಿದರೋ ಆಗ=ತಿರಸ್ಕರಿಸಿದಾಗ
ಯಾರಿಗೆ ಕೊಟ್ಟರೋ ಅವರು=ತಕ್ಕೊಂಡವರು.

ಆದರೆ ಪದ ಪರ್ಯಾಯದ ವಿಧಿಗಳು ಕಾವ್ಯಗಳಲ್ಲಿ ಪ್ರಯೋಗಿಸಲ್ಪಡಲಾರವು. ಕಾವ್ಯಗಳೆಲ್ಲಾ ಪ್ರಾಸಬದ್ಧವಾಗಿಯೂ ಛಂದೋಬದ್ಧವಾಯೂ ಇರಬೇಕಾದ್ದರಿಂದ ಯಥಾನ್ವಯವಾಗಿ ಇರಲಾರದಾಗಿ ಕಾವ್ಯಗಳೇ ಈ ವಿಧಿಗಳಿಗೆ ಪ್ರತಿಷೇಧಗಳೆಂದು ತಿಳಿಯತಕ್ಕದ್ದು.

ಪದಗಳ ಅರ್ಥವಿಚಾರ. (*Meanings of Words.*)

157. ಪದಗಳ ಅರ್ಥ ವಿಚಾರ ವೆಷ್ಟು ವಿಧವು ?

ವಾಕ್ಯದಲ್ಲಿ ಪ್ರಯೋಗಿಸುವ ಪದಗಳ ಅರ್ಥವು ರೂಢ ಯೋಗ ಯೋಗರೂಢವೆಂಬ ಮೂರು ವಿಧವು.

158. ರೂಢವೆಂದರೇನು ?

ನಿಘಂಟು ಉಪಮಾನ ಆಪ್ತವಾಕ್ಯ ಲೋಕ ವ್ಯವಹಾರ ವ್ಯಾಖ್ಯಾನ ಮೊದಲಾದ ಸಾಧನಗಳಿಂದಾಗುವ ಅರ್ಥವು ರೂಢವೆನ್ನಿಸುವದು.

ಉದಾಹರಣೆ.

ಮನೆ, ಕದ, ಕುದುರೆ, ಆನೆ, ಗಿಡ, ಬಾಕಲು, ತೋಟ, ಕುರಿ,

159. ಯೋಗವೆಂದರೆ ಏನು?

ಶಬ್ದೋತ್ಪತ್ತಿ ಪ್ರಕರಣದಲ್ಲಿ ಹೇಳಿದ ಹಾಗೆ ಶಬ್ದಗಳ ಮೂಲ ಧಾತುಗಳ ಅವಯವಾರ್ಥ ವಿಶೇಷಗಳಿಂದ ತಿಳಿಯುವ ಅರ್ಥವು ಯೋಗವೆನ್ನಿಸುವದು.

ಉದಾಹರಣೆ.

ಹೂವಾಡಿಗ	ವರ್ತಕ	ಕೋಪಿಷ್ಠ
ಜೂದಾಳಿ	ಬಾಯ್ಬಡುಕ	ಗುಣಶಾಲಿ

160. ಯೋಗರೂಢವೆಂದರೇನು?

ಅವಯವಾರ್ಥವೂ ಇದ್ದು ಸಮುದಾಯದಲ್ಲಿ ಬಹಳವಾಗಿ ರೂಢಿಯಿರುವದರಿಂದ ತಿಳಿಯುವ ಅರ್ಥವು ಯೋಗರೂಢವೆನ್ನಿಸುವದು.

ಉದಾಹರಣೆ.

ಪಂಕಜ ಭೂಪತಿ

ಇಲ್ಲಿ ಪಂಕಜವೆಂಬುವದಕ್ಕೆ ಅವಯವಾರ್ಥವಿದ್ದು ಆಯರ್ಥವು ಮತ್ಸ್ಯಾದಿಗಳಲ್ಲಿ ಪ್ರವರ್ತಿಸಿದಾಗ್ಯೂ ರೂಢಿಯು ಕಮಲಕ್ಕೆ ಮಾತ್ರ ಇರುವದರಿಂದ ಇದು ಯೋಗರೂಢವಾಯಿತು.

ಮೇಲೆ ಹೇಳಿದ ಈ ಮೂರು ವಿಧವಾದ ಅರ್ಥ ವಿಶೇಷಗಳಿಂದ ತಿಳಿಯುವ ಅರ್ಥವು ಶಕ್ಯವಾಗಿರುವದರಿಂದ ಇದಕ್ಕೆ ಶಕ್ಯಾರ್ಥವೆಂದು ಹೆಸರು. ಶಕ್ಯಾರ್ಥಕ್ಕೆ ವಾಚಕವಿಲ್ಲದೆ ಶಕ್ಯಸಂಬಂಧವನ್ನು ಹೇಳಿ ಅರ್ಥವನ್ನು ತಿಳಿಯುವದು ಲಕ್ಷಣೆಯೆನ್ನಿಸಿ ಕೊಳ್ಳುವದು.

161. ಲಕ್ಷಣೆ ಎಷ್ಟು ವಿಧವು ?

ಸಂಬಂಧ ನಿಬಂಧನೆಯೆಂತಲೂ ಸಾದೃಶ್ಯ ನಿಬಂಧನೆ ಎಂತಲೂ ೨ ವಿಧವು.

162. ಸಂಬಂಧ ನಿಬಂಧನೆ ಎಷ್ಟು ವಿಧವು ?

ಜಹಲ್ಲಕ್ಷಣೆ ಅಜಹಲ್ಲಕ್ಷಣೆ ಜಹದಜಹಲ್ಲಕ್ಷಣೆ ಯೆಂಬ ೩ ವಿಧವು.

163. ಜಹಲ್ಲಕ್ಷಣೆಯೆಂದರೇನು ?

ಪದದಶಕ್ಯಾರ್ಥ ಬೋಧಕ ವಿಲ್ಲದೆ ಅದಕ್ಕೆ ಸಂಬಂಧವಾದ ಮತ್ತೊಂದರ್ಥವನ್ನು ಬೋಧಿಸುವದು ಜಹಲ್ಲಕ್ಷಣೆ.

ಉದಾಹರಣೆ.

ಜಯಶೀಲನಾದ ಭೋಜರಾಯನ ಭೇರೀಪಟಹಧ್ವನಿಗಳನ್ನು ಕೇಳಿ ಸಾಮೀಪ್ಯ ಪಟ್ಟಣಗಳೆಲ್ಲಾ ಘಟ್ಟಿಯಾಗಿ ಮೊರೆಯಿಟ್ಟವು.

ಇಲ್ಲಿ ಪಟ್ಟಣಗಳೆಲ್ಲಾ ಮೊರೆಯಿಟ್ಟವು ಯೆಂಬದರಲ್ಲಿ ಅಚೇತನವಾದ ಪಟ್ಟಣಗಳು ಮೊರೆ ಇಡುವದು ಅಸಂಗತವಾದಕಾರಣ ಪಟ್ಟಣದಲ್ಲಿನ ಜನರು ಭಯಭ್ರಾಂತರಾಗಿ ಮೊರೆ ಯಿಟ್ಟರೆಂದು ಸಂಬಂಧಾರ್ಥ ಬಂದದರಿಂದ ಇದು ಜಹಲ್ಲಕ್ಷಣೆ.

164. ಅಜಹಲ್ಲಕ್ಷಣೆ ಹ್ಯಾಗೆ ?

ಪದದ ಶಕ್ಯಾರ್ಥವನ್ನು ಬಿಡದೆ ಅದನ್ನೂ ತಿಳಿಸಿ ಅದರ ಸಂಬಂಧ ಪದಗಳನ್ನು ಹೇಳದಿದ್ದರೂ ಅದರ ಅರ್ಥವನ್ನೂ ಬೋಧಿಸುವದು ಅಜಹಲ್ಲಕ್ಷಣೆ ಯೆನ್ನಿಸುವದು.

ಉದಾಹರಣೆ.

ಶೂದ್ರರೂ ವಿದ್ಯೆ ಕಲಿಯುತ್ತಾರೆ.

ಇಲ್ಲಿಶೂದ್ರರೂ ಇಂನ್ನೂಬೇರೆ ಬೇರೆ ಜಾತಿಯುವರೂ ಸಹ ವಿದ್ಯೆ ಕಲಿಯುತ್ತಾರೆಂದು ಇದರ ಸಂಬಂಧವಾದ ಪದಗಳ ಅರ್ಥವನ್ನು ಸಹ ಕೊಡುವದರಿಂದ ಇದು ಅಜಹಲ್ಲಕ್ಷಣೆ.

165. ಜಹದಜಹಲ್ಲಕ್ಷಣೆ ಹ್ಯಾಗೆ?

ಶಕ್ಯಾರ್ಥದಲ್ಲಿ ವಿಶೇಷಣಾರ್ಥವನ್ನು ಬಿಟ್ಟು ವಿಶೇಷ್ಯ ಪದಕ್ಕೆ ಸಾರ್ಥಿಕ್ಯವನ್ನು ತೋರಿಸುವದು ವೇದಾಂತಿಗಳ ಮತಾನುಸಾರವಾಗಿ ಜಹದಜಹಲ್ಲಕ್ಷಣೆಯನ್ನಿಸುವದು.

ಉದಾಹರಣೆ.

ಇವನೇ ನಾನು ಹೇಳಿದ ದೇವದತ್ತನು.

ಇಲ್ಲಿ ದೇವದತ್ತನ ವಿಷಯವಾಗಿ ಪರೋಕ್ಷದಲ್ಲಿ ನಡೆದಿರುವ ಪ್ರಶಂಸೆಯನ್ನು ಬೋಧಿಸಿ ನಿರ್ದೇಶಿಸುವದಾದ್ದರಿಂದ ವಿಶೇಷಣ ಪದದ ಅರ್ಥವು ಸ್ಪಷ್ಟ ವಾಗದೆ ವಿಶೇಷ್ಯಕ್ಕೆ ಮಾತ್ರ ಅರ್ಥವು.

166. ಸಾದೃಶ್ಯ ನಿಬಂಧನೆ ಎಷ್ಟು ವಿಧವು?

ಸಾರೋಪ ಲಕ್ಷಣೆಯೆಂತಲೂ ಸಾಧ್ಯವಸಾಯ ಲಕ್ಷಣೆಯೆಂತಲೂ ೨ ವಿಧವು.

167. ಸಾರೋಪ ಲಕ್ಷಣೆ ಹ್ಯಾಗೆ?

ಶಕ್ಯ ಪದಗಳನ್ನು ಪ್ರಯೋಗಿಸದೆ ವಿರೋಧವಾದದ್ದನ್ನು ನಿಶ್ಚಯಾರ್ಥಕದಲ್ಲಿ ಹೇಳುವದು ಸಾರೋಪವೆನ್ನಿಸುವದು.

ಉದಾಹರಣೆ.

ಈ ಅರಸನು ಸಿಂಹವು.

ಇಲ್ಲಿ ಅರಸನು ಸಿಂಹ ಸದೃಶನೆಂದರ್ಥವಾದ್ದರಿಂದ ಇದು ಸಾರೋಪವು.

168. ಸಾಧ್ಯವಸಾಯಲಕ್ಷಣೆ ಹ್ಯಾಗೆ?

ವಾಚ್ಯವಾದ ಪದಗಳನ್ನು ಬೇರೆ ವಾಚ್ಯವಾದ ಪದಗೆಳಲ್ಲಿ ಉತ್ಪ್ರೇಕ್ಷಿಸಿ ಹೇಳುವದು ಸಾಧ್ಯವಸಾಯವೆನ್ನಿಸುವದು.

ಉದಾಹರಣೆ.

ಲಕ್ಷ್ಮಿದೇವಿಯ ಕಣ್ಣುಗಳೆಂಬ ಚಕೋರ ಪಕ್ಷಿಗಳನ್ನು ಸಂತೋಷ ಪಡಿಸುವಂಥ ಭಕ್ತರ ಹೃದಯಗಳೆಂಬ ನೈದಿಲೆಗಳನ್ನು ವಿಕಸನೆ ಮಾಡುವಂಥ ಸರಸ ಕರುಣಾಮೃತವೆಂಬ ಕಳೆಗಳನ್ನು ಹೊಂದಿದ ಮುಗುಳು ನಗೆಯೆಂಬ ಬೆಳದಿಂಗಳನ್ನು ಪ್ರಸರಿಸುವಂಥ ಮಹಾ ವಿಷ್ಣುವಿನ ಮುಖವೆಂಬ ಚಂದ್ರನು ನಮಗೆ ಸಕಲೇಷ್ಟಗಳನ್ನು ಕೊಡಲಿ.

ಇಲ್ಲಿ ಕಣ್ಣುಗಳೆಂಬ ಚಕೋರಪಕ್ಷಿಗಳು ಹೃದಯಗಳೆಂಬ ನೈದಿಲೆಗಳು ಮುಗುಳು ನಗೆಯೆಂಬ ಬೆಳದಿಂಗಳು ಮುಖವೆಂಬ ಚಂದ್ರನು ಇವುಗಳೆಲ್ಲಾ ಉತ್ಪ್ರೇಕ್ಷಗಳಾದ್ದರಿಂದ ಸಾಧ್ಯವಸಾಯ ಲಕ್ಷಣೆಯೆಂದು ತಿಳಿಯುವದು.

ಮೇಲೆ ಹೇಳಿದ ಲಕ್ಷಣಾ ಭೇದಗಳು ಅಪರಮಿತವಾಗಿರುವದರಿಂದ ಅವುಗಳನ್ನೆಲ್ಲಾ ಬರೆಯುವದು ಗ್ರಂಥ ವಿಸ್ತರಕ್ಕೆ ಕಾರಣವಾಗುವದರಿಂದಲೂ, ಇವುಗ

ಳನ್ನು ಚನ್ನಾಗಿ ತಿಳಿಯಬೇಕಾದರೆ ಇದು ಅಲಂಕಾರ ಶಾಸ್ತ್ರ ಗಮ್ಯವಾದ್ದರಿಂದಲೂ, ಇಲ್ಲಿ ಸಂಕ್ಷೇಪವಾಗಿಬರದು ಇದೆ.

(PROSODY.)

VI. ಛಂದೋಲಕ್ಷಣ.

ಛಂದೋನಿರ್ಣಯ ಪ್ರಕರಣ. (*Kainds of Metre.*)

169. ಛಂದೋನಿರ್ಣಯ ಪ್ರಕರಣದಲ್ಲಿ ಏನು ಹೇಳಲ್ಪಡುತ್ತದೆ ?

ಪದ್ಯಗಳ ರೀತಿಯಂನ್ನು ತಿಳಿಯುವದಕ್ಕೆ ಸಾಧಕವಾದ ಗುರು ಲಘು ವರ್ಣಗಳ ಸ್ವರೂಪವೂ ಗಣಗಳ ಸ್ವರೂಪವೂ ಇವುಗಳ ಸಂಕೇತಗಳೂ ಛಂದೋ ನಿಬಂಧನೆಗಳೂ ಹೇಳಲ್ಪಡುತ್ತವೆ.

170. ಗುರು ಲಘು ವರ್ಣಗಳ ಸ್ವರೂಪವು ಹ್ಯಾಗೆ?

ಅಕ್ಷರಗಳಲ್ಲಿ ದೀರ್ಘಾಕ್ಷರವೂ ಸಂಯುಕ್ತಾಕ್ಷರದ ಹಿಂದಿನ ಹ್ರಸ್ವಾಕ್ಷರವೂ ಅನುಸ್ವಾರ ವಿಸರ್ಗಯುಕ್ತಗಳಾದ ಅಕ್ಷರಗಳೂ ಅರ್ಧಾಕ್ಷರದ ಹಿಂದಿನ ಹ್ರಸ್ವವೂ ವಿಕಲ್ಪವಾಗಿ ಪಾದದ ಕೊನೆಯ ಲಘು ಅಕ್ಷರವೂ ಗುರುವರ್ಣಗಳೆನ್ನಿಸುವವು. ಉಳಿದದ್ದೆಲ್ಲಾ ಲಘುವರ್ಣಗಳು. ಛಂದೋ ಲಕ್ಷಣದಲ್ಲಿ ಗುರುವರ್ಣವನ್ನು ನಿರ್ದೇಶಿಸುವದಕ್ಕೆ (೧) ಈ ಸಂಜ್ಞೆಯೂ ಲಘುವರ್ಣವನ್ನು ನಿರ್ದೇಶಿಸುವದಕ್ಕೆ—ಈ ಸಂಜ್ಞೆಯೂ ಪ್ರದರ್ಶಿಸಲ್ಪಡುವವು. ಆದರೆ ಇಲ್ಲಿ ತಿಳಿಯತಕ್ಕ ಅಂಶವೇನಂದರೆ ಇಂಗ್ಲಿಷ್ ಭಾಷೆಯ ಛಂದೋ ಲಕ್ಷಣ

ದಲ್ಲಿ ಗುರುವರ್ಣಕ್ಕೆ—ಈ ಸಂಜ್ಞೆಯನ್ನೂ ಲಘು ವರ್ಣಕ್ಕೆ (ᴗ) ಈ ಸಂಜ್ಞೆಯನ್ನೂ ತೋರಿಸುವ ಪದ್ಧತಿ ಇದ್ದಾಗ್ಯೂವೃತ್ತ ರತ್ನಾಕರಾದಿ ಛಂದೋ ಲಕ್ಷಣಗಳನ್ನನುಸರಿಸಿ ಹಿಂದೆ ವಿವರಿಸಿದಂತೆ ನಿರೂಪಿಸುವದರಲ್ಲಿಯೂ | ಹೀಗೆ ನಿಡುಗೀಟು ಇರಬೇಕಾದ ಲಘು ಸಂಜ್ಞೆಯನ್ನ ಮುದ್ರಾಪನೆಯ ಅನುಕೂಲಕ್ಕಾಗಿ—ಹೀಗೆ ಹಾಕಿ ಇದೆ.

ಉದಾಹರಣೆ.

— — — — — ᴗ — ᴗ ᴗ — ᴗ ᴗ — ᴗ

ಕ ಡಿ ದ ತ ಲೆ ೞೀ ೞ್ಗ ೞಿಂ ತೋೞ್ಗ ೞಿಂ ಬಾೞ್ಗ ೞಿಂ,

ಇದಕ್ಕೆ ಪ್ರತಿಷೇಧಗಳು:

“ಗ್ರ, ಕ್ರ, ಗರ್” ಯೆಂಬ ರೇಫವರ್ಣದ ಒತ್ತಕ್ಷರಗಳಹಿಂದಿನ ಅಕ್ಷರವು ಕೆಲವು ಕಡೆ ಗುರುವಾಗಿಯೂ ಕೆಲವು ಕಡೆ ಲಘುವಾಗಿಯೂ ಯೆಣಿಸಲ್ಪಡುವದು.

171. ಛಂದೋ ಲಕ್ಷಣದಲ್ಲಿ ಬರುವ ಮುಖ್ಯ ಸಂಕೇತಗಳು ಯಾವವು ?

“ಮಾತ್ರೆ, ಗಣ, ಪಾದ ಪದ್ಯ, ಪ್ರಾಸ” ಎಂಬ ೫ ಸಂಕೇತಗಳು.

172. ಮಾತ್ರೆಯಂದರೇನು ?

ಲಘುವರ್ಣವು ಒಂದು ಮಾತ್ರೆಯಾಗಿಯೂ ಗುರುವರ್ಣವು ಯೆರಡು ಮಾತ್ರೆವುಳ್ಳದ್ದಾಗಿಯೂ ಎಣಿಸಬೇಕು.

ಉದಹರಣೆ.

ಕೆಲಸಗಳು. ೫ ಮಾತ್ರೆಗಳು.

ದೇವಲೋಕ. ಎರಡು ಗುರುವುಗಳೂ ಎರಡು ಲಘುವುಗಳೂ ಇರುವದರಿಂದ ೬ ಮಾತ್ರೆಗಳು.

173. ಗಣವಂದರೆ ಯೇನು?

ಕೆಲವು ಮಾತ್ರೆಗಳ ಸಮುದಾಯವು ಗಣವೆನ್ನಿಸುವದು. ಅಂದರೆ ಯೆರಡು ಅಥವಾ ಮೂರು ಇಲ್ಲವೆ ನಾಲ್ಕು ಮತ್ತು ಐದು ಈ ಪ್ರಕಾರ ಸಂದರ್ಭಾನುಸಾರವಾಗಿ ಮಾತ್ರೆಗಳ ಶೇರುವಿಕೆಗೆ ಗಣವೆಂದು ಹೆಸರು.

174. ಪಾದವಂವರೆ ಯೇನು?

ವಿಧಿಗೆ ಅನುಸಾರವಾದ ಕೆಲವು ಗಣಗಳ ಕೂಟವು ಪಾದವೆಂದು ವರ್ತಿಸುವದು. ಇದಕ್ಕೆ ಚರಣವೆಂತಲೂ ಹೆಸರುಂಟು.

175. ಪದ್ಯವಂದರೆ ಯೇನು ?

ನಾಲ್ಕು ಪಾದಗಳಾಗಲಿ ಅಥವಾ ಆರು ಪಾದಗಳಾಗಲಿ ಉಳ್ಳದ್ದಾಗಿ ಲಕ್ಷಣ ಯುಕ್ತವಾದದ್ದು ಪದ್ಯವೆನ್ನಿಸುವದು. ಈ ಪದ್ಯಗಳಿಗೆ ವೃತ್ತಗಳೆಂತಲೂ ಹೆಸರುಂಟು. ವೃತ್ತಗಳಲ್ಲಿ ಸಮಾನವಾಗಿ ಗಣಗಳುಳ್ಳ ನಾಲ್ಕು ಪಾದಗಳುಳ್ಳದ್ದು ಸಮಪಾದ ವೃತ್ತವೆಂತಲೂ ವಿಷಮವಾಗಿ ಗಣಗಳುಳ್ಳ ನಾಲ್ಕು ಪಾದಗಳುಳ್ಳದ್ದು ವಿಷಮಪಾದ ವೃತ್ತವೆಂತಲೂ ಅನೇಕ ವೃತ್ತ ಜಾತಿಗಳುಂಟು. ಇವುಗಳ ವಿವರವೆಲ್ಲಾ ವೃತ್ತ ರಚನಾ ಪ್ರಕರಣದಲ್ಲಿ ವಿಶದವಾಗುವದು.

176. ಪ್ರಾಸವೆಂದರೆ ಯೇನು ?

ಪದ್ಯಗಳಲ್ಲಿ ಪ್ರತಿ ವೊಂದು ಪಾದದಲ್ಲಿಯೂ ಯೆರಡನೇ ಅಕ್ಷರವು ಪ್ರಾಸವೆನ್ನಿಸುವದು. ಅಂದರೆ ಪದ್ಯದ ಯೆಲ್ಲಾ ಪಾದಗಳ ಯೆರಡನೇ ಅಕ್ಷರವೂ ಸಜಾತೀಯವಾಗಿಯೇಇರಬೇಕೆಂಬುವದು.

ಉದಾಹರಣೆ.

ನಿಂದಿಸುವದುರ್ಜನರೆಂ ।
ದೊಂದು ಭಯಂ ಬೆತ್ತು ನಿರ್ಮಿಸನೆ ಕವಿಕೃತಿಯಂ॥
ಮಂದೇಹರ ಭಯದಿಂದರ ।
ವಿಂದಸಖಂ ನಿಜ ಮಯೂಖಮಂಪಸರಿಸನೆ ॥

ಈ ಪದ್ಯದ ಪ್ರತಿಪಾದದ ಎರಡನೇ ಅಕ್ಷರವೂ ದಕಾರವಾಗಿರುವದನ್ನು ನೋಡಿ ಹೀಗೆಯೇ ಯೆಲ್ಲಾ ಪದ್ಯಗಳಲ್ಲಿಯೂ ಪ್ರಾಸವನ್ನು ತಿಳಿಯುವದು.

177. ಗಣಗಳಲ್ಲಿ ಯೆಷ್ಟು ಭೇದಗಳು ?

೧ ಸಂಸ್ಕೃತ ಭಾಷಾನುಸಾರವಾಗಿ ಗಣಗಳಲ್ಲಿ ಮಗಣ, ಯಗಣ, ರಗಣ, ಸಗಣ, ತಗಣ, ಜಗಣ, ಭಗಣ, ನಗಣ ಯೆಂಬ ಯೆಂಟು ಗಣಗಳು ಅವೆ.

ಇವುಗಳ ವಿವರವು ಹ್ಯಾಗೆಂದರೆ ಪ್ರತಿ ಗಣದಲ್ಲಿಯೂ ಮೂರು ಅಕ್ಷರಗಳಿರಬೇಕು. ಹಾಗಿರುವಾಗ ಮೂರುಗುರುವರ್ಣಗಳುಳ್ಳದ್ದು ಮಗಣ ವೆಂತಲೂ—ಪ್ರಥಮವರ್ಣವು ಲಘುವಾಗಿದ್ದರೆ ಯಗಣ ವೆಂತಲೂ—ಮಧ್ಯಾಕ್ಷರವು ಲಘುವಾಗಿದ್ದರೆ ರಗಣ ವೆಂತಲೂ—ಅಂತ್ಯಾಕ್ಷರವು ಗುರುವಾಗಿದ್ದರೆ ಸಗಣವೆಂತಲೂ—

ಅಂತ್ಯಾಕ್ಷರವು ಲಘುವರ್ಣವಾಗಿದ್ದರೆ ತಗಣವೆಂತಲೂ—ಮಧ್ಯಾಕ್ಷರವು ಗುರುವರ್ಣವಾಗಿದ್ದರೆ ಜಗಣವೆಂತಲೂ—ಪ್ರಥಮಾಕ್ಷರವು ಗುರುವಾಗಿದ್ದರೆ ಭಗಣವೆಂತಲೂ—ಮೂರು ಲಘುವರ್ಣಗಳು ಸೇರಿದ್ದರೆ ನಗಣ ವೆಂತಲೂ—ತಿಳಿಯಬೇಕು.

ಉದಾಹರಣೆ.

ಹೆಸರುಗಳು.	ಸಂಜ್ಞೆಗಳು.	ಪದಗಳು.
ಮಗಣ	ᴗ ᴗ ᴗ	ಶ್ರೀರಾಮಃ
ಯಗಣ	— ᴗ ᴗ	ಸುವಾಕ್ಯಂ
ರಗಣ	ᴗ — ᴗ	ಕಾರಣಂ
ಸಗಣ	— — ᴗ	ಭುವನಂ
ತಗಣ	ᴗ ᴗ —	ಆಖ್ಯಾತ
ಜಗಣ	— ᴗ —	ಅಕಾಲ
ಭಗಣ	ᴗ — —	ಮಾರುತಿ
ನಗಣ	— — —	ಚಲನ

೨ ಕನ್ನಡ ಭಾಷೆಯ ರೀತಿಯಾಗಿ ಪ್ರಯೋಗಿಸುವ ಗಣಸಂಕೇತಗಳು ಮೂರು ವಿಧವಾಗಿವೆ. ಅವುಗಳು ಯಾವವೆಂದರೆ—ಗುರು ಲಘುವರ್ಣ ಸಮುದಾಯದಲ್ಲಿ ಅಕ್ಷರಗಳ ಸಂಖ್ಯೆಯುಲ್ಲದೆ ಕೇವಲ ಮಾತ್ರೆಗಳನ್ನೇ ಪ್ರಧಾನವಾಗಿ ನೆನಸಿ ಮೂರು ಮಾತ್ರೆಗಳುಳ್ಳ ತ್ರಿಮಾತ್ರಕ ಗಣಗಳೆಂತಲೂ—ನಾಲ್ಕು ಮಾತ್ರೆಗಳುಳ್ಳ ಚತುರ್ಮಾತ್ರಕ ಗಣಗಳೆಂತಲೂ—ಐದು ಮಾತ್ರೆಗಳುಳ್ಳ ಪಂಚಮಾತ್ರಕ ಗಣಗಳೆಂತಲೂ—ಮೂರು ವಿಧವಾಗಿವೆ.

ಉದಾಹರಣೆ.

ಹೆಸರುಗಳು.	ಸಂಜ್ಞೆಗಳು.	ಮಾತ್ರೆ.	ಪದಗಳು.
ತ್ರಿಮಾತ್ರಕಗಣ	‿ –	೩	ವಾದ್ಯ
ಚತುರ್ಮಾತ್ರಕ ಗಣ	– ‿ –	೪	ಬಲಿಷ್ಠ
ಪಂಚಮಾತ್ರಕಗಣ	– ‿ –	೫	ಜಯಶೀಲ

178. **ಛಂದಸ್ಸು ಅಂದರೆ ಯೇನು ?**

ಗುರುಲಘುವರ್ಣ ವ್ಯತ್ಯಾಸಗಳನ್ನು ನೆನಸದೆ ಯಾವದಾದರೂ ಒಂದು ಸಮಪಾದ ಪದ್ಯದ ಮೊದಲನೇ ಪಾದದಲ್ಲಿರುವ ಅಕ್ಷರಗಳನ್ನೆಲ್ಲಾ ಎಣಿಸಲಾಗಿ ಎಷ್ಟು ಅಕ್ಷರಗಳಾಗುವವೋ ಅಷ್ಟನೇ ಛಂದಸ್ಸಿನಲ್ಲಿ ಆ ಪದ್ಯವು ಹುಟ್ಟಿ ಇದೆ ಎಂದು ತಿಳಿಯಲಾಗುವದು. ಆದರೆ ಹಿಂದೂದೇಶೀಯ ಭಾಷೆಗಳಲ್ಲಿರುವ ಎಲ್ಲಾ ಸಮಪಾದ ವೃತ್ತಗಳನ್ನೂ ನೋಡಿದರೂ ಒಂದು ಪಾದದಲ್ಲಿ ೨೬ ಅಕ್ಷರಕ್ಕಿಂತ ಹೆಚ್ಚಾಗಿರುವದಿಲ್ಲವಾದ್ದರಿಂದ ೨೬ ಛಂದಸ್ಸುಗಳಿವೆಯೆಂದು ತಿಳಿಯಬೇಕು. ಇದಲ್ಲದೆ ಈ ೨೬ ಛಂದಸ್ಸುಗಳನ್ನು ಅನುಸರಿಸದೆ ಗಣ ಮಾತ್ರಾ ಪಾದಗಳೆಂಬ ನೀಮಗಳಿಗೆ ವ್ಯತಿರಿಕ್ತವಾಗಿ ಕೇವಲ ಪ್ರಾಸ ಬದ್ಧವಾಗಿರುವವುಗಳನ್ನೆಲ್ಲಾ ಕೀರ್ತನೆಗಳೆಂತಲೂ ದಂಡಕಗಳೆಂತಲೂ ದ್ವಿಪದೆಗಳೆಂತಲೂ ರಗಳೆಗಳೆಂತಲೂ ಪದಗಳೆಂತಲೂ ಗಾಥೆಗಳೆಂತಲೂ ಗದ್ಯಗಳೆಂತಲೂ ಊಹಿಸತಕ್ಕದ್ದು. ಮತ್ತು ಮೇಲೆ ಹೇಳಿದ ೨೬ ಛಂದಸ್ಸುಗಳ ಹೆಸರುಗಳ್ಯಾವವಂದರೆ,

ಛಂದೋನಾಮಗಳು.

೧ ಉಕ್ತಾ	೮ ಅನುಷ್ಟುಪ್	೧೫ ಅತಿಶಕ್ವರೀ	೨೧ ಪ್ರಕೃತಿ
೨ ಅತ್ಯುಕ್ತಾ	೯ ಬೃಹತೀ	೧೬ ಅಷ್ಟಿ	೨೨ ಆಕೃತಿ
೩ ಮಧ್ಯಾ	೧೦ ಪಙ್ಕ್ತಿ	೧೭ ಅತ್ಯಷ್ಟಿ	೨೩ ವಿಕೃತಿ
೪ ಪ್ರತಿಷ್ಠಾ	೧೧ ತ್ರಿಷ್ಟುಪ್	೧೮ ಧೃತಿ	೨೪ ಸಂಕೃತಿ
೫ ಸುಪ್ರತಿಷ್ಠಾ	೧೨ ಜಗತೀ	೧೯ ಅತಿಧೃತಿ	೨೫ ಅಭಿಕೃತಿ
೬ ಗಾಯತ್ರೀ	೧೩ ಅತಿಜಗತೀ	೨೦ ಕೃತಿ	೨೬ ಉತ್ಕೃತಿ
೭ ಉಷ್ಣಿಕ್	೧೪ ಶಕ್ವರೀ		

ಮೇಲೆ ಹೇಳಿದ ೨೬ ಛಂದಸ್ಸುಗಳಲ್ಲಿಯೂ ಹುಟ್ಟುವ ವೃತ್ತಗಳೆಲ್ಲಾ ಸಮಪಾದ ವೃತ್ತಗಳಾಗಿಯೇ ಇರುವವು. ಇವುಗಳಿಗೆ ಅತಿರಿಕ್ತವಾಗಿ ಬಂದೊಂದು ಪಾದವು ಬೇರೆ ಬೇರೆ ಲಕ್ಷಣಯುಕ್ತವಾಗಿ ಹುಟ್ಟುವ ಮಿಶ್ರ ವೃತ್ತಗಳಿಗೆ ವಿಷಮ ಪಾದ ವೃತ್ತಗಳೆಂದು ಹೆಸರು. ಈ ವೃತ್ತ ಜಾತಿ ಲಕ್ಷಣ ಭೇದಗಳೂ ಅವುಗಳ ಉದಾಹರಣೆಗಳೂ ವೃತ್ತ ರಚನಾ ಪ್ರಕರಣದಲ್ಲಿ ವಿಶದವಾಗುವವು.

2. ವೃತ್ತ ರಚನಾ ಪ್ರಕರಣ. (*Versification.*)

179. ವೃತ್ತರಚನಾ ಪ್ರಕರಣದಲ್ಲಿ ಏನು ಹೇಳಲ್ಪಡುತ್ತದೆ?

ವೃತ್ತ ಭೇದಗಳೂ ಅವುಗಳ ವಿಧಿಗಳೂ ಅವುಗಳಿಗೆ ಉದಾಹರಣೆಗಳೂ ಉದಾಹರಣೆಗಳಿಗೆ ಸರಿಯಾದ ಛಂದಃ ಪ್ರಸ್ತಾರಗಳೂ ಸಹ ಹೇಳಲ್ಪಡುತ್ತವೆ.

180. ವೃತ್ತಜಾತಿಗಳು ಎಷ್ಟು ವಿಧವು?

ಸಂಸ್ಕೃತ ಛಂದಶ್ಶಾಸ್ತ್ರಾನುಸಾರವಾಗಿ ವೃತ್ತ ನಿರ್ಣಯ ಪ್ರಕರಣದಲ್ಲಿ ಹೇಳಿದ ೨೬ ಛಂದೋ ಜಾತಗಳಲ್ಲಿಯೂ ಹುಟ್ಟಿದ ವೃತ್ತಗಳನ್ನು ಪ್ರಸ್ತಾರ ರೀತಿಯಾಗಿ ಸಂಖ್ಯೆ ಮಾಡಲಾಗಿ ೧೩ ಕೋಟಿಯೂ ೪೨ ಲಕ್ಷದ ೧೭ ಸಾವಿರದ ೭೨೬ ವೃತ್ತಗಳಾಗುವ ಸಮ ಪಾದ ವೃತ್ತಗಳಂತಲೂ—ಕನ್ನಡ ಭಾಷೆಯಲ್ಲಿ ವಾಡಿಕೆಯಾಗಿ ಪ್ರಯೋಗಿಸುವ ಷಟ್ಪದೀ ವೃತ್ತಗಳು ಮೊದಲಾದ ವಿಷಮ ಪಾದ ವೃತ್ತಗಳಂತಲೂ—೨ ಮುಖ್ಯ ಜಾತಿಗಳಿವೆ. ಆದರೆ ಛಂದೋ ಜಾತಗಳಾದ ಸಮಪಾದ ವೃತ್ತಗಳೆಲ್ಲಾ ಬಹಳ ವಾಡಿಕೆಯಲ್ಲಿರುವದಿಲ್ಲವಾದ್ದರಿಂದ ಅವುಗಳಲ್ಲಿ ಮುಖ್ಯವಾಗಿರುವ ಕೆಲವು ವೃತ್ತಗಳನ್ನು ಮಾತ್ರ ವಿಧಿ ಉದಾಹರಣೆ ಪ್ರಸ್ತಾರಗಳ ಸಹಿತವಾಗಿ ಬರದು ಇದೆ.

ಆದರೆ ಇಲ್ಲಿ ಉದಾಹರಣೆಯಾಗಿ ಬರೆಯುವ ಸಮಪಾದ ವೃತ್ತ ಲಕ್ಷಣವು ೪ ಪಾದಗಳಿಗೂ ಒಂದೇ ವಿಧವಾಗಿರುವ ಕಾರಣ ಒಂದು ಪಾದದ ಲಕ್ಷಣ ಪ್ರಸ್ತಾರಗಳನ್ನು ಬರದಿದೆ. ಅದೇ ಪ್ರಕಾರ ನಿಂತಪಾದಗಳನ್ನು ಊಹಿಸಲಾಗಿ ವೃತ್ತ ಪೂರ್ತಿಯಾಗುವದು.

ಸಮಪಾದ ವೃತ್ತಗಳು.

ಸಪ್ತಮ ಛಂದೋ ಜಾತವಾದ ವಿಭೂತಿ ವೃತ್ತ ಪ್ರರಗಣ ಜಗಣಗಳೂ ಒಂದು ಗುರು ವರ್ಣವೂ, ಕೂಡಿ ಆಗುವದು.

ವಿಭೂತಿ ವೃತ್ತ.

ಆವದೇ	ಶನಿಂಮ	ದಿಂ
‿—‿	—‿—	‿
ರಗಣ	ಜಗಣ	ಗುರು

ಏಕಾದಶಛಂದೋಜಾತವಾದ ಇಂದ್ರವಜ್ರಾ ವೃತ್ತವು ತಗಣ ತಗಣ ಜಗಣಗಳೂ ಎರಡು ಗುರುಗಳೂ ಕೇರಿ ಆಗುವದು.

ಇಂದ್ರ ವಜ್ರಾ ವೃತ್ತ.

ಈರೀತಿ	ಯಿಂದೋದಿ	ದೊಡಿಂದ್ರ	ವಜ್ರಂ
‿ ‿ —	‿ ‿ —	— ‿ —	‿ ‿
ತಗಣ	ತಗಣ	ಜಗಣ	೨ ಗುರು

ದ್ವಾದಶ ಛಂದೋ ಜಾತವಾದ ಭುಜಂಗ ಪ್ರಯಾತ ವೃತ್ತವು ನಾಲ್ಕು ಯಗಣಗಳನ್ನು ಕೇರಿಸಲಾಗಿ ಆಗುವದು.

ಭುಜಂಗ ಪ್ರಯಾತ ವೃತ್ತ.

ಸ ದಾ ಕಾ	ಲ ಮಿ ರೀ	ತಿ ಯೋ ಳ್ಮಾ	ಡು ತಿ ರ್ದಂ॥
— ‿ ‿	— ‿ ‿	— ‿ ‿	— ‿ ‿
ಯಗಣ	ಯಗಣ	ಯಗಣ	ಯಗಣ

ಚತುರ್ದಶ ಛಂದೋ ಜಾತವಾದ ವಸಂತ ತಿಲಕಾ ವೃತ್ತವು ತಗಣ ಭಗಣ ಜಗಣ ಜಗಣಗಳೂ ಎರಡು ಗುರುಗಳೂ ಕೇರಿಯೊಗುವದು.

ವಸಂತ ತಿಲಕಾ ವೃತ್ತ.

ತಾವಾಹಿ	ತಲ್ಪ ವಿ	ನತಾ ಸು	ತವಾ ಹ	ರಾಧಾ॥
‿ ‿ —	‿ — —	‿ — ‿	— ‿ —	‿ ‿
ತಗಣ	ಭಗಣ	ಜಗಣ	ಜಗಣ	೨ ಗುರು

ಪಂಚದಶ ಛಂದೋಜಾತವಾದ ಮಾಲಿನೀ ವೃತ್ತವು ನಗಣ ನಗಣ ಮಗಣ ಯಗಣ ಯಗಣಗಳನ್ನು ಶೇರಿಸಿ ಮಾಡಲಾಗುವದು.

ಮಾಲಿನೀ ವೃತ್ತ.

ನ ನ ಮ	ಯಯ ಗ	ಣಂಗಳ್ಮಾ	ಲಿ ನೀವೃ	ತ್ತ ಮಕ್ಕುಂ॥
— — —	— — —	∪ ∪ ∪	— ∪ ∪	— ∪ ∪
ನಗಣ	ನಗಣ	ಮಗಣ	ಯಗಣ	ಯಗಣ

ಸಪ್ತದಶ ಛಂದೋಜಾತವಾದ ಮಂದಾಕ್ರಾಂತವೃತ್ತವು ಮಗಣ ಭಗಣ ನಗಣ ತಗಣ ತಗಣಗಳನ್ನೂ ಎರಡು ಗುರುಗಳನ್ನೂ ಶೇರಿಸಿ ಮಾಡಲಾಗುವದು.

ಮಂದಾಕ್ರಾಂತ ವೃತ್ತ.

ಮಂದಾಕ್ರಾಂ	ತಂನೆ ಗ	ಳ್ ತಿ ಳೆ	ಯೊಳ್ಕಾವ್ಯ	ಕೌಶಲ್ಯ	ದಿಂದಂ॥
∪ ∪ ∪	∪ — —	— — —	∪ ∪ —	∪ ∪ —	∪ ∪
ಮಗಣ	ಭಗಣ	ನಗಣ	ತಗಣ	ತಗಣ	೨ ಗುರ

ಏಕೋನವಿಂಶತಿ ಛಂದೋಜಾತವಾದ ಶಾರ್ದೂಲ ವಿಕ್ರೀಡಿತ ವೃತ್ತವು ಮಗಣ ಸಗಣ ಜಗಣ ಸಗಣ ತಗಣ ತಗಣಗಳನ್ನೂ ವೊಂದು ಗುರುವನ್ನೂ ಶೇರಿಸಿ ಮಾಡಲಾಗುವದು.

ಶಾರ್ದೂಲ ವಿಕ್ರೀಡಿತ ವೃತ್ತ.

ನಿದ್ರಾಮು	ದ್ರಿತ ಸಾ	ಗಿರಲ್ತ	ಮಧುಪ	ದ್ವಂದ್ವಂಗ	ಳೊಳ್ಕಾಂತೆ	ಯರ್॥
∪ ∪ ∪	— — ∪	— ∪ —	— — ∪	∪ ∪ —	∪ ∪ —	∪
ಮಗಣ	ಸಗಣ	ಜಗಣ	ಸಗಣ	ತಗಣ	ತಗಣ	ಗುರು

ವಿಂಶತಿ ಛಂದೋ ಜಾತವಾದ ಮತ್ತೇಭ ವಿಕ್ರೀಡಿತ ವೃತ್ತವು ಸಗಣ ಭಗಣ ರಗಣ ನಗಣ ಮಗಣ

ಯಗಣಗಳನ್ನೂ ಲಘು ಗುರುಗಳನ್ನೂ ಕೂಡಿಸಿ ಮಾಡಲಾಗುವದು.

ಮತ್ತೇಭ ವಿಕ್ರೀಡಿತ ವೃತ್ತ.

ಕ್ಷಿ ತಿ ಯೋಳ್	ಕ್ಕಂಸಿಕ	ಮೆಂಬಪ	ಟ್ಟಣದ	ಧೀಶಂಪಾ	ಪಿಯೆಂತೆಂ	ಬಭೂ ॥
— — ◡	◡ — —	◡ — ◡	— — —	◡ ◡ ◡	— ◡ ◡	— ◡
ಸಗಣ	ಭಗಣ	ರಗಣ	ನಗಣ	ಮಗಣ	ಯಗಣ	ಲಘುಗುರು

ಇದೇ ಛಂದೋಜಾತವಾದ ಉತ್ಪಲಮಾಲಾ ವೃತ್ತವು ಭಗಣ ರಗಣ ನಗಣ ಭಗಣ ಭಗಣ ರಗಣಗಳನ್ನೂ ಲಘು ಗುರುಗಳನ್ನೂ ಶೇರಿಸಿ ಮಾಡಲಾಗುವದು.

ಉತ್ಪಲ ಮಾಲಾ ವೃತ್ತ.

ಆಗ ಳ	ವರ್ಷೋಡ	ರ್ದತುಳ	ದುಂದು ಭಿ	ಯುನ್ನತ	ಘೋಷವ	ಷ್ಟದಿಕ್ ॥
◡ — —	◡ — ◡	— — —	◡ — —	◡ — —	◡ — ◡	— ◡
ಭಗಣ	ರಗಣ	ನಗಣ	ಭಗಣ	ಭಗಣ	ರಗಣ	ಲಘುಗುರು

ಏಕ ವಿಂಶತಿ ಛಂದೋಜಾತವಾದ ಚಂಪಕಮಾಲಾ ವೃತ್ತವು ನಗಣ ಜಗಣ ಭಗಣ ಜಗಣತ್ರಯ ರಗಣಗಳನ್ನು ಶೇರಿಸಿ ಮಾಡಲಾಗುವದು.

ಚಂಪಕ ಮಾಲಾ ವೃತ್ತ.

ಬಿರಿತಿ	ರೆ ಬಟ್ಟೆ	ಯೊಳ್ಗುರುಗ	ಳೋರ್ವ	ರ ವರ್ಗಿ	ದಿರಾ ಗಿ	ನಾಲ್ವರುಂ ॥
- - -	- ◡ -	◡ - -	- ◡ -	- ◡ -	- ◡ -	◡ - ◡
ನಗಣ	ಜಗಣ	ಭಗಣ	ಜಗಣ	ಜಗಣ	ಜಗಣ	ರಗಣ

ಈ ಪ್ರಕಾರವೇ ಯೆಲ್ಲಾ ವೃತ್ತಗಳನ್ನೂ ಊಹಿಸಿಕೊಳ್ಳುವದಲ್ಲದೆ ಕೆಲವು ಕಡೆ ಮಾತ್ರಾ ಸಂಖ್ಯೆಯಿಂದಲೂ ಕೆಲ ಕಡೆ ಗುರು ಲಘು ಸಂಖ್ಯೆಯಿಂದಲೂ ಕೆಲ

ವೃತ್ತಗಳನ್ನು ಗಣ ಸಂಖ್ಯೆಯಿಂದಲೂ ಪ್ರಸ್ತರಿಸಿ ವೃತ್ತ ಜಾತಿಗಳನ್ನೂ ಛಂದೋ ನಿರ್ಣಯವನ್ನೂ ತಿಳಿಯಬೇಕು.

181. ವಿಷಮಪಾದ ವೃತ್ತಗಳ ಭೇದಗಳು ಯಾವವು.

ಇವುಗಳಲ್ಲಿ ಅನೇಕ ಭೇದಗಳಿದ್ದಾಗ್ಯೂ ಪ್ರಾಕ್ತನ ಮಹಾ ಕವಿಗಳಿಂದ ಕನ್ನಡ ಕಾವ್ಯಗಳಲ್ಲಿ ರೂಢಿಯಾಗಿ ಬರೆಯಲ್ಪಟ್ಟಿರುವ ಕೆಲವು ಮುಖ್ಯ ವೃತ್ತಗಳನ್ನು ಇಲ್ಲಿ ವಿಧಿ ಉದಾಹರಣೆ ಪ್ರಸ್ತಾರಗಳ ಸಹಿತವಾಗಿ ಬರೆದು ಇದ್ದೇವೆ. ಅವುಗಳು ಯಾವವೆಂದರೆ,—

೧ ಗುರು ಲಘುವುಗಳ ಭೇದವೆಣಿಸದೆ ಮಾತ್ರಾ ಸಂಖ್ಯಾನುಸಾರವಾಗಿ ಮೊದಲನೇ ಪಾದಕ್ಕೆ ೧೨ ಮಾತ್ರೆಗಳೂ, ಎರಡನೇ ಪಾದಕ್ಕೆ ೨೦ ಮಾತ್ರೆಗಳೂ, ತಿರಿಗಿ ಮೂರನೇ ಪಾದಕ್ಕೆ ೧೨ ಮಾತ್ರೆಗಳೂ, ೪ನೇ ಪಾದಕ್ಕೆ ೨೦ ಮಾತ್ರೆಗಳೂ ಸೇರಿಸಿ, ಪ್ರತಿ ಪಾದದಲ್ಲಿಯೂ ಎರಡನೇ ಅಕ್ಷರವನ್ನು ಪ್ರಾಸಬದ್ಧವಾಗಿ ಹೇಳಲು, ೬೪ ಮಾತ್ರೆಗಳುಳ್ಳ ವಿಷಮ ಪಾದ ವೃತ್ತವಾದ ಕಂದಪದ್ಯವಾಗುವದು.

ಕಂದಪದ್ಯ.

ಮಾತ್ರೆಗಳು.

ಬಂ ಧು ದ ಶ ಗ್ರೀ ವ ನ ಪ ದ । .. ೧೨
∪ — — ∪ ∪ — — — —
ದ್ವಂದ್ವಕೆ ಮ ಣಿದಾಡಿ ಅ ವ ಗೆ ಕೈಜೋಡಿ ಸುತಂ । ೨೦
∪ — — — ∪ — — — — — — ∪ ∪ — — ∪

ಮಾತ್ರೆಗಳು.

ನಿಂದು ಸ್ವಕೀಯರ ಮಾತು ಗ । ೧೨.

◡ — — ◡ — — ◡ — —

ಳಿಂ ದ ರು ಹ ಲು ಸೂಚಿ ಸ ದಿ ರೆ ಬ ಳಿ ಕಿಂತೆಂದಂ ॥ ೨೦

◡ — — — — ◡ — — — — — — ◡ ◡ ◡

೨. ಇದಲ್ಲದೆ ಕರ್ಣಾಟಕ ಮಹಾ ಕಾವ್ಯಗಳಲ್ಲಿ ಷಟ್ಪದಿಯೆಂಬ ಆರು ಪಾದಗಳುಳ್ಳ ವಿಷಮ ಪಾದ ವೃತ್ತಗಳು—ಶರ ಷಟ್ಪದಿ, ಕುಸುಮ ಷಟ್ಪದಿ, ಭೋಗ ಷಟ್ಪದಿ, ಪರಿವರ್ಧಿನಿ ಷಟ್ಪದಿ, ಭಾಮಿನಿ ಷಟ್ಪದಿ, ವಾರ್ಧಿಕ ಷಟ್ಪದಿ—ಯೆಂದು ೬ ವಿಧಗಳು.

ಅವುಗಳು ಯಾವವೆಂದರೆ,—

೧ ಪ್ರಥಮ ದ್ವಿತೀಯ ಚತುರ್ಥ ಪಂಚಮ ಪಾದಗಳಲ್ಲಿ ಎಂಟೆಂಟು ಮಾತ್ರೆಗಳೂ ತೃತೀಯ ಷಷ್ಠ ಪಾದಗಳಲ್ಲಿ ೧೪ ಮಾತ್ರೆಗಳೂ ಸೇರಿಸಿ ಪ್ರಾಸ ಬದ್ಧವಾಗಿ ರಚಿಸಲು ಶರ ಷಟ್ಪದಿಯಾಗಿರುವದು.

ಶರ ಷಟ್ಪದಿ.

ಮಾತ್ರೆಗಳು.

ನೂ ಕಿ ಸಿ ಮ ದ ನೋ । ೮

◡ — — — — ◡

ದ್ರೇ ಕ ವ ದ ಶ ಗ ಳ । ೮

◡ — — — — — —

ವಾ ಕೆ ಯ ತೊ ಲ ಗಿ ದು ಷೋ ಗ ಳ್ಕಂ । .. ೧೪

◡ — — — — — — ◡ ◡ ◡

ಶಾ ಕ ಮಾ ಲಾ ನ ನೆ । ೮

◡ — — ◡ — —

ಮಾತ್ರೆಗಳು.

ಭೀ ಕ ರ ಕೃ ತ್ಯ ಕೆ। .. ೮

∪ — — ∪ — —

ಶೋ ಕ ದೊ ಳ ಳ ವ ೞ ದಿಂತೆಂದಳ್ ॥ .. ೧೪

— — — — — — — ∪ ∪ ∪ ∪

೨ ಪ್ರಥಮ ದ್ವಿತೀಯ ಚತುರ್ಥ ಪಂಚಮ ಪಾದಗಳಲ್ಲಿ ಹತ್ತು ಹತ್ತು ಮಾತ್ರೆಗಳನ್ನೂ ತೃತೀಯ ಷಷ್ಠ ಪಾದಗಳಿಗೆ ೧೨ ಮಾತ್ರೆಗಳನ್ನೂ ಶೇರಿಸಿ ಪ್ರಾಸ ಬದ್ಧವಾಗಿ ರಚಿಸಲು ಕುಸುಮ ಷಟ್ಪದೀ ವೃತ್ತವೆನ್ನಿಸಿಕೊಳ್ಳುವದು.

ಕುಸುಮ ಷಟ್ಪದಿ.

ಮಾತ್ರೆಗಳು.

ಕು ಸು ಮ ಷ ಟ್ಪ ದಿ ಯ ಮೊ ದ .. ೧೦

— — — ∪ — — — — —

ಲೆ ಸೆ ವ ಪ ದ ಯು ಗ್ಮ ಕ್ಕೆ । .. ೧೦

— — — — — ∪ ∪ —

ದ ಶ ಮಾ ತ್ರೆ ಗ ಳ ಮೇ ಲ ನೊಂ ದೊಂ ದ ರ ॥ ೧೨

— — ∪ — — — ∪ — ∪ ∪ — —

ವಿ ಷ ಮ ಪ ದ ಗ ಳ ಲಿ ಷೋ । .. ೧೦

— — — — — — — — ∪

ಡ ಶ ಸಂ ಖ್ಯೆ ಮಾ ತ್ರೆ ಭಾ । ೧೦

— — ∪ — ∪ — ∪

ವಿ ಸಿ ನೋ ಡ ಲೀ ೞೀ ತಿ ರ ಚಿ ಸ ಲ ಹು ದು ॥ ೧೨

— — ∪ — ∪ ∪ — — — — — — —

ಇಲ್ಲಿ ಪಾದದ ಕೊನೆಲಘುವಕ್ಷರವು ಗುರುವಾಗಿ ಎಣಿಸಲ್ಪಟ್ಟಿದೆ.

೩ ಪ್ರಥಮ ದ್ವಿತೀಯ ಚತುರ್ಥ ಪಂಚಮ ಪಾದಗಳಲ್ಲಿ ಒಂದೊಂದಕ್ಕೆ ೧೨ ಮಾತ್ರೆಗಳನ್ನೂ ತೃತೀಯ

ಷಷ್ಠ ಪಾದಗಳಲ್ಲಿಒಂದೊಂದಕ್ಕೆ ೨೦ ಮಾತ್ರೆಗಳನ್ನು ಶೇರಿಸಿ ಪ್ರಾಸ ಬದ್ಧವಾಗಿ ರಚಿಸಿದರೆ ಭೋಗ ಷಟ್ಪದಿ ವೃತ್ತವೆನ್ನಿಸಿಕೊಳ್ಳುವದು.

ಭೋಗಷಟ್ಪದಿ.

ಮಾತ್ರೆಗಳು.

ಭೋ ಗ ಷ ಟ್ಪ ದಂ ಗ ಳೊ ಳ ಗೆ। .. ೧೨
∪ — ∪ — ∪ — — — —
ಜೇ ಗ ಮೊ ದ ಲ ಪಾ ದ ಯು ಗ್ಮ। .. ೧೨
∪ — — — — ∪ — ∪ —
ಕಾ ಗ ಳ ಕ್ಕು ಮಾ ಸ ಸಂ ಖ್ಯೆ ಮಾ ತ್ರೆ ಸ ಮಿ ತಿ ಯು। ೨೦
∪ — ∪ — ∪ — ∪ — ∪ — — — — —
ಮೇ ಗ ಣೊಂ ದ ರೊಂ ದು ಪಾ ದ। .. ೧೨
∪ — ∪ — ∪ — ∪ —
ಕಾ ಗ ಲೆ ಣಿ ಸ ಬ ಹು ದು ಮಾ ತ್ರೆ। .. ೧೨
∪ — — — — — — — ∪ —
ಯಾ ಗೆ ಮೊಂ'ದು ಕ ಡಿ ಮೆ ಯಿ ರ್ಪ ತ್ರಿ ಂತೆ ಯೂ ನವು॥ ೨೦
∪ — ∪ — — — — — ∪ ∪ — ∪ — —

೪ ಪ್ರಥಮ ದ್ವಿತೀಯ ಚತುರ್ಥ ಪಂಚಮ ಪಾದಗಳಲ್ಲಿ ಒಂದೊಂದಕ್ಕೆ ೧೬ ಮಾತ್ರೆಗಳನ್ನು ತೃತೀಯ ಷಷ್ಠ ಪಾದಗಳಲ್ಲಿ ಒಂದೊಂದಕ್ಕೆ ೨೬ ಮಾತ್ರೆಗಳನ್ನು ಶೇರಿಸಿ ಪ್ರಾಸ ಬದ್ಧವಾಗಿ ರಚಿಸಿದರೇ ಪರಿವರ್ಧಿನಿ ಷಟ್ಪದಿ ಯೆನ್ನಿಸಿಕೊಳ್ಳುವದು.

ಪರಿವರ್ಧಿನಿ ಷಟ್ಪದಿ.

ಮಾತ್ರೆಗಳು.

ಪ ರಿ ವ ರ್ಧಿ ನಿ ಷ ಟ್ಪ ದಿ ಗಾ ಮೊ ದ ಲ ಲಿ। .. ೧೬
— — ∪ — — ∪ — — ∪ — — — —

ಮಾತ್ರೆಗಳು.

ಯಿ ರ ಡು ಪ ದಂ ಗ ಳು ಷೋ ಡ ಶ ಮಾ ತ್ರೆ ಗ | ೧೬
— — — — ∪ — — ∪ — — ∪ — —

ಳಾರು ತ ರ ಮೂರಾರ ನೆಪ ದಯುಗ್ಮಕೆಲಘುವಿಪ್ಪತ್ತೈದು ೨೬
— — — — ∪ ∪ — — — — — ∪ — — — — ∪ ∪ ∪ —

ನಿ ರು ತಂ ಪ ದ ಮಾ ರುಂ ಗೂ ಡ ಲು ಶ ತ | ೧೬
— — ∪ — — ∪ ∪ ∪ ∪ — — —

ಮಿ ರೆ ಮೇ ಲ ಧಿ ಕಂ ಸಂ ಖ್ಯೆ ಗೆ ಮಾ ತ್ರೆ ಗ | ೧೨
— — ∪ — — ∪ ∪ — — ∪ — —

ಳಾರುತರ ಮಿಾಪರಿಯಿರಲಿದುಷಟ್ಪದಿಪರಿವರ್ಧಿನಿನಾಮಂ || ೨೬
— — — — ∪ — — — — — — ∪ — — — ∪ — — — ∪ ∪

೫ ಪ್ರಥಮ ದ್ವಿತೀಯ ಚತುರ್ಥ ಪಂಚಮ ಪಾದಗಳಲ್ಲಿ ಒಂದೊಂದಕ್ಕೆ ೧೪ ಮಾತ್ರೆಗಳನ್ನೂ ತೃತೀಯ ಷಷ್ಠ ಪಾದಗಳ ಒಂದೊಂದಕ್ಕೆ ೨೨ ಮಾತ್ರೆಗಳನ್ನೂ ಪೋಣಿಸಿ ಪ್ರಾಸಬದ್ಧವಾಗಿ ರಚಿಸಲು ಭಾಮಿನೀ ಷಟ್ಪದಿ ಯೆನ್ನಿಸಿಕೊಳ್ಳುವದು.

ಭಾಮಿನೀಷಟ್ಪದಿ.

ಮಾತ್ರೆಗಳು.

ಸ್ವ ಸ್ತಿ ಶ್ರೀ ಮ ದ್ರಾ ಜ ರಾ ಜ ಸ | .. ೧೪
∪ — ∪ ∪ ∪ — ∪ — —

ಮ ಸ್ತ ಗು ಣ ರಾ ಜಿ ತ ಸ ಹ ಸ್ರ ಗ | .. ೧೪
∪ — — — ∪ — — — ∪ — —

ಭಸ್ತ ವಂಶ ಲಲಾಮಸ ಕ ಲ ನೃಪಾಲಮಣಿಮಕುಟ || ೨೨
∪ — ∪ — — ∪ — — — — — ∪ — — — — — — —

ಮ ಸ್ತ ಕಾಂ ಘ್ರಿ ಸ ರೋ ಜ ಸೂ ನೃ ತ | .. ೧೪
∪ — ∪ — — ∪ — ∪ — —

ಮಾತ್ರೆಗಳು

ವಿ ಸ್ತ ರ ಣ ಸಾ ಕೇ ತ ಪು ರ ವಿ । .. ೧೪

⏑ — — — ⏑ ⏑ — — — ⏑

ಸ್ವೈ ಸ್ತ್ರೈ ವೈ ಭ ವನೃ ಪ ಗೆ ಬಿ ನ್ನ ಹ ಜ ನ ಕ ಭೂ ಪ ತಿ ಯು। ೨೪

⏑ — ⏑ — — — — ⏑ — — — — — ⏑ — — —

೬ ಪ್ರಥಮ ದ್ವಿತೀಯ ಚತುರ್ಥ ಪಂಚಮ ಪಾದಗಳಲ್ಲಿ ಒಂದೊಂದಕ್ಕೆ ೨೦ ಮಾತ್ರೆಗಳನ್ನೂ ತೃತೀಯ ಷಷ್ಠ ಪಾದಗಳಲ್ಲಿ ಒಂದೊಂದಕ್ಕೆ ೩೨ ಮಾತ್ರೆಗಳನ್ನೂ ಜೋಡಿಸಿ ಪ್ರಾಸಬದ್ಧವಾಗಿ ರಚಿಸಿದರೆ ವಾರ್ಧಿಕ ಷಟ್ಪದಿ ಯೆನ್ನಿಸಿಕೊಳ್ಳುವದು.

ವಾರ್ಧಿಕಷಟ್ಪದಿ.

ಮಾತ್ರೆಗಳು.

ಶಿ ಕ್ಷೆ ರ ಕ್ಷೆ ಗೆ ಕ ರ್ತು ವೈ ಷ್ಣ ವ ದ್ರೋ ಹಿ ಗ। ೨೦

⏑ — ⏑ — — ⏑ — ⏑ — — ⏑ — ⏑

ಳ್ಕ ಕ್ಷ ಮಂ ನೀ ನ ದ ರಿ ನ ರ್ಜು ನಂ ಭಾ ಗ ವ ತ । ೨೦

⏑ — ⏑ ⏑ — — — ⏑ — ⏑ ⏑ — — —

ಪ ಕ್ಷ ಕಗ್ರೇಸ ರಂ ತ ನ ಗೆ ಪಿ ತ ನಾ ತ ನಂ ಕೊಂ ದ ಕ ಥ

⏑ — ⏑ ⏑ — ⏑ — — — — ⏑ — ⏑ ⏑ — — — —

ದಿಂ ದ ಕೊ ಲೆ ಗೆ । ೩೧

⏑ — — — —

ದ ಕ್ಷ ನಾ ಂ ಪಿೂ ರಿ ದೊ ಡೆ ರಾ ಹು ವಿ ನ ಕ ಂ ಠ ಮ ಂ। ೨೦

⏑ — ⏑ ⏑ — — — ⏑ — — — ⏑ — ⏑

ತ ಕ್ಷ ಣ ದೊ ಳ ರಿ ದ ಂ ತೆ ಕ ತ್ತ ರಿ ಸು ಚ ಕ್ರ ದಿಂ। ೨೦

⏑ — — — — — — ⏑ — ⏑ — — ⏑ — ⏑

ಪ ಕ್ಷಿ ವಾ ಹ ನ ತ ನ್ನ ಕೊ ರ ಳ ನೆ ಂ ದಾ ಪಾ ರ್ಥ ಕೆ ಡಿ ದ

⏑ — ⏑ — — ⏑ — — — — ⏑ ⏑ ⏑ — — — —

ನ ಚ್ಯು ತ ನ ಡಿ ಯೊ ಳು॥ ೩೧

⏑ — — — — — —

ಈ ಪ್ರಕರಣಗಳಲ್ಲಿ ಉದಹರಿಸಿದ ವೃತ್ತಜಾತಿಗಳಲ್ಲ
ದೆ ಛಂದಶ್ಶಾಸ್ತ್ರ ಪ್ರಕಾರವಾಗಿ ಗಣಭೇದಗಳುಳ್ಳ
ಕೀರ್ತನೆ, ದಾಸರಪದ, ದಂಡಕ ಮುಂತಾದವುಗಳ
ನ್ನು ಮಾತ್ರ ಕ್ರಮದಿಂದಲಾದರೂ ಗಣಸಂಖ್ಯೆ
ಯಿಂದಲಾದರೂ ತಿಳಿಯುವದು ಸುಲಭ ಸಾಧ್ಯವಾ
ದ್ದರಿಂದ ಅವುಗಳನ್ನೆಲ್ಲಾ ಉದಹರಿಸಲಿಲ್ಲವಾಯಿತು.

ಹಳೇ ಕನ್ನಡ. (*old Kanarese.*)

ಹಳೇ ಕನ್ನಡ ಲಕ್ಷಣಗಳೆಲ್ಲಾ ಹೊಸಕನ್ನಡದ ಹಾಗೆಯೇ ಇರುತ್ತವೆ. ಅದರಲ್ಲಿ ನಾಮಪದಗಳಲ್ಲಿಯೂ ಕ್ರಿಯಾಪದಗೆಳಲ್ಲಿಯೂ ಪ್ರತ್ಯಯಗಳು ಮುಂತಾದ ಕೆಲವು ವ್ಯತ್ಯಾಸಗಳು ಜ್ಞೇಯಗಳಾಗಿರುತ್ತವೆ. ಅವುಗಳನ್ನೆಲ್ಲಾ ಇಲ್ಲಿ ಬರೆದಿರುವ ಉದಾಹರಣೆಗಳ ಪಟ್ಟಿಯಿಂದ ತಿಳಿಯಲಾಗುವದು. ನಿಂತ ಅಂಶಗಳೆಲ್ಲಾ ಹೊಸ ಕನ್ನಡದಂತೆಯೇ ಊಹಿಸಲಾಗಿ ತಿಳಿಯಬರುವದು.

ಅ ಕ್ಷ ರ ಗ ಳು .

ಹೊಸ ಕನ್ನಡದ ಅಕ್ಷರಗಳಲ್ಲದೆ ಈ ಕೆಳಗಿನ ರೂಪಗಳೂ ಬರೆಯುವದು.

ಅನುಸ್ವಾರ ಎಂಬುವದಕ್ಕೆ x
c
°°
ವಿಸರ್ಗ ,, ೱ
ರ ,, ಱ

ವಿಭಕ್ತಿ.	ಏಕವಚನ.	ಬಹುವಚನ.
ಪ್ರ.	ಬುಧಂ	ಬುಧರ್, ಬುಧರ್ಕಳ್
ಸಂ.	ಬುಧನೆ	ಬುಧರ್ಕಳೇ, ಬುಧರ್ಕಳಿರ. ಬುಧರೆ
ದ್ವಿ.	ಬುಧನಂ	ಬುಧರಂ
ತೃ.	ಬುಧನಿಂ	ಬುಧರಿಂ
	ಬುಧನಿಂದಂ	ಬುಧರಿಂದಂ
ಚ.	ಬುಧಂಗೆ	ಬುಧರ್ಗೆ ಬುಧರ್ಕಳ್ಗೆ ಬುಧರಿಂಗೆ
ಪಂ.	ಬುಧನತ್ತಣಿಂ	ಬುಧರತ್ತಣಿಂ
	ಬುಧನತ್ತಣಿಂದಂ	ಬುಧರ್ಕಳತ್ತಣಿಂದಂ
ಷ.	ಬುಧನ	ಬುಧರ ಬುಧರ್ಕಳ
ಸ.	ಬುಧನೊಳ್	ಬುಧರೊಳ್

ಸರ್ವ ನಾಮಗಳು.

	ಉತ್ತಮ ಪುರುಷ.	
	ಏಕವಚನ	ಬಹುವಚನ
ಪ.	ಆನ್, ಆಂ,	ಆಂ, ಆವ್
ದ್ವಿ.	ಎನ್ನಂ,	ಎಮ್ಮಂ,
ತೃ.	ಎನ್ನಿಂ, ಎನ್ನಿಂದಂ	ಎಮ್ಮಿಂ, ಎಮ್ಮಿಂದಂ
ಚ.	ಎನಗೆ, (ಣಿಂದಂ)	ಎಮಗೆ, ಎಮಗ
ಪಂ.	ಎನ್ನತ್ತಣಿಂ, ಎನ್ನತ್ತ	ಎಮ್ಮತ್ತಣಿಂ, ಎಮ್ಮತ್ತಣಿಂದಂ,
ಷ.	ಎನ್ನ, ಎನ್ನಯ	ಎಮ್ಮ, ಎಮ್ಮಯ
ಸ.	ಎನ್ನೊಳ್	ಎಮ್ಮೊಳ್
	ಮಧ್ಯಮ ಪುರುಷ.	
ಪ್ರ.	ನೀನ್, ನೀಮ್,	ನೀಮ್,
ದ್ವಿ.	ನಿನ್ನಂ, ನಿನ್ನರ್	ನಿಮ್ಮಂ, ನಿಮ್ಮರ್
ತೃ.	ನಿನ್ನಿಂ, ನಿನ್ನಿಂದಂ	ನಿಮ್ಮಿಂ, ನಿಮ್ಮಿಂದಂ
ಚ.	ನಿನಗೆ, ನಿಂಗೆ (ಣಿಂದಂ)	ನಿಮಗೆ
ಪಂ.	ನಿನ್ನತ್ತಣಿಂ, ನಿನ್ನತ್ತ	ನಿಮ್ಮತ್ತಣಿಂ, ನಿಮ್ಮತ್ತಣಿಂದಂ
ಷ.	ನಿನ್ನ, ನಿನ್ನಯ	ನಿಮ್ಮ, ನಿಮ್ಮಯ, ನಿಮ್ಮೊಳ್
ಸ.	ನಿನ್ನೊಳ್	ನಿಮ್ಮೊಳ್
	ಪ್ರಥಮ ಪುರುಷ.	
ಪ್ರ.	ಅವಂ, ಅವಳ್	ಅವಳ್, ಅವರ್ಗಳ್
ದ್ವಿ.	ಅವನಂ, ಅವಳಂ	ಅವರಂ, ಅವರ್ಗಳಂ
ತೃ.	ಅವನಿಂ, ಅವಳಂ	ಅವರಿಂ, ಅವರ್ಗಳಿಂದ
ಚ.	ಅವಂಗೆ, ಅವಳ್ಗೆ, ಅವಗೆ	ಅವರ್ಗೆ
ಪಂ.	ಅವಣತ್ತಣಿಂ, ಅವಳತ್ತಣಿಂ, ಅವನತ್ತಣಿಂದಂ, ಅವಳತ್ತಣಿಂದಂ	ಅವರತ್ತಣಿಂ, ಅವರತ್ತಣಿಂದಂ
ಷ.	ಅವನ, ಅವಳ	ಅವರ, ಅವರ್ಗಳ
ಸ.	ಅವನೊಳ್, ಅವಳೊಳ್	ಅವರೊಳ್, ಅವರ್ಗಳೊಳ್

ಹೀಗಿಯೇ ನಿಂತ ಯೆಲ್ಲಾ ಸರ್ವನಾಮಗಳಂ ಊಹಿಸಲಾಗುವವು.

ಪ್ರಶ್ನಾರ್ಥಕ ಸರ್ವನಾಮಗಳು.

	ಏಕವಚನ.	ಬಹುವಚನ.
ಪುಂ.	ಆವಂ	ಆರ್
ಸ್ತ್ರೀ.	ಆವಳ್	
ನಪುಂ.	ಆವುದು	ಆವುವು

ಪ್ರ. ಏನು. ಏತರ್. ದ್ವಿ. ಏನಂ. ತೃ. ಏತರಿಂ. ಚ. ಏತರ್ಕೆ
ಪಂ. ಏತರತ್ತಣಿಂ. ಷ. ಏತರ. ಸ. ಏತರೊಳ್.

ಕ್ರಿಯಾಪದಗಳು.

ಇಲ್ಲಿ ಬರೆದಿರುವ ಕ್ರಿಯಾ ರೂಪ ಭೇದಗಳು ಮುಖ್ಯ ವ್ಯತ್ಯಾಸಗಳಾಗಿರುವದರಿಂದ ಇವುಗಳ ಹಾಗೆಯೇ ಯೆಲ್ಲಾ ಧಾತುಗಳಿಗೂ ಊಹಿಸಲಾಗುವದು.

ಕೃದ್ವಾಚಿಗಳು.

ವರ್ತಮಾನ ಭವಿಷ್ಯತ್ತುಗಳು.	ಭೂತರೂಪಗಳು.
ಬರ್ಪ ಬಪ್ಪ	ಬಂದ
ಮಾಡುವ ಮಾಳ್ಪ ಮಾಳ್ವ	ಮಾಳ್ದ

ನ್ಯೂನಗಳು.

ಬರುತ್ತೆ	ಬಂದು
ಮಾಡುತ್ತೆ	ಮಾಡಿ ಮಾಳ್ದು

ಕ್ರಿಯಾನಾಮಗಳು.

	ವರ್ತಮಾನ	ಭೂತ
ಪುಂ.	ಬರುವಂ	ಬಂದಂ
ಸ್ತ್ರೀ.	ಬರುವಳ್	ಬಂದಳ್
ನಪುಂ.	ಬರುವುದು	ಬಂದುದು

ಹಳೇಕನ್ನಡ ಕ್ರಿಯಾರೂಪ ನಿಷ್ಪತ್ತಿ. ಕಟ್ಟುಧಾತುವು.

ಪುರುಷ.	ವರ್ತಮಾನ.		ಭೂತರೂಪ.		ಭವಿಷ್ಯದ್ರೂಪ.	
	ಏಕವಚನ.	ಬಹುವಚನ.	ಏಕವಚನ.	ಬಹುವಚನ.	ಏಕವಚನ.	ಬಹುವಚನ.
ಉ.	ಕಟ್ಟಿದಪೆನ್	ಕಟ್ಟಿದಪೆವು	ಕಟ್ಟಿದೆನ್	ಕಟ್ಟಿದೆವು	ಕಟ್ಟುವೆನ್	ಕಟ್ಟುವೆವು
ಮ.	ಕಟ್ಟಿದಪೆಯ್	ಕಟ್ಟಿದಪಿರ್	ಕಟ್ಟಿದೆಯ್	ಕಟ್ಟಿದಿರ್	ಕಟ್ಟುವೆಯ್	ಕಟ್ಟುವಿರ್
ಪ್ರ. ಪುಂ.	ಕಟ್ಟಿದಪಂ	ಕಟ್ಟಿದಪರ್	ಕಟ್ಟಿದಂ	ಕಟ್ಟಿದರ್	ಕಟ್ಟುವಂ	ಕಟ್ಟುವರ್
ಸ್ತ್ರೀ.	ಕಟ್ಟಿದಪಳ್	ಕಟ್ಟಿದಪರ್	ಕಟ್ಟಿದಳ್	ಕಟ್ಟಿದರ್	ಕಟ್ಟುವಳ್	ಕಟ್ಟುವರ್
ನ.	ಕಟ್ಟಿದಪುದು	ಕಟ್ಟಿದಪುವು	ಕಟ್ಟಿದುದು	ಕಟ್ಟಿದುವು	ಕಟ್ಟುವುದು	ಕಟ್ಟುವುವು

ಪುರುಷ.	ವಿಧಿರೂಪ.		ನಿಷೇಧರೂಪ.	
ಉ.	ಕಟ್ಟುವೆಂ	ಕಟ್ಟುವಂ	ಕಟ್ಟೆನ್	ಕಟ್ಟೆವು
ಮ.	ಕಟ್ಟು	ಕಟ್ಟಿಮ್		
	ಕಟ್ಟುವದೈ	ಕಟ್ಟುವದೈ	ಕಟ್ಟೆ	ಕಟ್ಟಿರ್
ಪ್ರ. ಪುಂ.	ಕಟ್ಟುಗೆ	ಕಟ್ಟುಗೆ	ಕಟ್ಟಂ	ಕಟ್ಟರ್
ಸ್ತ್ರೀ.	ಕಟ್ಟಲಿ	ಕಟ್ಟಲಿ	ಕಟ್ಟಳ್	ಕಟ್ಟರ್
ನ.	ಕಟ್ಟಲಿಂ	ಕಟ್ಟಲಿಂ	ಕಟ್ಟದು	ಕಟ್ಟವು

ಕೃದ್ವಾಚಿಗಳು.	
ಕಟ್ಟುವ	ಕಟ್ಟಿದ
ನ್ಯೂನಗಳು.	
ಕಟ್ಟುತ್ತೆ	ಕಟ್ಟಿದು
ಕ್ರಿಯಾನಾಮಗಳು.	
ಕಟ್ಟುವಂ	ಕಟ್ಟು
ಕಟ್ಟುವಳ್	ಕಟ್ಟಿದಳ್
ಕಟ್ಟುವದು	ಕಟ್ಟಿದುದು

ಅವ್ಯಯಗಳು.

ಹೊಸಗನ್ನಡ	ಹಳೇಕನ್ನಡ	ಹೊಸಗನ್ನಡ	ಹಳೇಕನ್ನಡ
ಆಗ	ಆಗಳ್	ಈಗ	ಈಗಳ್
ಯಾವಾಗ	ಯಾವಾಗಳ್	ಆಗ್ಯೆ	ಅನ್ನೆಗಂ
ಇದಲ್ಲದೆ	ಇದಲ್ಲದೆಯುಂ	ಮತ್ತು	ಮತ್ತಂ
ಆದರೆ	ಆದೊಡೆ	ಇದ್ದರೆ	ಇರ್ದೊಡೆ
ಇದ್ದಾಗ್ಯೂ	ಇರ್ದೊಡಂ	ಇದುವರಿಗೂ	ಇಂನೆಗಂ

ಇಲ್ಲಿ ತಿಳಿಯಬೇಕಾದ ಅಂಶವೇನೆಂದರೆ,—ಈ ಕರ್ನ್ನಾಟಕ ವಾಗ್ವಿಧಾಯಿನಿಯಲ್ಲಿ ಬರೆದಿರುವ ಹಳೇಕನ್ನಡದ ಮುಖ್ಯ ವ್ಯತ್ಯಾಸಗಳನ್ನು ತಿಳಿದರೆ ಸಾಧಾರಣವಾಗಿ ಹಳೇ ಕನ್ನಡದ ಭಾಷಾ ಭೇದಗಳು ವಿಶದವಾದಾಗ್ಯೂ ಇನ್ನೂ ಜ್ಞೇಯಗಳಾದ ಸೂಕ್ಷ್ಮ ವಿಚಾರಗಳು ತಿಳಿಯಬೇಕೆಂಬ ಕುತೂಹಲವುಳ್ಳವರು ಶಬ್ದಾನುಶಾಸನ ಕರ್ನ್ನಾಟಕ ಭಾಷಾ ಭೂಷಣ ಶಬ್ದಮಣಿ ದರ್ಪಣವೆಂಬ ಪ್ರಾಚೀನ ವ್ಯಾಕರಣಗಳನ್ನು ಕಲಿತು ಕಾವ್ಯಗಳನ್ನು ಓದಿದರೆ ವಿಶೇಷವಾಗಿ ಕರ್ನ್ನಾಟಕ ಭಾಷೆಯ ವ್ಯುತ್ಪತ್ತಿಯುಂಟಾಗುವದೆಂಬುವದು.

ಕರ್ನ್ನಾಟಕ ವಾಗ್ವಿಧಾಯಿನೀ ಸಮಾಪ್ತಾ.

GLOSSARY OF TERMS.

---:o:---

ಅಕ್ಷರ ಲಕ್ಷಣ ..	Orthography.
ಅನುಸ್ವಾರ ..	The nasal sign.
ಅಕರ್ಮಕ ಧಾತು ..	Intransitive verb.
ಅಧಿಕರಣ ವಿಭಕ್ತಿ ..	Locative case.
ಅಧೀನ ವಾಕ್ಯ ..	Subordinate sentence.
ಅಪಾದಾನ ವಿಭಕ್ತಿ ..	Ablative case.
ಅನ್ಯ ದೇಶ್ಯ ..	Foreign word.
ಅಪೂರ್ಣವರ್ತಮಾನ ರೂಪ ..	Present imperfect.
ಅಪೂರ್ಣ ಭೂತರೂಪ ..	Imperfect.
ಅಪೂರ್ಣ ಭವಿಷ್ಯತ್ ..	Future imperfect.
ಅಂಕಿತ ನಾಮ ..	Proper noun.
ಅರಿಸಮಾಸ ..	Hybrid compound.
ಅವ್ಯಯ ..	Indeclinable word.
ಅವ್ಯಯಾತ್ಮಕ ಕ್ರಿಯಾರೂಪ ..	Indeclinable verbal form.
ಅವ್ಯಯೀಭಾವ ..	Adverbial compound.
ಆಗಮ ..	Insertion.
ಆತ್ಮಾರ್ಥಕ ಸರ್ವನಾಮ ..	Reciprocal pronoun,
ಆದೇಶ ..	Change or permutation.
ಆನುಕೂಲ್ಯ ಸಂಬಂಧವಾಕ್ಯ ..	Copulative co-ordinate sentence.
ಉಭಯಾತ್ಮಕಸಂಬಂಧವಾಕ್ಯ. .	Disjunctive co-ordinate sentence.
ಏಕವಚನ ..	Singular number.
ಒತ್ತಕ್ಷರಗಳು ..	Double consonants.
ಓಷ್ಠ್ಯಗಳು ..	Labials.
ಕರ್ತೃವಿಭಕ್ತಿ ..	Nominative case.

ಕರ್ತ್ರರ್ಥಕ ರೂಪ ..	Active voice.
ಕರ್ಮಣ್ಯರ್ಥಕ ರೂಪ ..	Passive voice.
ಕರ್ಮವಿಭಕ್ತಿ ..	Objective case.
ಕಂಠ್ಯಗಳು ..	Gutturals.
ಕರಣವಿಭಕ್ತಿ ..	Iustrumental case.
ಕಾಗುಣಿತಾಕ್ಷರಗಳು ..	Syllables.
ಕಾಲವಾಚಕ ..	Adverb of time.
ಕೃದಂತ ..	Verbal derivative.
ಕೃದ್ವಾಚಿ ..	Participle.
ಕೃನ್ನಾಮ ..	Verbal noun.
ಕ್ರಿಯಾಪದ ..	Verb.
ಕ್ರಿಯಾನಾಮ ..	Verbal Noun.
ಕ್ರಿಯಾ ವಿಶೇಷಣ ..	Adverb.
ಕ್ರಿಯಾ ವಿಶೇಷಣಾತ್ಮಕವಾಕ್ಯ ..	Adverbial sentence.
ಗಣ ..	Poetical foot.
ಗುಣವಾಚಕ ..	Adjective.
ಗುಣಾತ್ಮಕ ವಾಕ್ಯ ..	Adjective sentence.
ಗುರು ..	Long accent.
ಛಂದಸ್ಸು ..	Metre.
ಜಹಲ್ಲಕ್ಷಣೆ ..	Metonomy.
ತರ ..	Comparative.
ತತ್ಸಮ ..	Pure Sanskrit.
ತದ್ಭವ ..	Corrupted Sanskrit.
ತತ್ಪುರುಷ ಸಮಾಸ ..	Determinate compound.
ತದ್ಧಿತಾಂತ ..	Nominal derivative.
ತಮ ..	Superlative.
ತಾಲವ್ಯಗಳು ..	Palatals.

ದಂತ್ಯಗಳು	Dentals.
ದ್ವಿಗುಸಮಾಸ	Numeral compound.
ದ್ವಿರುಕ್ತಿ	Repetition.
ದೀರ್ಘಾಕ್ಷರ	Long vowel.
ದ್ವಂದ್ವ ಸಮಾಸ	Collective compound.
ಧಾತು	Root.
ನಪುಂಸಕಲಿಂಗ	Neuter gender.
ನಾಮಪದ	Substantive.
ನಾಮವಾಚಕ	Noun.
ನಾಮಾತ್ಮಕ ಕ್ರಿಯಾರೂಪ	Nominalised verbal form.
ನಿದರ್ಶಕವಾಚಕ	Demonstrative adjective.
ನಿಷ್ಪನ್ನ ಗುಣವಾಚಕ	Declinable adjective.
ನಿಷೇಧ ರೂಪ	Negative mood.
ನ್ಯೂನ ರೂಪ	Gerund.
ಪದಗಳ ಅರ್ಥ ವಿಚಾರ	Meanings of words.
ಪರಿಮಾಣ ವಾಚಕ	Adjective of quantity.
ಪದ್ಯ	Stanza.
ಪರುಷ	Hard letter.
ಪುಂಲಿಂಗ	Masculine gender.
ಪುರುಷಾರ್ಥಕ ಸರ್ವನಾಮ	Personal pronoun.
ಪ್ರತ್ಯಯ	Affix.
ಪ್ರಶ್ನಾರ್ಥಕ ಸರ್ವನಾಮ	Interrogative pronoun.
ಪ್ರಶ್ನಾರ್ಥಕ ಗುಣವಾಚಕ	Interrogative adjective.
ಪ್ರತ್ಯಯಾಂತ ಧಾತು	Derivative adjective.
ಪ್ರಾಸ	Rhyme.
ಪ್ರೇರಕ ಧಾತು	Causal verbal root.
ಪೂರ್ಣವರ್ತಮಾನ ರೂಪ	Present perfect.

ಪೂರ್ಣಭೂತರೂಪ	Past perfect.
ಪೂರ್ಣಭವಿಷ್ಯತ್	Future perfect.
ಬಹು ವ್ರೀಹಿ	Possessive compound.
ಬಹುವಚನ	Plural number.
ಭವಿಷ್ಯದ್ರೂಪ	Future tense.
ಭಾವಿ	Contingent future.
ಭಾವರೂಪ	Infinitive.
ಭಾವ ನಿದರ್ಶಕಾವ್ಯಯ	Interjection.
ಮಾತ್ರೆ	Unaccented syllable.
ಮೂರ್ಧನ್ಯಗಳು	Nasals.
ಯೋಗ	Derivative meaning.
ಯೋಗರೂಢ	Primary meaning.
ರೂಢನಾಮ	Common noun.
ವಚನ	Number.
ವಾಕ್ಯಲಕ್ಷಣ	Syntax.
ವಾಕ್ಯನಿರ್ಣಯ	Structure of sentences.
ವಾಕ್ಯ ವಿಭಜದೆ	Analysis of sentences.
ವಿಭಕ್ತಿ	Case.
ವಿಭಕ್ತ್ಯರ್ಥಕಾವ್ಯಯ	Postposition.
ವಿಸರ್ಗ	Aspirate.
ವಿಷಮಪಾದ ವೃತ್ತ	Mixed metre.
ವ್ಯಂಜನ	Consonant.
ವ್ಯತಿರೇಕಾರ್ಥಕ ಸಂಬಂಧವಾಕ್ಯ	Adversative co-ordinate [sentence
ಶಬ್ದ ಲಕ್ಷಣ	Etymology.
ಶಬ್ದೋತ್ಪತ್ತಿ	Derivation of words.
ಶಬ್ದ ನಿರ್ಣಯ	Classification of words.
ಶಬ್ದ ಭೇದಗಳು	Parts of speech.

ಶಬ್ದಸಮಾಸ	Compound word.
ಶುದ್ಧಗುಣವಾಚಕ	Indeclinable adjective.
ಸ್ವರ	Vowel.
ಸಂಧಿ	Euphony.
ಸರ್ವನಾಮ	Pronoun.
ಸಂಖ್ಯಾವಾಚಕ	Numeral adjective.
ಸಂಖ್ಯಾ ನಿರ್ದಿಷ್ಟವಾಚಕ	Oridnal adjective.
ಸಂಯುಕ್ತ ಕ್ರಿಯಾಪದ	Compound verb.
ಸಕರ್ಮಕ ಧಾತು	Transitive verb.
ಸಂಪ್ರದಾನ ವಿಭಕ್ತಿ	Dative case.
ಸಂಬಂಧ ಕಾವ್ಯಯ	Conjunction.
ಸಂಬಂಧ ವಿಭಕ್ತಿ	Genitive case.
ಸಂಬೋಧನ ವಿಭಕ್ತಿ	Vocative case.
ಸಂಮಿಶ್ರಿತವಾಕ್ಯ	Complex sentence.
ಸಂಯೋಜಿತ ವಾಕ್ಯ	Compound sentence.
ಸಂಬಂಧವಾಕ್ಯ	Co-ordinate sentence.
ಸಮಪಾದವೃತ್ತ	Common metre.
ಸಾಮಾನ್ಯವಾಕ್ಯ	Simple sentence.
ಸಾಧ್ಯವಸಾಯ ಲಕ್ಷಣೆ	Metaphor.
ಸಾರೋಪ ಲಕ್ಷಣೆ	Prosopopœia or personification.
ಸಿದ್ಧ ಶಬ್ದ	Primitive words.
ಸಿದ್ಧ ಧಾತು	Primitive verbal root.
ಹಳೇ ಕನ್ನಡ	Old Kanarese.
ಹೇತ್ವರ್ಥಕ ಸಂಬಂಧ ವಾಕ್ಯ	Illative co-ordinate sentence.
ಹೊಸ ಕನ್ನಡ	Modern Kanarese.

